Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 114
ಶನಿವಾರ,25 ಏಪ್ರಿಲ್ 2026 | ಪುಟಗಳು: 19+4+4 | ಬೆಲೆ: ₹ 5.00
C

VK ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

Bennett & Coleman
THE TIMES OF INDIA

ಸಂಪಾದಕೀಯ EDITORIAL

ಹೆಚ್ಚಿದ ಮತ ವಿಶ್ವಾಸ

ದಾಖಲೆ ಮತಕ್ಕೆ ಇಂಧನವಾದ ಎಸ್‌ಐಆರ್

ಭಾರತದಂಥ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾನ ಎಂಬುದು ಕೇವಲ ಪ್ರಕ್ರಿಯೆಯಲ್ಲ, ಅದೊಂದು ಹಬ್ಬ. ಇತ್ತೀಚೆಗೆ ಪಶ್ಚಿಮ ಬಂಗಾಳ ಮೊದಲ ಹಂತ ಮತ್ತು ತಮಿಳುನಾಡಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ದಾಖಲಾಗಿರುವ ಮತದಾನದ ಪ್ರಮಾಣವು ಈ ಹಬ್ಬದ ಸಂಭ್ರಮವನ್ನು ಇಡೀ ವಿಶ್ವವೇ ಬೆರಗುಗಣ್ಣಿನಿಂದ ನೋಡುವಂತೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ದಾಖಲಾದ ಶೇ.91.91 ಮತ್ತು ತಮಿಳುನಾಡಿನಲ್ಲಿ ಕಂಡುಬಂದ ಶೇ.84.80ರಷ್ಟು ಮತದಾನವು ಸ್ವಾತಂತ್ರ್ಯ ನಂತರದ ಗರಿಷ್ಠ ಪ್ರಮಾಣ ಎನ್ನುವುದು ಭಾರತೀಯ ಪ್ರಜಾಪ್ರಭುತ್ವದ ಪಕ್ವತೆಗೆ ಸಾಕ್ಷಿಯಾಗಿದೆ. ಅಮೆರಿಕ, ಫ್ರಾನ್ಸ್ ಮತ್ತು ಜಪಾನ್‌ನಂಥ ಮುಂದುವರಿದ ರಾಷ್ಟ್ರಗಳಲ್ಲೇ ಮತದಾನದ ಪ್ರಮಾಣ ಇನ್ನೂ ಶೇ.70ರ ಗಡಿ ದಾಟಲು ಹೆಣಗಾಡುತ್ತಿರುವಾಗ, ಭಾರತದ ಮತದಾರರು ತೋರಿರುವ ಈ ಅಭೂತಪೂರ್ವ ಉತ್ಸಾಹವು ನಿಜಕ್ಕೂ ಹೆಮ್ಮೆಯ ವಿಷಯ.

ಈ ದಾಖಲೆ ಪ್ರಮಾಣದ ಮತದಾನದ ಹಿಂದೆ ಚುನಾವಣಾ ಆಯೋಗದ ದಕ್ಷತೆ ಮತ್ತು ದೂರದೃಷ್ಟಿಯ ಕ್ರಮಗಳು ಎದ್ದು ಕಾಣುತ್ತಿವೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಉಲ್ಲೇಖಿಸಿರುವಂತೆ, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ ಐಆರ್) ಈ ಯಶಸ್ಸಿನ ಮೂಲ ಪ್ರೇರಣೆಯಾಗಿದೆ. ಅರ್ಹ ಮತದಾರರನ್ನು ಗುರುತಿಸಿ ಪಟ್ಟಿಗೆ ಸೇರಿಸುವಲ್ಲಿ ಎಸ್‌ಐಆರ್ ಪ್ರಮುಖ ಪಾತ್ರ ವಹಿಸಿದೆ. ಇದರೊಂದಿಗೆ, ಮತಗಟ್ಟೆಗೆ ಬರುವ ಮತದಾರರಿಗೆ ಸುಲಭವಾಗುವಂತೆ ಆಯೋಗವು ಜಾರಿಗೆ ತಂದ ಮತದಾರಸ್ನೇಹಿ ಕ್ರಮಗಳು ಶ್ಲಾಘನೀಯ. ಇವಿಎಂ ಬ್ಯಾಲೆಟ್ ಪೇಪರ್ ಮೇಲೆ ಅಭ್ಯರ್ಥಿಗಳ ಬಣ್ಣದ ಭಾವಚಿತ್ರ ಅಳವಡಿಸಿರುವುದು, ಸುಲಭವಾಗಿ ಓದಬಲ್ಲ ಹೊಸ ವಿನ್ಯಾಸದ ಮತದಾರ ಮಾಹಿತಿ ಚೀಟಿ ಮತ್ತು ಪ್ರತಿ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆಯನ್ನು 1,200ಕ್ಕೆ ಮಿತಿಗೊಳಿಸಿರುವುದು ಮತದಾನದ ಪ್ರಕ್ರಿಯೆಯನ್ನು ಸರಳಗೊಳಿಸಿವೆ. ಇಂಥ ಸಣ್ಣ ಬದಲಾವಣೆಗಳು ಮತದಾರರಲ್ಲಿ ವಿಶ್ವಾಸವನ್ನು ಹೆಚ್ಚಿಸಿ, ಅವರನ್ನು ಮತಗಟ್ಟೆಯತ್ತ ಸೆಳೆಯುವಲ್ಲಿ ಯಶಸ್ವಿಯಾಗಿವೆ.

ದಾಖಲೆ ಮತದಾನವು ಕೇವಲ ಅಂಕಿ-ಅಂಶಗಳ ಏರಿಕೆಯಲ್ಲ, ಬದಲಾಗಿ ಸಾಮಾನ್ಯ ಪ್ರಜೆಗೆ ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಮೇಲಿರುವ ಅಚಲ ವಿಶ್ವಾಸದ ಪ್ರತೀಕವಾಗಿದೆ. ಕಾಲಕಾಲಕ್ಕೆ ನಡೆಯುವ ಎಸ್‌ಐಆರ್ ಪ್ರಕ್ರಿಯೆಯು ಎಷ್ಟು ಪಾರದರ್ಶಕವಾಗಿ ಮತ್ತು ನಿಖರವಾಗಿ ನಡೆಯುತ್ತದೆಯೋ, ಅಷ್ಟು ಹೆಚ್ಚು ಜನರ ಸಹಭಾಗಿತ್ವ ಸಾಧ್ಯವಾಗುತ್ತದೆ. ಬಂಗಾಳದ ಎರಡನೇ ಹಂತದ ಮತದಾನದಲ್ಲೂ ಇದೇ ಟ್ರೆಂಡ್ ಮುಂದುವರಿಯುವ ನಿರೀಕ್ಷೆಯಿದೆ. ಒಟ್ಟಿನಲ್ಲಿ, ತಾಂತ್ರಿಕ ಸುಧಾರಣೆ ಮತ್ತು ಜನರ ಜಾಗೃತಿ ಒಟ್ಟಾದಾಗ ಪ್ರಜಾಪ್ರಭುತ್ವದ ಅಡಿಪಾಯ ಮತ್ತಷ್ಟು ಗಟ್ಟಿಯಾಗುತ್ತದೆ ಎಂಬುದಕ್ಕೆ ಈ ಚುನಾವಣೆಗಳೇ ಸಾಕ್ಷಿ. ಮತದಾರರ ಪಟ್ಟಿಯ ಪರಿಷ್ಕರಣೆ ಮತ್ತು ಚುನಾವಣಾ ಸುಧಾರಣೆಗಳು ಇದೇ ಪಾರದರ್ಶಕತೆಯೊಂದಿಗೆ ಮುಂದುವರಿದಲ್ಲಿ, ಭಾರತವು ಜಗತ್ತಿಗೆ ಮಾದರಿಯಾದ ಪ್ರಜಾಪ್ರಭುತ್ವವಾಗಿ ಅಚಲವಾಗಿ ಉಳಿಯುವುದರಲ್ಲಿ ಸಂಶಯವಿಲ್ಲ.

ಬೋಧಿ ವೃಕ್ಷ

ವಿಶ್ವಾಸ ಬದುಕಿಗೆ ಬುನಾದಿ

ಕಣ್ಣಿಗೆ ಕಾಣದ ಬುದ್ಧಿಗೆ ಹೊಳೆಯದ ಪರಮ ಸತ್ಯ ಪರಮಾತ್ಮ. ಎಲ್ಲಿ ಶಾಂತಿ ನೆಮ್ಮದಿ ಇದೆಯೋ ಅಲ್ಲಿ ಪರಮಾತ್ಮ ನೆಲೆಸಿರುವನು. ಹೊರಗೆ ಬಿಸಿಲಿರಲಿ, ನೆರಳಿರಲಿ ಮನದಲ್ಲಿ ಯಾವಾಗಲೂ ಶಾಂತಿಯಿರಲಿ. ಜೀವನದ ತುಂಬ ಕಷ್ಟಗಳು ಎಷ್ಟೇ ಬಂದರೂ ನಮ್ಮಂತರಂಗದಲ್ಲಿ ಪ್ರಶಾಂತಿಯಿರಲಿ. ಹೊರ ಪ್ರಪಂಚದಲ್ಲಿ



ತಾಪತ್ರಯಗಳು ಅಸಂಖ್ಯ. ನಿಂದೆ ಮಾನಾಪಮಾನ ಜಯಾಪಜಯ ಮೊದಲಾದವು ಅಂತರಂಗದ ಅಳಲು. ಬಹಿರಂಗದ ಬವಣೆ ಅಂತರಂಗದ ಅಳಲು ಕಳೆದುಕೊಳ್ಳುವುದು ಅಷ್ಟು ಸುಲಭವಲ್ಲ. ಈ ಎಲ್ಲ ದ್ವಂದ್ವಗಳ ಮಧ್ಯದಲ್ಲಿ ಸಂತ ಮಹಂತರು ಪರಮ ಶಾಂತಿಯನ್ನು ಅನುಭವಿಸಿದರು.

ಈ ಜಗತ್ತು ಕತ್ತಲೆ- ಬೆಳಕು, ಸಿಹಿ-ಕಹಿ, ಪಾಪ- ಪುಣ್ಯ, ಒಳಿತು- ಕೆಡಕುಗಳ ಮಿಶ್ರಣ. ಗುಲಾಬಿ ಗಿಡದಲ್ಲಿ ಹೂವಿದೆ ಹಸಿರಿದೆ ಮುಳ್ಳೂ ಇದೆ. ಕೆಲವರ ಚಿತ್ತ ಹೂವಿನತ್ತ ಕೆಲವರ ಚಿತ್ತ ಮುಳ್ಳಿನತ್ತ. ಈ ಜಗತ್ತು ಒಂದು ಗುಲಾಬಿ ಗಿಡ. ಕೆಲ ಜನರು ಹೂವಿನಂತಿರುವ ಸ್ವರೂಪ ಕಾಣುತ್ತಾರೆ. ಇನ್ನು ಕೆಲವರು ಹಸಿರಂತಿರುವ ಸ್ವರೂಪ ಕಾಣುತ್ತಾರೆ. ಇನ್ನು ಕೆಲವರು ಮುಳ್ಳಿನಂತಿರುವ ಕುರೂಪವನ್ನೇ ಕಾಣುತ್ತಾರೆ. ಸೌಂದರ್ಯ ಕಂಡು ಸಂತಸಪಡಬೇಕೆ ಹೊರತು ಮುಳ್ಳು ಕಂಡು ಕೊರಗಬಾರದು. ಮನುಷ್ಯ ಎಷ್ಟೇ ದಿನ ಬದುಕಿರಲಿ. ಜೀವನೋತ್ಸಾಹ ಬತ್ತಬಾರದು. ಜೀವನದಲ್ಲಿ ಬೇಕು ಬೇಡಗಳೆರಡೂ ಇವೆ. ಈ ದೇಹ ಮನ ಬುದ್ಧಿಗಳೊಂದಿಗೆ ಈ ಜಗತ್ತಿನಲ್ಲಿ ಮನುಷ್ಯ ಬಾಳಬೇಕಾಗುತ್ತದೆ.

ಹರಿದು ಬರುವ ನೀರು ಮಾರ್ಗ ಮಧ್ಯದಲ್ಲಿ ಬರುವ ಕಲ್ಲು ಮುಳ್ಳು ಮರಳು ಎಲ್ಲ ಅಡೆತಡೆಗಳನ್ನು ಎದುರಿಸಿ ಮುನ್ನುಗ್ಗುತ್ತದೆ. ಅದೇ ರೀತಿ ಮನುಷ್ಯ ಜೀವನದಲ್ಲಿ ಪರ್ವತ ಪ್ರಾಯದ ತಾಪತ್ರಯಗಳು ಬಂದರೂ ಕುಗ್ಗದೇ ಛಲದಿಂದ ಮುನ್ನಡೆವ ಗುರಿಯಿರಬೇಕು. ವಿಶ್ವಾಸವು ಬದುಕಿಗೆ ಭದ್ರ ಬುನಾದಿ ಒದಗಿಸುತ್ತದೆ. ವಿಶ್ವಾಸದಿಂದ ಕೊಡುವ ನೀರು ಅಮೃತ ಸವಿ ಸಮಾನ. ವಿಶ್ವಾಸವಿಲ್ಲದ ಪಂಚಪಕ್ವಾನ್ನ ವಿಷ ಸದೃಶ. ವಿಶ್ವಾಸದಿಂದ ಜೀವನ. ಅವಿಶ್ವಾಸದಿಂದ ಜೀವನ ಅಂತ್ಯಗೊಳ್ಳುತ್ತದೆ. ಏರಿ ನೀರನ್ನು ಕಾಯಬೇಕು. ಬೇಲಿ ಬೆಳೆಯನ್ನು ರಕ್ಷಿಸಬೇಕು. ನಾರಿ ಮನೆಯನ್ನು ಕಾಯಬೇಕು. ತಾಯಿ ಮಗುವನ್ನು ಕಾಪಾಡಬೇಕು. ಅವರೆಲ್ಲರೂ ಕರ್ತವ್ಯವನ್ನು ವಿಶ್ವಾಸದಿಂದ ಮಾಡದೇ ದ್ರೋಹ ಅನ್ಯಾಯ ಮಾಡಿದ್ದಾದರೆ ನೀರು ನಿಲ್ಲದು. ಬೆಳೆ ಉಳಿಯದು. ಮಗು ಬಾಳಲಾರದು. ನಾರಿಯಿಂದ ಮನೆ ಉಳಿದು ಬೆಳೆಯದು. ವಿಶ್ವಾಸವುಳ್ಳ ಜನರು ಬಂಧು ಬಾಂಧವರು ಬದುಕಿನಲ್ಲಿ ದೊರಕಿದರೆ ಅದೊಂದು ಮಹಾಭಾಗ್ಯವೆಂದು 'ರೇಣುಕ ಗೀತೆ'ಯಲ್ಲಿ ಜಗದ್ಗುರು ರೇಣುಕಾಚಾರ್ಯರು ಪ್ರತಿಪಾದಿಸಿದ್ದಾರೆ. ವ್ಯಕ್ತಿ ಸಮಾಜ ಕುಟುಂಬ ದೇಶ ಎಲ್ಲದರ ಒಳಿತಿಗೆ ವಿಶ್ವಾಸ ಮುಖ್ಯವೆಂಬುದನ್ನು ಮರೆಯುವಂತಿಲ್ಲ.

ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು, ಬಾಳೆಹೊನ್ನೂರು

ವಿಕ ತಗೋ ಕನ್ನಡ

ಗುಮ್ಮನಗುಸುಕ, ಗುಮ್ಮನಗುಸಕ

ಗುಮ್ಮನೆ ಅಂದರೆ 'ಮೌನವಾಗಿ, ತೆಪ್ಪಗೆ'. ಕುಸುಕು (ಕುಸುಂಕು, ಕುಸಿಕು, ಕುಸುಕ್ಕು, ಕುಸುಗು) ಇದಕ್ಕೆ ಬಟ್ಟೆಯನ್ನು ಒಗೆಯುವಾಗ ಮೆಲ್ಲನೆ ಕುಕ್ಕು' ಎನ್ನುವುದರ ಜೊತೆಗೆ ಕುಟ್ಟು, ಗುದ್ದು, ಬಾರಿಸು, ಹೊಡೆ' ಎನ್ನುವ ಅರ್ಥಗಳು ಇವೆ. ಇವೆರಡು ಸೇರಿದ ನುಡಿಗಟ್ಟು 'ಗುಮ್ಮನಗುಸುಕ' – ಮೌನವಾಗಿ ಇತರರಿಗೆ ಹಿಂಸೆಮಾಡುವವನು. ಸಕ್ಕರೆ ಕಾಯಿಲೆ ಇರುವವರ ಮುಂದೆ ಬೇಕೆಂದೇ ಮೂರುನಾಲ್ಕು ಮೈಸೂರು ಪಾಕನ್ನು ತಿನ್ನುವಂತೆ. ನಮ್ಮ ಧಾರಾವಾಹಿಗಳಲ್ಲಿ ಒಂದಾದರೂ ಇಂಥ ಪಾತ್ರವಿರುತ್ತದೆ. ಅತ್ಯುತ್ತಮ ಗುಮ್ಮನಗುಸುಕ/ ಗುಸುಕಿ ಬಹುಮಾನ ಪಡೆದವರಿಗೆ ನಾವೂ ಚಪ್ಪಾಳೆ ತಟ್ಟಿರುತ್ತೇವೆ. ಏಕೆಂದರೆ, ಅವರು ನಮ್ಮ ಜೀವನದಲ್ಲಿ ಇಲ್ಲವಲ್ಲ ಅದಕ್ಕೆ! ಆದರೆ, ನಿಜಜೀವನದಲ್ಲೂ ಅನೇಕರು ಗುಮ್ಮನಗುಸುಕಗಳಾಗಿರುತ್ತಾರೆ. ಸಂದರ್ಭಾನುಸಾರ ನಾವುಗಳು ಕೂಡ! ಏಕೆಂದರೆ ನಾವು ಮನುಜರು! ಇದಲ್ಲದೆ, ಈ ನುಡಿಗಟ್ಟನ್ನು ಯಾರೊಂದಿಗೂ ಬೇರೆಯದೆ, ಒಂಟಿಯಾಗಿರುವ ಕೀಳರಿಮೆಯ ವ್ಯಕ್ತಿಗಳಿಗೂ ಅನ್ವಯಿಸುತ್ತಾರೆ. ಮೊದಲನೆಯದು ಹೆಚ್ಚು ಅರ್ಥಪೂರ್ಣ.

- ಜಿ.ವಿ. ಅರುಣ

– ಪದ ಸೂಚಿಸಿದವರು: ಗಿರಿಜಾ ರಾಜ್ ಬೆಂಗಳೂರು

ಬತ್ತಳಿಕೆ

ವಿಕ ಜೋಕ್ FALLS

ಡಾಕ್ಟರ್: ಇಂಜೆಕ್ಷನ್ ಬರೆದಿದ್ದರೂ, ನೀವು ಏಕೆ ಖರೀದಿಸಿಲ್ಲ?
ಸಂಗ್ಯಾ: ಶನಿವಾರ ಸೂಜಿ ಖರೀದಿಸಿದ್ರೆ, ಶನಿದೇವ್ರು ಕೋಪ ಮಾಡ್ಕೋತಾರೆ.
ಡಾಕ್ಟರ್: ಇಲ್ಲ ಬೇಗ ತನ್ನಿ, ಇಲ್ಲಾಂದ್ರೆ ಯಮದೇವ್ರು ಕೋಪ ಮಾಡ್ಕೋತಾರೆ!

ವಿದ್ಯಾರ್ಥಿ, ವಿದ್ಯಾರ್ಥಿನಿಯರಿಬ್ಬರಿಗೂ ಒಂದೇ ಕ್ಲಾಸ್‌ರೂಂ, ಒಂದೇ ಪಠ್ಯಪುಸ್ತಕ, ಆಯಾ ಸಬ್ಜೆಕ್ಟ್‌ಗೆ ಒಬ್ಬರೇ ಮೇಷ್ಟ್ರು, ಒಂದೇ ಪ್ರಶ್ನೆ ಪತ್ರಿಕೆ... ಆದರೆ, ಫಲಿತಾಂಶದಲ್ಲಿ ಮಾತ್ರ ವಿದ್ಯಾರ್ಥಿನಿಯರೇ ಮುಂಚೂಣಿ. ಪ್ರತಿಸಲದ ಫಲಿತಾಂಶಗಳಲ್ಲಿ ಹೆಣ್ಮಕ್ಕಳೇ ಏಕೆ ಮೇಲುಗೈ ಸಾಧಿಸುತ್ತಾರೆ? ಇದರ ಹಿಂದೆ ಅಡಗಿರುವ ಮನೋವೈಜ್ಞಾನಿಕತೆಯ ಗುಟ್ಟೇನು?

ಬಾಲಕಿಯರೇ ಬ್ರಿಲಿಯಂಟ್

ಹುಡುಗಿಯರೇಕೆ ಫಲಿತಾಂಶಗಳಲ್ಲಿ ಸದಾ ಮುಂದು?

ವಿಕ ಫೋಕಸ್

● ಡಾ. ಶ್ವೇತಾ ಬಿ.ಸಿ.

ಏಪ್ರಿಲ್ ಅಂದರೆ ಬರೀ ಬಿಸಿಲಿನ-ಬೆವರಿನ ಋತುವಲ್ಲ, ಅದು ಎಸ್ಸೆಸ್ಸೆಲ್ಸಿ, ಪಿಯುಸಿ ಫಲಿತಾಂಶಗಳೊಂದಿಗೆ ಹತ್ತಾರು ಕನಸುಗಳು ಹಣ್ಣಾಗುವ ಕಾಲ. ಯಾವುದೇ ಫಲಿತಾಂಶಗಳ ಪಟ್ಟಿಯನ್ನು ನೋಡಿ, ಹೆಣ್ಣುಮಕ್ಕಳೇ ಮುಂಚೂಣಿ ಸಾಧಿಸುವುದು ಇತ್ತೀಚಿನ ದಶಕಗಳ ದೊಡ್ಡ ಟ್ರೆಂಡ್. ಇದರ ಹಿಂದೆ ಕೇವಲ ಅದೃಷ್ಟವಿಲ್ಲ, ಬದಲಿಗೆ ಮಿದುಳಿನ ಅಚ್ಚುಕಟ್ಟಾದ ವಿನ್ಯಾಸ, ಕಲಿಕಾ ಶಿಸ್ತುಗಳು ಕೂಡ ಬಹುಮುಖ್ಯ ಕಾರಣ. ಆ ಕಾರಣಕ್ಕಾಗಿಯೇ ಫಲಿತಾಂಶ ಬಂದ ಮರುದಿನಗಳ ಪೇಪರ್ ಹೆಡ್‌ಲೈನ್ ಬಹುತೇಕ 'ಈ ಸಲವೂ ವಿದ್ಯಾರ್ಥಿನಿಯರದ್ದೇ ಮೇಲುಗೈ' ಎಂದೇ ಇರುತ್ತದೆ!

ಸ್ವಾಭಾವಿಕವಾಗಿ ಈ ಸಾಧನೆಗೆ ಹುಡುಗ ಹಾಗೂ ಹುಡುಗಿಯರಲ್ಲಿನ ಜೈವಿಕ ವ್ಯತ್ಯಾಸಗಳು ಕಾರಣ. ಅಲ್ಲದೆ, ಕೆಲವು ಮನೋವೈಜ್ಞಾನಿಕ ಸಂಶೋಧನೆಗಳ ಸೂಕ್ಷ್ಮ ವಿವರಣೆಗಳೂ ಇಲ್ಲಿ ಗಮನ ಸೆಳೆಯುತ್ತವೆ. ಹುಡುಗಿಯರ ಅಸಾಧಾರಣ ಬುದ್ಧಿ ಸಾಮರ್ಥ್ಯದ ಪಾತ್ರ ಇಲ್ಲಿ ಮುಖ್ಯವಾಗುವುದರೊಂದಿಗೆ ಈ ಶೈಕ್ಷಣಿಕ ಪ್ರಗತಿಯಲ್ಲಿ ಹುಡುಗಿಯರ ಸಂಜ್ಞಾನಾತ್ಮಕ, ವರ್ತನಾತ್ಮಕ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಅಂಶಗಳೂ ಅವರನ್ನು 'ಟಾಪರ್' ಆಗಿಸುತ್ತಿವೆ!

ಮನಸ್ಸಿನ ಲಗಾಮನ್ನು ತಕ್ಷಣ ಹಿಡಿಯಬಲ್ಲರು!

ಹುಡುಗಿಯರ ಈ ಗಮನಾರ್ಹ ಸಾಧನೆಗೆ ಮೊದಲ ಕಾರಣ, ಅವರಲ್ಲಿನ ಸ್ವಯಂ ನಿಯಂತ್ರಣ. ಶೈಕ್ಷಣಿಕ ಮನೋವಿಜ್ಞಾನದ ಅಧ್ಯಯನಗಳ ಪ್ರಕಾರ, ಹುಡುಗಿಯರು ಶಾಲಾ-ಕಾಲೇಜು ದಿನಗಳಲ್ಲಿ ಹುಡುಗರಿಗಿಂತ ಹೆಚ್ಚಿನ ಶಿಸ್ತು, ಸಂಯಮ, ಸಮಯ ನಿರ್ವಹಣೆ ಹಾಗೂ ನಿಗದಿತ ಗುರಿಯೆಡೆಗಿನ ಗಮನ ಹರಿಸುವಲ್ಲಿ ಹೆಚ್ಚು ತೊಡಗಿಸಿಕೊಂಡಿರುತ್ತಾರೆ. ಈ ರೀತಿಯಾಗಿ ತೊಡಗಿಸಿಕೊಳ್ಳುವುದು ಬದುಕಿನ ಭಾಗವಾದಾಗ ಉದಾಹರಣೆಗೆ ಓದಿನ ಕ್ರಮದ ಕುರಿತಾದ ಯೋಜನೆಯನ್ನು ಮಾಡುವುದು, ಪ್ರತಿ ವಿಷಯಗಳನ್ನು ಸರಿಯಾಗಿ ರಚಿಸಿಕೊಳ್ಳುವುದು, ಓದಿನೆಡೆಗಿನ ನಿರಂತರ ಗಮನ ನೀಡುವುದು ಇವೆಲ್ಲವೂ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳ ಫಲಿತಾಂಶಗಳಲ್ಲಿ ಹುಡುಗಿಯರ ಸೃಜನಾತ್ಮಕತೆ ಹಾಗೂ ಬುದ್ಧಿವಂತಿಕೆಯು ಸರಳವಾಗಿ ಹೊರಹೊಮ್ಮುವುದಕ್ಕೆ ಮುಖ್ಯ ಕಾರಣ. ಎಲ್ಲಕ್ಕಿಂತ ಹೆಚ್ಚಾಗಿ, ತಮ್ಮ ಮನಸ್ಸು ಏನು ಎಂಬುದನ್ನು ಚೆನ್ನಾಗಿ ಇವರು ಅರಿತಿರುವುದರಿಂದ, ಅದನ್ನು ಸುಲಭವಾಗಿ ನಿಯಂತ್ರಿಸಲಬಲ್ಲರು.

ಹೆಚ್ಚು ಆಂತರಿಕ ಪ್ರೇರಣೆ

ಪ್ರತಿ ವಿದ್ಯಾರ್ಥಿನಿಯೊಳಗೊಬ್ಬ ಕೌನ್ಸೆಲಿಂಗ್ ಮಾಸ್ಟರ್ ಇರುತ್ತಾನೆ. ಹೆಚ್ಚು ಆಂತರಿಕ ಪ್ರೇರಣೆ ಹೊಂದುವುದು ಹುಡುಗಿಯರ ಮೂಲ ಸ್ವಭಾವ. ಕಲಿಕೆಯನ್ನು ಅವರು ಕೇವಲ ಅವಶ್ಯಕತೆಯ ರೂಪದಲ್ಲಷ್ಟೇ ನೋಡುವುದಿಲ್ಲ ಬದಲಾಗಿ ಕಲಿಕೆಯನ್ನು ಅರ್ಥಪೂರ್ಣ ಪ್ರಕ್ರಿಯೆ ಎಂದೇ ಅವರು ಭಾವಿಸುತ್ತಾರೆ. ಇದೇ ಮನೋವಿಜ್ಞಾನದ 'ಅಚೀವ್‌ಮೆಂಟ್ ಗೋಲ್ ಥಿಯರಿ' (ಸಾಧನೆಯ ಗುರಿ ಸಿದ್ಧಾಂತ). ಅಂದರೆ, ಈ ಸಿದ್ಧಾಂತವು ಪರಿಣತಿ ಆಧಾರಿತ ಕಲಿಯುವಿಕೆ (ಅರ್ಥೈಸಿಕೊಳ್ಳುವಿಕೆಯ ಮೇಲೆ ಗಮನಹರಿಸುವುದು) ಹಾಗೂ ಕಾರ್ಯಕ್ಷಮತೆ ಆಧಾರಿತ ಕಲಿಕೆ (ಫಲಿತಾಂಶದ ಮೇಲೆ ಗಮನಹರಿಸುವುದು) ಇವೆರಡರ ನಡುವಿನ ವ್ಯತ್ಯಾಸವನ್ನು ಪ್ರತಿಪಾದಿಸುತ್ತದೆ. ಇಲ್ಲಿ ಹುಡುಗಿಯರು ಪರಿಣತಿ ಆಧಾರಿತ ಕಲಿಕೆಯಲ್ಲಿ ಹೆಚ್ಚು ಮಗ್ನರಾಗಿರುತ್ತಾರೆ. ಹೀಗೆ ಮಾಡುವುದು ಓದುವ ವಿಷಯ ಹಾಗೂ ವಸ್ತುಗಳ ಜತೆಗೆ ದೀರ್ಘಕಾಲ ನೆನಪಿಟ್ಟುಕೊಳ್ಳುವಿಕೆಗೆ ಸಹಾಯಕವಾಗಿರುವುದರಲ್ಲಿ ಎರಡು ಮಾತಿಲ್ಲ. ಮನೆಯಲ್ಲಿ ಯಾರು ಒತ್ತಡ ಹಾಕಲಿ, ಬಿಡಲಿ, ಹೆಚ್ಚು ಶ್ರಮ ವಹಿಸುವುದು ಅವರಿಗೆ ರೂಢಿಯಾಗಿರುತ್ತದೆ.

AI ಚಿತ್ರ

ತರಗತಿಯಲ್ಲಿನ ವರ್ತನೆ ಹಾಗೂ ಅನುಸರಣೆ

ಹೌದು. ತರಗತಿಯಲ್ಲಿ ಮಕ್ಕಳ ವರ್ತನೆ ಹಾಗೂ ಆದೇಶಗಳ ಪಾಲನೆ (Classroom behaviour and Compliance) ಮತ್ತೊಂದು ಮುಖ್ಯ ವಿಷಯ. ಹೇಗೆಂದಿರಾ? ಸಾಂಪ್ರದಾಯಿಕ ಶಾಲಾ ಶಿಕ್ಷಣವು ಮಕ್ಕಳು ತರಗತಿಯಲ್ಲಿ ಹೆಚ್ಚಿನ ಗಮನವಹಿಸಬೇಕು, ಅವರಲ್ಲಿ ಅಚ್ಚುಕಟ್ಟುತನವಿರಬೇಕು, ಸಮಯಪ್ರಜ್ಞೆ ಹಾಗೂ ಶಿಕ್ಷಕರ ಸೂಚನೆಗಳನ್ನು ಅನುಸರಣೆ ಮಾಡಬೇಕು ಎಂಬುದನ್ನು ಹೆಚ್ಚು ನಿರೀಕ್ಷಿಸುತ್ತಿದೆ. ಇದಕ್ಕೆ ತಕ್ಕಂತೆ ಹೆಣ್ಮಕ್ಕಳ ಮಾನಸಿಕತೆ ವಿನ್ಯಾಸಗೊಂಡಿದೆ. ಹೆಣ್ಣುಮಕ್ಕಳು ಪುಟ್ಟ ವಯಸ್ಸಿನಿಂದಲೇ ಎಲ್ಲರೊಂದಿಗೆ ಬೆರೆಯುವ ಸ್ವಭಾವ ಹೊಂದಿರುವಂಥವರು. ಸಹಜವಾಗಿ, ಅವರಲ್ಲಿನ ಈ ಗುಣವು ಸಹಕಾರಿ ನಡವಳಿಕೆಗೆ ಪೂರಕ. ಗ್ರೂಪ್ ಸ್ಟಡಿಗೆ ಪ್ರೇರೇಪಿಸುವುದು ಕೂಡ ಇದೇ ಗುಣ. ಇನ್ನೊಂದು ದಿಕ್ಕಿನಲ್ಲಿ ನೋಡಿದಾಗ, ಗಂಡುಮಕ್ಕಳು ಹೆಚ್ಚು ದೃಢವಾದ, ರಿಸ್ಕ್ ತೆಗೆದುಕೊಳ್ಳುವ, ಹೊಸತನದ ಅವಿಷ್ಕಾರದಲ್ಲಿ ತೊಡಗಿಕೊಂಡಿರುತ್ತಾರೆ. ಕೆಲವೊಮ್ಮೆ ಇದು ಕೈಹಿಡಿಯಬಹುದು, ಹಿಡಿಯದೆಯೂ ಇರಬಹುದು.

- ಹುಡುಗ ಹಾಗೂ ಹುಡುಗಿಯರ ಈ ಭಿನ್ನ ನಡವಳಿಕೆಯೂ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ಹೆಣ್ಮಕ್ಕಳು ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವವರಲ್ಲ!

ಹುಡುಗಿಯರ ಮೇಲುಗೈಗೆ ಮತ್ತೊಂದು ಕಾರಣ, ವಿಳಂಬಿತ ತೃಪ್ತಿ (Delayed gratification). ಹುಡುಗಿಯರು ತಕ್ಷಣದ ಮನರಂಜನೆಗಳಾದ ಸಾಮಾಜಿಕ ಮಾಧ್ಯಮಗಳಿಗೆ ಅಂಟಿಕೊಳ್ಳುವುದು, ಟಿ.ವಿ ಹಾಗೂ ಕ್ರಿಕೆಟ್ ನೋಡುವುದು, ಸ್ನೇಹಿತೆಯರ ಜತೆ ಸುತ್ತಾಡುವುದು ಈ ಎಲ್ಲವುಗಳನ್ನು ತ್ಯಜಿಸಿ ಭವಿಷ್ಯದ ಶೈಕ್ಷಣಿಕ ಗುರಿಗಳಿಗೆ ಹೆಚ್ಚಿನ ಒತ್ತು ನೀಡಿರುತ್ತಾರೆ. ಈ ಸಾಮರ್ಥ್ಯ ಕೂಡ ಅವರ ಶೈಕ್ಷಣಿಕ ಯಶಸ್ಸಿಗೆ ಕಾರಣ. ಕಡೇಕ್ಷಣದ ತಯಾರಿಯನ್ನು ಇವರು ನಂಬಿಕೊಂಡವರಲ್ಲ.

ಹುಡುಗಿಯರಿಗೆ 'ಕಂಡೀಷನ್ಸ್ ಅಪ್ಲೈ' ಕಾಲ ಇದಲ್ಲ...

ಹಾಗೆ ನೋಡಿದರೆ, ಇಂದಿನ ಹೆಣ್ಮಕ್ಕಳು ಬಹಳ ಅದೃಷ್ಟವಂತರು. ಹೆಣ್ಣುಮಗು ಜನಿಸಿದಾಗ, ಆಕೆಯನ್ನು ಯಾವುದೇ ಕಟ್ಟುಪಾಡುಗಳಿಲ್ಲದೆ, ಗಂಡುಮಗುವಿಗೆ ಸಮಾನವಾದ ಅಥವಾ ಅದಕ್ಕಿಂತಲೂ ಮಿಗಿಲಾದ ಮುಕ್ತ ವಾತಾವರಣ ಮತ್ತು ಸ್ವಾತಂತ್ರ್ಯ ನೀಡಿ ಬೆಳೆಸುವ ಟ್ರೆಂಡ್ ಹೆಚ್ಚುತ್ತಿದೆ. ಮನೆಯ ಅಂಗಳದಲ್ಲಿ ಸಿಗುತ್ತಿರುವ ಈ ಅಪಾರ ಆತ್ಮವಿಶ್ವಾಸ ಮತ್ತು ಸಮಾನತೆಯ ಅರಿವು ಆಕೆಯ ವ್ಯಕ್ತಿತ್ವದಲ್ಲಿ ಹೊಸ ಹುರುಪನ್ನು ಮೂಡಿಸಿದೆ. ಪರಿಣಾಮವಾಗಿ, ಇಂದಿನ ಹೆಣ್ಮಕ್ಕಳು ಸವಾಲುಗಳನ್ನು ಎದುರಿಸುವಲ್ಲಿ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಸಮಾಜದ ಸಕಲ ಕ್ಷೇತ್ರಗಳಲ್ಲಿ ಅಳುಕಿಲ್ಲದೆ ಮುನ್ನುಗ್ಗುವ ಅದಮ್ಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಬೆಳೆಯುತ್ತಿದ್ದಾರೆ.

- ಸಂಜ್ಞಾನಾತ್ಮಕ ದೃಷ್ಟಿಕೋನದಲ್ಲಿ ನೋಡುವುದಾದರೆ ಮೌಖಿಕ ಸಾಮರ್ಥ್ಯದ (Verbal ability) ಪಾತ್ರವೂ ಇಲ್ಲಿ ಎದ್ದು ಕಾಣುತ್ತದೆ. ಹುಡುಗಿಯರು, ಹುಡುಗರಿಗಿಂತ ಹೆಚ್ಚು ಸದೃಢ ಭಾಷಾ ಕುಶಲತೆ ಬೆಳೆಸಿಕೊಂಡಿರುತ್ತಾರೆ. ಈ ಕೌಶಲ್ಯ ಅವರಿಗೆ ಕೈಹಿಡಿಯುತ್ತದೆ.

ಹುಡುಗಿಯರ ಮಿದುಳಿನ ವಿನ್ಯಾಸವೂ ಕಾರಣವೇ?

ನರವಿಜ್ಞಾನ ಮತ್ತು ವಿಕಾಸ ಮನೋವಿಜ್ಞಾನದ ದೃಷ್ಟಿಯಿಂದ ನೋಡಿದರೆ, ಕಿಶೋರಾವಸ್ಥೆಯಲ್ಲಿ ಮಿದುಳಿನ ಬೆಳವಣಿಗೆಯಲ್ಲಿ ಕಂಡುಬರುವ ವ್ಯತ್ಯಾಸಗಳೂ ಶೈಕ್ಷಣಿಕ ಸಾಧನೆಗೆ ಕಾರಣವಾಗುತ್ತವೆ. ವಿಶೇಷವಾಗಿ ಮಿದುಳಿನಲ್ಲಿನ ಪ್ರಿಫ್ರಂಟಲ್ ಕಾರ್ಟೆಕ್ಸ್ (Prefrontal Cortex) ಎಂಬ ಮಿದುಳಿನ ಭಾಗವು ನಿರ್ಧಾರ ತೆಗೆದುಕೊಳ್ಳುವುದು, ಗಮನ ನಿಯಂತ್ರಣ ಮತ್ತು ಸ್ವ-ನಿಯಂತ್ರಣದ ಕೆಲಸ ಮಾಡುತ್ತದೆ. ಸಂಶೋಧನೆಗಳ ಪ್ರಕಾರ, ಹುಡುಗಿಯರಲ್ಲಿ ಈ ಭಾಗದ ಬೆಳವಣಿಗೆ ಹುಡುಗರಿಗಿಂತ ಸ್ವಲ್ಪ ಬೇಗ ಪೂರ್ಣಗೊಳ್ಳುತ್ತದೆ. ಇದರಿಂದ ಅವರು ಯೋಜನೆ ರೂಪಿಸುವುದು, ಸಮಯವನ್ನು ಸಮರ್ಥವಾಗಿ ಬಳಸುವುದು ಮತ್ತು ಅಕಾಡೆಮಿಕ್ ಗುರಿಗಳ ಮೇಲೆ ಹೆಚ್ಚು ಗಮನ ಕೊಡುವ ಸಾಮರ್ಥ್ಯ ಹೊಂದಿರುತ್ತಾರೆ.

- ಇದಲ್ಲದೆ, ಹುಡುಗಿಯರು ಈ ವಯಸ್ಸಿನಲ್ಲಿ ಭಾವನಾತ್ಮಕ ಸ್ಥಿರತೆ ಹೊಂದಿರುತ್ತಾರೆ. ಡೋಪಮೈನ್ (Dopamine) ಮತ್ತು ಸೆರೋಟೋನಿನ್ (Serotonin) ಮುಂತಾದ ನರಸಾಗಾಣಿಕೆಗಳ ಸಮತೋಲನವು ಹೆಚ್ಚು ಸ್ಥಿರವಾಗಿರುವುದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಈ ಕಾರಣಕ್ಕಾಗಿಯೇ ಅವರು ಒತ್ತಡದ ಪರಿಸ್ಥಿತಿಗಳಲ್ಲಿಯೂ ಸಮಾಧಾನದಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ.
- ಹಾಗೆಯೇ, ಕಾರ್ಟಿಸೋಲ್ (Cortisol) ಎಂಬ ಒತ್ತಡ ಹಾರ್ಮೋನ್‌ನ ಪ್ರತಿಕ್ರಿಯೆಯೂ ವಿಭಿನ್ನ. ಇದು ಪರೀಕ್ಷಾ ಸಮಯದಲ್ಲಿ ಕಾರ್ಯಕ್ಷಮತೆಯನ್ನು ಪ್ರಭಾವಿಸುತ್ತದೆ.

ವಿದ್ಯಾರ್ಥಿನಿಯರು ಮಾನಸಿಕವಾಗಿ ಹೆಚ್ಚು ಗಟ್ಟಿಗರು

ಹೆಣ್ಣುಮಕ್ಕಳು ಬಾಲ್ಯದಿಂದಲೇ ಭಾವನೆಗಳ ಏರಿಳಿತಗಳಿಗೆ ಒಡ್ಡಿಕೊಳ್ಳುವ ಪರಿಯೇ ಅನನ್ಯ. ಗಂಡುಮಕ್ಕಳು ಬಹುಪಾಲು ಪ್ರಶಂಸೆ ಮತ್ತು ಆತಿಥ್ಯದ ಮಡಿಲಲ್ಲಿ ಬೆಳೆದರೆ, ಹೆಣ್ಣುಮಕ್ಕಳು ಪ್ರೀತಿಯ ನಗುವಿನ ಜತೆಗೇ ಮುಖ ಕಿವುಚುವ ತಿರಸ್ಕಾರದ ನೋಟಗಳನ್ನೂ ಸಹಜವಾಗಿಯೇ ದಾಟಿ ಬಂದಿರುತ್ತಾರೆ. ಎದುರಾಳಿಯ ವರ್ತನೆಯಲ್ಲಿನ ಈ ಏರಿಳಿತಗಳು ಅವರಲ್ಲಿ ಮಾನಸಿಕ ದೃಢತೆಯನ್ನು ಹರಳುಗಟ್ಟಿಸಿರುತ್ತದೆ. ಈ ಕಾರಣಕ್ಕಾಗಿಯೇ ಪರೀಕ್ಷೆಯ ಪುಟಗಳಲ್ಲಿ ಕಠಿಣ ಪ್ರಶ್ನೆಯೇ ಬರಲಿ ಅಥವಾ ಸುಲಭದ್ದೇ ಇರಲಿ, ಅವರು ಆತಂಕಕ್ಕೆ ಒಳಗಾಗದೆ ಎಲ್ಲವನ್ನೂ ಒಂದೇ ಸಮಚಿತ್ತದಿಂದ ಸ್ವಾಗತಿಸುತ್ತಾರೆ. ಈ ನಿರುದ್ವಿಗ್ನ ಭಾವವೇ ಅಂತಿಮವಾಗಿ ಅವರನ್ನು ಯಶಸ್ಸಿನ ಏಣಿ ಏರುವಂತೆ ಮಾಡುತ್ತದೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕಿ, ಆಪ್ತ ಸಲಹೆಗಾರ್ತಿ)

ನಿಮ್ಮ ಮನೆಯ ತಟ್ಟೆ ತೊಳೆಯಲು ರೊಬಾಟ್ ಬೇಕಾ?

ಛೇ, ಮನೆಗೆಲಸದವಳು ಬಂದಿಲ್ಲ ಎಂಬ ಚಿಂತೆಯಿಂದ ಚೀನಾ ಮುಕ್ತಿ ಹೊಂದಲು ಯೋಚಿಸುತ್ತಿದೆ. ಅಲ್ಲೀಗ ಮನೆಗೆಲಸ ರೊಬಾಟ್‌ಗಳ ತಯಾರಿಗೆ ಸಿದ್ಧತೆ ನಡೆದಿದೆ. ನೋಟಿಫಿಕೇಶನ್‌ಗಳು ನಿಮ್ಮ ಸಮಯವನ್ನೂ ಹಾಳು ಮಾಡುತ್ತಿವೆಯಲ್ಲವೇ? ಹಾಗಾದರೆ, ಇದನ್ನು ಓದಿ...

ಟೆಕ್ಕೋಪನಿಷತ್

ಧೀರಜ್ ಪೊಯ್ಯೆಕಂಡ

ಎಜಿಐ ಆಗಲಿದೆಯಾ ಗ್ರೋಕ್?

ಜಗತ್ತು ಈಗ ಯಾವ ಯಾಂತ್ರಿಕ ಬುದ್ಧಿಮತ್ತೆ ಬಗ್ಗೆ ವಿಪರೀತ ಗಾಬರಿ ಬಿದ್ದಿದೆಯೋ ಆ ಯಾಂತ್ರಿಕ ಬುದ್ಧಿಮತ್ತೆಗೆ 'ವೀಕ್ ಎಐ' ಎನ್ನುವ ಹೆಸರೂ ಇದೆ. ಸರಳ ಕನ್ನಡದಲ್ಲಿ ಹೇಳಬೇಕಾದರೆ, ಸದ್ಯ ಜಗತ್ತಲ್ಲಿ ತಲ್ಲಣ ಸೃಷ್ಟಿಸುತ್ತಿರುವುದು 'ದುರ್ಬಲ ಎಐ'. ಇದನ್ನು ನ್ಯಾರೋ ಎಐ ಎಂದೂ ಕರೆಯಲಾಗುತ್ತದೆ. ಅಂದರೆ, ಈ ಎಲ್ಲಾ ಎಐ ಟೂಲ್‌ಗಳಿಗೆ ಒಂದು ನಿರ್ದಿಷ್ಟ ಕೆಲಸವನ್ನು ನೀಡಲಾಗಿದೆ. ಆ ಕೆಲಸವನ್ನು ಮಾತ್ರ ಅವುಗಳು ಬಹಳ ವೇಗವಾಗಿ ಹಾಗೂ ಸಮರ್ಥವಾಗಿ ಮಾಡುತ್ತಿವೆ. ಅಷ್ಟಕ್ಕೇ ನಾವೆಲ್ಲ ಗಾಬರಿ ಬಿದ್ದಿದ್ದೇವೆ.

ಆದರೆ, ಎಐ ಬೆಳವಣಿಗೆಯ ಇನ್ನೂ ಕೆಲವು ಹಂತಗಳಿವೆ. ಅದರಲ್ಲಿ ಮುಂದಿನ ಹಂತವೇ ಎಜಿಐ, ಅಂದರೆ ಆರ್ಟಿಫಿಶಿಯಲ್ ಜನರಲ್ ಇಂಟೆಲಿಜೆನ್ಸ್. ಎಜಿಐ ಎನ್ನುವುದು ಮಾನವನ ಮಿದುಳಿನಂತೆಯೇ ಕಾರ್ಯನಿರ್ವಹಿಸುವ ತಂತ್ರಜ್ಞಾನ. ಅಂದರೆ, ಯಾವುದೇ ಒಂದು ನಿರ್ದಿಷ್ಟ ಕೆಲಸಕ್ಕೆ ಸೀಮಿತವಾಗದೆ,



ಮನುಷ್ಯರು ಮಾಡಬಲ್ಲ ಯಾವುದೇ ಬೌದ್ಧಿಕ ಕೆಲಸವನ್ನು ಕಲಿಯುವ, ಅರ್ಥಮಾಡಿಕೊಳ್ಳುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನು ಇದು ಹೊಂದಿರುತ್ತದೆ. ಎಲಾನ್ ಮಸ್ಕ್‌ರ ಗ್ರೋಕ್ ಹಂತವನ್ನು ಸಾಧಿಸಲಿದೆ ಅನ್ನುವ ಚರ್ಚೆಯೊಂದು ಈಗ ಆರಂಭವಾಗಿದೆ. ಮೇ ಅಥವಾ ಜೂನ್‌ನಲ್ಲಿ 'ಗ್ರೋಕ್ 5' ಆವೃತ್ತಿ ಬಿಡುಗಡೆಯಾಗಲಿದೆ. ಇದು ಎಜಿಐ ಆಗಿರಲಿದೆ ಅನ್ನುವುದು ಸದ್ಯದ ಚರ್ಚೆ. ಇದಕ್ಕೆ ಎಲಾನ್ ಮಸ್ಕ್ ಕೂಡ ದನಿಗೂಡಿಸಿ ತಲೆದೂಗಿದ್ದಾರೆ. ಇನ್ನೊಂದು ಕಡೆ ಗೂಗಲ್ 'ಎಜಿಐ'ಗಾಗಿ ರಾತ್ರಿ ಹಗಲು ಕೆಲಸ ಮಾಡುತ್ತಿದೆ. ಇಬ್ಬರಲ್ಲಿ ಯಾರು 'ಎಜಿಐ' ಹಂತವನ್ನು ಸಾಧಿಸುತ್ತಾರೋ ಗೊತ್ತಿಲ್ಲ, ನಾವು ಮಾತ್ರ ಗಟ್ಟಿಯಾಗಿ ಸೀಟ್ ಬೆಲ್ಟ್ ಕಟ್ಟಿಕೊಂಡು ಎಐ ಕ್ರಾಂತಿಯನ್ನು ಎದುರಿಸಲು ಹೃದಯವನ್ನು ಗಟ್ಟಿ ಮಾಡಿಕೊಳ್ಳಬೇಕಿದೆ.

ಚಟಾಕಿ: ಈಗಾಗಲೇ ಪುಂಡ ಪೋಕರಿಯಂತೆ ಆಡುವ ಗ್ರೋಕ್ ಎಜಿಐ ಆಗಿಬಿಟ್ಟರೆ, ಜನ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಲೂ ಹಿಂಜರಿಯುವುದಂತು ಖಂಡಿತ.

ಮನೆ ಕೆಲಸ ಮಾಡಲಿವೆ ರೊಬಾಟ್‌ಗಳು

ರೊಬಾಟ್‌ಗಳು ಸಾವಿರಾರು ಜನರ ಮುಂದೆ ಸ್ಟೇಜ್ ಮೇಲೆ ಕುಣಿದಿದ್ದು ಆಯ್ತು, ಮನುಷ್ಯರೊಂದಿಗೆ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ಗೆದ್ದಿದ್ದೂ ಆಯ್ತು. ಮುಂದೇನು? ಎನ್ನುವ ಪ್ರಶ್ನೆಗೆ ಚೀನಾದಿಂದ ಉತ್ತರ ಬಂದಿದೆ.

ಚೀನಾದ 'ಎಕ್ಸ್‌ಸ್ಕ್ವೇರ್ ರೊಬಾಟ್'ನಂಥ ಸ್ಟಾರ್ಟಪ್‌ಗಳು ಈಗ ರೊಬಾಟ್‌ಗಳಿಂದ ಮನೆಕೆಲಸ ಮಾಡಿಸುವ ಪ್ರಯತ್ನದಲ್ಲಿ ತೊಡಗಿದೆ. ರೊಬಾಟ್‌ಗಳು ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಬಾರದು, ಪ್ರಾಯೋಗಿಕ ಬಳಕೆಗೂ ಬರಬೇಕು ಎಂದು ಕಂಪನಿಗಳು ಗುರಿ ಇಟ್ಟುಕೊಂಡಿವೆ. ಬಟ್ಟೆ ಮಡಚುವುದು, ಪಾತ್ರೆ ತೊಳೆಯುವುದು ಮತ್ತು ಅಡುಗೆ ಮನೆಯ ಕೆಲಸಗಳಲ್ಲಿ ಮನುಷ್ಯರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಈವರೆಗೆ ರೊಬಾಟ್‌ಗಳಲ್ಲಿ ಸಮತೋಲನ ಮತ್ತು ವೇಗದ ಕಡೆಗೆ ಗಮನ ನೀಡಲಾಗುತ್ತಿತ್ತು. ಈಗ ಒಂದು ಹೆಜ್ಜೆ ಮುಂದೆ ಹೋಗಿ ರೊಬಾಟ್‌ಗಳ ಕೈಗಳ ಚಲನೆ ಹಾಗೂ ಸೂಕ್ಷ್ಮ ವಸ್ತುಗಳನ್ನು ಹಿಡಿಯುವ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತದೆ. ಚೀನಾದಲ್ಲಿ ಹೆಚ್ಚುತ್ತಿರುವ ವೃದ್ಧರ ಸಂಖ್ಯೆ ಹಾಗೂ ಕಾರ್ಮಿಕರ ಕೊರತೆಯನ್ನು ನೀಗಿಸುವುದಕ್ಕೆ ಈ ರೊಬಾಟ್‌ಗಳು ಸಹಾಯ ಮಾಡಲಿವೆ ಎಂಬುದು ಕಂಪನಿಗಳ ಆಶಯ. ಮುಂದಿನ ಕೆಲವು ವರ್ಷಗಳಲ್ಲಿ ಈ ರೊಬಾಟ್‌ಗಳ ಬೆಲೆಯನ್ನು ಸಾಮಾನ್ಯ ಜನರಿಗೂ ಕೈಗೆಟುಕುವ ದರಕ್ಕೆ ಇಳಿಸುವ ಉದ್ದೇಶವನ್ನು ತಯಾರಕರು ಹೊಂದಿದ್ದಾರೆ.

ಚಟಾಕಿ: ಮನೆಕೆಲಸ ಮಾಡುವ ರೊಬಾಟ್‌ಗಳ ಜತೆಗೆ, ಕಳೆದುಹೋದ ಸಾಕ್ಸ್ ಹುಡುಕುವ ರೊಬಾಟ್‌ಗಳ ಆವಿಷ್ಕಾರವೂ ಆದರೆ ಚೆನ್ನಾಗಿತ್ತು.

ಜಗತ್ತು ಬದಲಾದ ದಿನ

1953ರ ಇದೇ ದಿನ ಅಂದರೆ ಏಪ್ರಿಲ್ 25ರಂದು ಬ್ರಿಟನ್‌ನ 'ನೇಚರ್' ನಿಯತಕಾಲಿಕೆಯಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಕೇವಲ ಎರಡು ಪುಟಗಳ ಆ ಲೇಖನ ಮನುಷ್ಯರು ತಮ್ಮ ಬಗ್ಗೆ ಹೊಂದಿದ ದೃಷ್ಟಿಕೋನವನ್ನೇ ಶಾಶ್ವತವಾಗಿ ಬದಲಾಯಿಸಿಬಿಟ್ಟಿತ್ತು. ಅಂದು, ಜೇಮ್ಸ್ ವ್ಯಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಎಂಬ ಇಬ್ಬರು ಯುವ ವಿಜ್ಞಾನಿಗಳು ಡಿಎನ್‌ಎ ರಚನೆಯ ಕುರಿತು ತಮ್ಮ ಸಂಶೋಧನೆಯನ್ನು ಜಗತ್ತಿನ ಮುಂದಿಟ್ಟಿದ್ದರು. ನಾವೆಲ್ಲರೂ ಹೇಗೆ ಕಾಣುತ್ತೇವೆ? ನಮಗೆ ಕೆಲವು ಕಾಯಿಲೆಗಳು ಏಕೆ ಬರುತ್ತವೆ? ತಂದೆ-ತಾಯಿಯ ಗುಣಲಕ್ಷಣಗಳು ಮಕ್ಕಳಿಗೆ ಹೇಗೆ ಹರಿದುಬರುತ್ತವೆ? ಎಂಬೆಲ್ಲಾ ಪ್ರಶ್ನೆಗಳಿಗೆ ಅಂದು ಉತ್ತರ ಸಿಕ್ಕಿತ್ತು.

ಡಿಎನ್‌ಎ ಎಂಬುದು ಕೇವಲ ಒಂದು ಅಣುವಲ್ಲ, ಅದು ನಮ್ಮ ದೇಹದ ನೀಲನಕ್ಷೆ ಎಂಬುದು ಸಾಬೀತಾಯಿತು. ವ್ಯಾಟ್ಸನ್ ಮತ್ತು ಕ್ರಿಕ್ ವಿವರಿಸಿದ ಆ 'ಡಬಲ್ ಹೆಲಿಕ್ಸ್' ಅಥವಾ ತಿರುಚಿದ ಏಣಿಯಂಥ ರಚನೆ, ಆಧುನಿಕ ಜೀವವಿಜ್ಞಾನದ ಅಡಿಪಾಯವಾಯಿತು. ಈ ಸಂಶೋಧನೆಯ ನಂತರವೇ ನಮಗೆ ವಂಶವಾಹಿಗಳು ಹೇಗೆ ಕೆಲಸ ಮಾಡುತ್ತವೆ ಎಂಬುದು ತಿಳಿಯಿತು. ಇಂದು ನಾವು ಮಾಡುತ್ತಿರುವ ಬೆಳೆಗಳ ತಳಿ ಪರಿವರ್ತನೆ ಪ್ರಯೋಗಗಳಿಗೂ ಇದೇ ಮೂಲವಾಯಿತು. ಕ್ಯಾನ್ಸರ್, ಮಧುಮೇಹದಂಥ ಅನುವಂಶಿಕ ಕಾಯಿಲೆಗಳನ್ನು

ಅರ್ಥಮಾಡಿಕೊಳ್ಳಲು ಮತ್ತು ಅವುಗಳಿಗೆ ಚಿಕಿತ್ಸೆ ಕಂಡುಹಿಡಿಯಲು ಈ ಲೇಖನದಿಂದ ಸಾಧ್ಯವಾಯಿತು. ಇಂದು ಅಪರಾಧಿಗಳನ್ನು ಪತ್ತೆಹಚ್ಚಲು ಬಳಸುವ 'ಡಿಎನ್‌ಎ ಫಿಂಗರ್‌ಪ್ರಿಂಟಿಂಗ್' ತಂತ್ರಜ್ಞಾನ ಸಾಧ್ಯವಾಗಿದ್ದು ಕೂಡ ಈ ಸಂಶೋಧನೆಯಿಂದಲೇ. ವ್ಯಾಟ್ಸನ್ ಮತ್ತು ಕ್ರಿಕ್ ಅವರಿಗೆ ಈ ಸಾಧನೆಗಾಗಿ ನೊಬೆಲ್ ಪ್ರಶಸ್ತಿಯೂ ಲಭಿಸಿತು.

ಚಟಾಕಿ: ಛೇ, ಆ ಲೇಖನವೊಂದು ಪ್ರಕಟವಾಗದೇ ಇದ್ದಿದ್ದರೆ ನಾನಿಂದು ಜೈಲಲ್ಲಿ ಇರಬೇಕಿರಲಿಲ್ಲ ಎಂದು ಅಪರಾಧಿಗಳು ಕೈಕೈ ಹಿಚುಕಿಕೊಳ್ಳುವ ದಿನ ಇದು!

ನೋಟಿಫಿಕೇಶನ್ ಆಫ್ ಮಾಡಿ...

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ದಿನದಲ್ಲಿ 80 ರಿಂದ 150 ಬಾರಿ ಮೊಬೈಲ್ ಚೆಕ್ ಮಾಡುತ್ತಾರೆ. ಕೊಂಚ ಹೆಚ್ಚು ಮೊಬೈಲ್ ಬಳಕೆ ಮಾಡುವವರು ದಿನಕ್ಕೆ ಕನಿಷ್ಠ 200 ಬಾರಿ ಮೊಬೈಲ್ ಜೇಬಿನಿಂದ ತೆಗೆದು ನೋಡುತ್ತಾರೆ. ಮೊಬೈಲ್‌ಗೆ ಪಿತಪಿತನೆ ಬಂದು ಬೀಳುವ ನೋಟಿಫಿಕೇಶನ್ ಇದಕ್ಕೆ ಪ್ರಮುಖ ಕಾರಣ. ಸಾಮಾಜಿಕ ಜಾಲತಾಣಗಳು ನಮ್ಮ ಸಮಯ ಹಾಳು ಮಾಡುವ ಬಗ್ಗೆ ಮಾತು, ಬರಹಗಳನ್ನು ನಾವು ನೋಡುತ್ತಲೇ ಇರುತ್ತೇವೆ. ಆದರೆ, ಗೊತ್ತಿಲ್ಲದ ಹಾಗೆ ನಮ್ಮ ಸಮಯವನ್ನು ಕೊಲ್ಲುವ ನೋಟಿಫಿಕೇಶನ್‌ಗಳ ಬಗ್ಗೆ ನಾವು ಯೋಚಿಸುವುದೇ ಇಲ್ಲ. ಈ ನೋಟಿಫಿಕೇಶನ್‌ಗಳು ಅದೆಷ್ಟು 'ಅಡಿಕ್ಟಿವ್' ಆಗಿಬಿಟ್ಟಿದೆಯೆಂದರೆ, ಯಾವುದೇ ನೋಟಿಫಿಕೇಶನ್ ಬರದೇ ಇದ್ದಾಗ 'ನೋಟಿಫಿಕೇಶನ್ ಬಂತಾ?' ಅಂತ ನೋಡುವುದಕ್ಕೆಂದೇ ದಿನಕ್ಕೆ ಹತ್ತಾರು ಬಾರಿ ಮೊಬೈಲ್ ತೆಗೆದು ನೋಡುವುದೂ ಇದೆ.



ಈ ಸಮಸ್ಯೆಯನ್ನು ಒಂದು ಸುಲಭ ಉಪಾಯದ ಮೂಲಕ ಬಗೆಹರಿಸಬಹುದು. 'ತಲೆ ಹೋಗುವ' ಕಾರಣ ಇಲ್ಲದೇ ಇದ್ದರೆ ಮೊಬೈಲ್‌ನಲ್ಲಿ ಮೆಸೇಜ್, ಕಾಲ್ ಮತ್ತು ಅತಿ ಅಗತ್ಯದ ಆ್ಯಪ್‌ಗಳನ್ನು ಬಿಟ್ಟು ಬೇರೆಲ್ಲಾ ಆ್ಯಪ್‌ಗಳ ನೋಟಿಫಿಕೇಶನ್‌ಗಳನ್ನು ಆಫ್ ಮಾಡಿಬಿಡಿ. ಶಾಪಿಂಗ್, ಗೇಮಿಂಗ್ ಆ್ಯಪ್‌ಗಳನ್ನು ಬಾಯಿಮುಚ್ಚಿ ಕೂರುವಂತೆ ಹೇಳುವುದೇ ಉತ್ತಮ. ಹಾಗೆಯೇ, ಮೊಬೈಲ್ ನೋಡುವುದಕ್ಕೆ ಸಮಯ ನಿಗದಿ ಮಾಡಿ. ಪ್ರತಿ ನಿಮಿಷಕ್ಕೊಮ್ಮೆ ಮೊಬೈಲ್ ನೋಡುವುದಕ್ಕಿಂತ ಪ್ರತಿ 2 ಅಥವಾ 3 ಗಂಟೆಗೊಮ್ಮೆ ಮೊಬೈಲ್ ಚೆಕ್ ಮಾಡುವ ಅಭ್ಯಾಸ ರೂಢಿಸಿಕೊಳ್ಳಿ. ಕೆಲಸ ಹಾಗೂ ನಿದ್ದೆಯ ಸಮಯದಲ್ಲಿ ಮೊಬೈಲ್ ಸೈಲೆಂಟ್ ಇಟ್ಟುಬಿಡಿ. ಮೊಬೈಲ್ ಸ್ಕ್ರೀನ್‌ನ ಕಲರ್ ಕಮ್ಮಿ ಇದ್ದಷ್ಟು ಆಕರ್ಷಣೆ ಕಮ್ಮಿಯಂತೆ. ಹಾಗಾಗಿ ಬೋರಿಂಗ್ ವಾಲ್‌ಪೇಪರ್ ಹಾಕಿ ಹೋಮ್ ಸ್ಕ್ರೀನ್‌ನಲ್ಲಿರುವ ಆ್ಯಪ್‌ಗಳನ್ನೆಲ್ಲ ತೆಗೆದುಬಿಟ್ಟರೆ ಮೊಬೈಲ್ ನೋಡುವ ಒತ್ತಡವೂ ಕಡಿಮೆಯಾಗುತ್ತದೆ. ಸಮಯವೂ ಉಳಿಯುತ್ತದೆ.

ಚಟಾಕಿ: ನೋಟಿಫಿಕೇಶನ್ ಎನ್ನುವುದು ಪ್ರೇಮಿಯ ವಾಟ್ಸ್ಆ್ಯಪ್ ಲಾಸ್ಟ್ ಸೀನ್ ಇದ್ದಂತೆ. ನೋಡದೇ ಇದ್ದಷ್ಟು ನೆಮ್ಮದಿ!

dheeraj.d@timesofindia.com

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:-** ವಾಚಕರ ವಿಜಯ, ನಂ. 74 /2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 114
ಶನಿವಾರ,25 ಏಪ್ರಿಲ್ 2026 | ಪುಟಗಳು: 19+4+4 | ಬೆಲೆ: ₹ 5.00
C
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪದಚ್ಯುತಿಗೆ ಪ್ರತಿಪಕ್ಷಗಳಿಂದ ಮತ್ತೆ ನೋಟಿಸ್

ಚಿನ್ನಾರಿ ಮುತ್ತನ ವೀರಗಾಸೆ
ಲವಲVK ನೋಡಿ

ಮೇ 9ಕ್ಕೆ 'ಗೋಲ್ಡ್ ಗಾಲಾ-2026' ಕಾರ್ಯಕ್ರಮದಲ್ಲಿ ನಟಿ ಪ್ರಿಯಾಂಕಾ ಚೋಪ್ರಾಗೆ ವನ್‌ಗಾರ್ಡ್ ಪ್ರಶಸ್ತಿ

CONSUMER CONNECT INITIATIVE

ಸಿಇಟಿ, ನೀಟ್, ಜೆಇಇ, ಸಿಎ, ಸಿಎಸ್ ಪರೀಕ್ಷೆ ತರಬೇತಿಗೆ ಹೆಸರಾಗಿದೆ

ಕುಂದಾಪುರದ 'ಸುಜ್ಞಾನ' ಪಿಯು ಕಾಲೇಜು

10 ಎಕರೆಗೂ ಅಧಿಕ ವಿಸ್ತೀರ್ಣದ ಸ್ವಂತ ಜಾಗದಲ್ಲಿ ಸುಸಜ್ಜಿತ ಸೌಕರ್ಯ

ಸುಜ್ಞಾನ ಪಿಯು ಕಾಲೇಜು ಕಟ್ಟಡ ಉದ್ಘಾಟನಾ ಸಂದರ್ಭ ಶೃಂಗೇರಿ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತಿ ಸನ್ನಿದಾನಂ ಸಂಸ್ಥೆಗೆ ಉಡುಗೊರೆಯಾಗಿ ನೀಡಿದ ಸರಸ್ವತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಮೂರು ದಶಕಕ್ಕೂ ಹೆಚ್ಚು ಅನುಭವ ಹೊಂದಿರುವ, ಉಡುಪಿ ಹಾಗೂ ದಕ್ಷಿಣ ಕನ್ನಡದ ಪ್ರತಿಷ್ಠಿತ ಪಿಯು ಕಾಲೇಜುಗಳಲ್ಲಿ ಭೌತಶಾಸ್ತ್ರ ಉಪನ್ಯಾಸಕರಾಗಿ ಹಾಗೂ ಸುಮಾರು 25 ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಅನುಭವದ ಜೊತೆಗೆ ಭೌತಶಾಸ್ತ್ರ ವಿಷಯದಲ್ಲಿ Ph.D ಪದವಿಯನ್ನು ಗಳಿಸಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭೌತಶಾಸ್ತ್ರದ ವಿಚಾರ ಮಂಡನೆಯನ್ನು ಮಂಡಿಸಿ, ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಭೌತಶಾಸ್ತ್ರ ಪಠ್ಯಪುಸ್ತಕದ ಲೇಖಕರಾಗಿ ಸಾವಿರಾರು ವಿದ್ಯಾರ್ಥಿಗಳ CET/ NEET/JEE ಕನಸಿಗೆ ದಾರಿದೀಪವಾದ **ಡಾ.ರಮೇಶ್ ಶೆಟ್ಟಿ** ಅಧ್ಯಕ್ಷರಾಗಿ, ವಾಣಿಜ್ಯ ವಿಭಾಗದ CA/CS ತರಬೇತಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಹಾಗೂ ಕುಂದಾಪುರದಲ್ಲಿ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಅಖಿಲ ಭಾರತಕ್ಕೆ 21 ಮತ್ತು 27ನೇ Rank, CA ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಅಖಿಲ ಭಾರತಕ್ಕೆ 29ನೇ Rank ಪಡೆದ ಶಿಕ್ಷಪ್ರಭಾ ಸಂಸ್ಥೆಯ ಸಂಸ್ಥಾಪಕರುಗಳಾದ **ಪ್ರತಾಪ್ ಚಂದ್ರ ಶೆಟ್ಟಿ** ಹಾಗೂ **ಭರತ್ ಶೆಟ್ಟಿ** ಕಾರ್ಯದರ್ಶಿ ಮತ್ತು ಖಜಾಂಚಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸುಜ್ಞಾನ ಎಜುಕೇಶನಲ್ ಟ್ರಸ್ಟ್ ಹೊಸ ಹೊಸ ಶೈಕ್ಷಣಿಕ ಚಿಂತನೆಗಳೊಂದಿಗೆ ಹೊಸ ಪರ್ವ ಕಾಲಕ್ಕೆ ದಾಪುಗಾಲು ಇಡುತ್ತಿದೆ. ವಿದ್ಯಾರ್ಥಿಗಳಿಗೆ ಇಂದಿನ ಸ್ಪರ್ಧಾತ್ಮಕ ಯುಗದ ಸವಾಲುಗಳನ್ನು ಎದುರಿಸಲು ಅಗತ್ಯವಾಗಿರುವ CET/NEET/JEE ಮತ್ತು CA/CS ಪರೀಕ್ಷೆಗೆ ಪರಿಣಿತ ಬೋಧಕ ವೃಂದದಿಂದ ಗುಣಮಟ್ಟದ ತರಬೇತಿಯನ್ನು ನೀಡುವುದು ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ಮೂಲ ಉದ್ದೇಶವಾಗಿದೆ.

ಡಾ. ರಮೇಶ್ ಶೆಟ್ಟಿ, ಅಧ್ಯಕ್ಷರು, ಸುಜ್ಞಾನ ಎಜುಕೇಶನಲ್ ಟ್ರಸ್ಟ್


ಪ್ರತಾಪ್ ಚಂದ್ರ ಶೆಟ್ಟಿ

ಭರತ್ ಶೆಟ್ಟಿ

ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ವಿದ್ಯಾರಣ್ಯ ಆಂಗ್ಲಮಾಧ್ಯಮ ಶಾಲೆ ರಾಜ್ಯದಲ್ಲೇ ಮನೆಮಾತು

- ಈ ವರ್ಷದ ಫಲಿತಾಂಶದಲ್ಲಿ ವಿದ್ಯಾರಣ್ಯದ ಸಮೀಕ್ಷಾ ರಾಜ್ಯಕ್ಕೆ 5ನೇ ರ್‍ಯಾಂಕ್
- ಶಾಲೆಗೆ ಶೇ. 100ರ ಫಲಿತಾಂಶ

ಕುಂದಾಪುರ: ಇಲ್ಲಿನ ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ಸುಜ್ಞಾನ ಪಿಯು ಕಾಲೇಜು ಹಾಗೂ ವಿದ್ಯಾರಣ್ಯ ಆಂಗ್ಲಮಾಧ್ಯಮ ಶಾಲೆ 2025–26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಸಾಧಾರಣ ಸಾಧನೆ ಮಾಡಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿವೆ. ಕುಂದಾಪುರದ 'ಸುಜ್ಞಾನ' ಪಿಯು ಕಾಲೇಜು ತನ್ನ ಮೊದಲ ಬ್ಯಾಚ್‌ನಲ್ಲಿ ಶೇ. 100ರಷ್ಟು ಸಾಧನೆ ಮಾಡಿದ್ದರೆ, ವಿದ್ಯಾರಣ್ಯ ಆಂಗ್ಲ ಮಾಧ್ಯಮ ಶಾಲೆಯು ರಾಜ್ಯಮಟ್ಟದಲ್ಲಿ ಗಮನಾರ್ಹ Rank ಪಡೆಯುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿವೆ.

ವಿದ್ಯಾರ್ಥಿ ಕೇಂದ್ರಿತ ಶಿಕ್ಷಣದ ಅಡಿಯಲ್ಲಿ ಕೆಜಿ ತರಗತಿಗಳಿಂದ ಪಿಯುಸಿ ವರೆಗಿನ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಗುಣಮಟ್ಟದ ಶಿಕ್ಷಣವನ್ನು ಸಂಸ್ಥೆ ನೀಡುತ್ತಿದೆ. ಡಾ.ರಮೇಶ್ ಶೆಟ್ಟಿ ಅವರ ಸಾರಥ್ಯದ ಸುಜ್ಞಾನ ಎಜುಕೇಶನಲ್ ಟ್ರಸ್ಟ್ ಮೂಲಕ ನಡೆಯುತ್ತಿರುವ ವಿದ್ಯಾರಣ್ಯ ಆಂಗ್ಲಮಾಧ್ಯಮ ಶಾಲೆಯು ಶಿಕ್ಷಕರ ಸಂಘಟಿತ ಪ್ರಯತ್ನದಲ್ಲಿ ಅತ್ಯುತ್ತಮ ಬೋಧನೆ ಜೊತೆಗೆ ಕ್ರೀಯಾಶೀಲ ಆಲೋಚನೆಯೊಂದಿಗೆ ಕುಂದಾಪುರ ಪರಿಸರದಲ್ಲಿ ಒಂದು ಅತ್ಯುತ್ತಮ ಶಾಲೆಯಾಗಿ ರೂಪುಗೊಳ್ಳುತ್ತ ಸಾಗುತ್ತಿದೆ. ಪಠ್ಯ ಮತ್ತು ಪಠ್ಯೇತರ ವಿಷಯದಲ್ಲಿ ಸಂಸ್ಥೆ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಯಶಸ್ಸು ಕಾಣುತ್ತಿದೆ. ಉತ್ತಮ ಹಾಸ್ಟೆಲ್ ವ್ಯವಸ್ಥೆ, ಶಾಲಾ ವಾಹನದ ವ್ಯವಸ್ಥೆ ಹಾಗೂ ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಬೋಧನಾ ತರಗತಿಗಳನ್ನು (Tuition) ಹೀಗೆ ಹಲವು ಅಗತ್ಯ ಸೌಲಭ್ಯಗಳನ್ನು ಸಂಸ್ಥೆ ತೃಪ್ತಿಕರವಾಗಿ ಪೂರೈಸುತ್ತಿದ್ದು ಪೋಷಕರ ಪ್ರಶಂಸೆಗೆ ಪಾತ್ರವಾಗಿದೆ. ವಿದ್ಯಾರಣ್ಯ ಆಂಗ್ಲಮಾಧ್ಯಮ ಶಾಲೆಯಲ್ಲಿ ನರ್ಸರಿಯಿಂದ 10ನೇ ತರಗತಿಯ ತನಕ ವ್ಯಾಸಂಗ ಮಾಡಲು ಅವಕಾಶವಿದ್ದು 3ನೇ ತರಗತಿಯಿಂದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

6ನೇ ತರಗತಿಯಿಂದ IIT/NEET ಫೌಂಡೇಶನ್ ತರಬೇತಿ

ಮಕ್ಕಳ ಕಲಿಕೆಗೆ ಪಠ್ಯದ ಬೋಧನೆಯ ಜತೆಗೆ ಇವತ್ತಿನ ಸ್ಪರ್ಧಾತ್ಮಕ ಯುಗದ ಅಗತ್ಯ ವಿಷಯಗಳ ತರಬೇತಿ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಪಾಠಗಳನ್ನು ನಿರಂತರವಾಗಿ ಸಂಸ್ಥೆ ನೀಡುತ್ತಿದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ IIT ಮತ್ತು NEET ಸಿದ್ಧತೆಗಾಗಿ ಕರ್ನಾಟಕದ ಬೆರಳೆಣಿಕೆಯಷ್ಟು ಶಾಲೆಗಳಲ್ಲಿ ಮಾತ್ರ ಆರಂಭವಾಗಿರುವ IIT ಫೌಂಡೇಶನ್ ತರಬೇತಿ ತರಗತಿಗಳನ್ನು ಸಂಸ್ಥೆಯಲ್ಲಿ ಆರನೇ ತರಗತಿಯಿಂದಲೇ ಆರಂಭಿಸಲಾಗಿದೆ. IIT/NEET ಫೌಂಡೇಶನ್ ತರಬೇತಿಯು 6ನೇ ತರಗತಿಯಿಂದಲೇ ನೀಡುವುದರಿಂದ ಪಿಯುಸಿ ಹಂತದಲ್ಲಿ ಎದುರಿಸುವ CET/NEET/JEE ಪರೀಕ್ಷೆಗೆ ತುಂಬಾ ಅನುಕೂಲವಾಗುತ್ತದೆ.

ಶೇ. 100ರಷ್ಟು ಭರ್ಜರಿ ಫಲಿತಾಂಶ

ಇನ್ನು ಪರೀಕ್ಷೆಗೆ ಹಾಜರಾದ ಎಲ್ಲಾ 129 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಮೀಕ್ಷಾ 621, ಶ್ರೇಯಸ್ ಎಸ್ ಚಿಕ್ಕಮಠ 615, ಆಯಿಷ ಆನಾಮ್ 611, ಮನ್ವಿತ್ ಬಿ 611, ಅಭಿಜ್ಞಾ 610, ಸೂರ್ಯಪ್ರಕಾಶ್ ಬಿ.ಗಾಣಿಗ 610, ನಿವೇದಿತಾ ಚಂದ್ರ ಮೌಳೇಶ್ವರ ಬಾದಾಮಿ 609, ಶ್ರೀಹರಿ ಮನೀಷ್ 607, ಸನ್ವಿತ್ ಜಿ ಪೂಜಾರಿ 607 , ಚಾರ್ವಿ ಪಿ ಶೆಟ್ಟಿ 605, ಕೌಶಿಕ್ ಶೆಣೈ 600, ಶ್ರೇಯಾ 599, ನಿಹಾರಿಕಾ ರೆಡ್ಡಿ596, ಸಂಚಿತಾ ಆರ್ ಶೆಟ್ಟಿ 596, ಸಿ.ಎಂ. ಧೀರಜ್ ಗೌಡ 595, ದಶಮಿ 595, ಶ್ರೀಶಾ ಎಸ್ ಶೆಟ್ಟಿ 594, ಪ್ರಜ್ವಲ್ ಎಸ್ .ಕುಲಾಲ್ 593, ಬ್ರಾಹ್ಮಿ ಆರ್ ಶೆಟ್ಟಿ 592, ಸಾಯಿನಿಧಿ ಸಿ ಶೆಟ್ಟಿ 592, ಅನುಜ್ ಈಶ್ವರ್ ಅಂಬಲಿ–591, ಬಿ.ಎ ಸಾಹಿಲ್ 588, ಎಚ್.ವಿಜಯಾ ಪೈ–588, ಪ್ರತೀಕ್ಷಾ ಮಡಿವಾಳ 588, ಪ್ರಕೃತಿ ಶೆಟ್ಟಿ 586, ಪೃಥ್ವಿ ರಮೇಶ್ ಶಿರಣ್ಣವರ್ 586, ಪ್ರಥಮ ಆಚಾರ್ 585, ಪ್ರೀತಮ್ ಕುಲಾಲ್–585, ವೈಷ್ಣವಿ ಮಾಧವ ಪ್ರಭು–584, ನವ್ಯಶ್ರೀ 583, ಸಂಪತ್ ಶೆಟ್ಟಿ 580. ಪರೀಕ್ಷೆ ಬರೆದ 129 ವಿದ್ಯಾರ್ಥಿಗಳಲ್ಲಿ 11 ವಿದ್ಯಾರ್ಥಿಗಳು 600ಕ್ಕೂ ಅಧಿಕ ಅಂಕ, 17 ವಿದ್ಯಾರ್ಥಿಗಳು 95%ಕ್ಕಿಂತ ಅಧಿಕ ಅಂಕ ಪಡೆದರೆ, 67 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಅಂಕ ಪಡೆದಿದ್ದಾರೆ.

ಸುಜ್ಞಾನ ಪಿಯು ಕಾಲೇಜು: ಮೊದಲ ಬ್ಯಾಚ್‌ನಲ್ಲೇ ಶೇ. 100 ಫಲಿತಾಂಶ, ರಾಜ್ಯಕ್ಕೆ 9ನೇ Rank

ಕುಂದಾಪುರ: ಸಂಸ್ಥೆಯ ಸ್ಪಂದನಾ ಆರ್ ಶೆಟ್ಟಿ 600 ಅಂಕಕ್ಕೆ 592 ಅಂಕಗಳನ್ನು ಪಡೆದು ರಾಜ್ಯಕ್ಕೆ 9ನೇ Rank ಪಡೆದಿದ್ದಾರೆ. ವಿಶೇಷವೆಂದರೆ ಸ್ಪಂದನಾ ಎಸ್.ಎಸ್.ಎಲ್.ಸಿಯಲ್ಲಿ 84% ಅಂಕ ಪಡೆದರೂ ಕೂಡ ದ್ವಿತೀಯ ಪಿಯುಸಿಯಲ್ಲಿ 98.7% ಅಂಕ ಗಳಿಸುವುದರ ಮೂಲಕ ಶ್ರೇಷ್ಠ ಸಾಧನೆಯನ್ನು ಮೆರೆದಿದ್ದಾರೆ.ಇವರ ಸಾಧನೆಯನ್ನು ಗುರುತಿಸಿ ಸಂಸ್ಥೆಯ ವತಿಯಿಂದ 50,000 ರೂ. ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ ಕಡಿಮೆ ಅಂಕ ಪಡೆದಿದ್ದ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಗಣನೀಯ ಸಾಧನೆ ಮಾಡಿರುವುದು ಸಂಸ್ಥೆಯ ಬೋಧನಾ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ. ಕೇವಲ 11 ವಿದ್ಯಾರ್ಥಿಗಳಿಂದ 2024–2025ರಲ್ಲಿ ಆರಂಭವಾದ ಸುಜ್ಞಾನ ಪಿಯು ಕಾಲೇಜು ದ್ವಿತೀಯ ಪಿಯುಸಿಗೆ ಬೇರೆ ಕಾಲೇಜುಗಳಿಂದ ಸುಮಾರು 100 ವಿದ್ಯಾರ್ಥಿಗಳು ದಾಖಲಾತಿ ಪಡೆದು ಒಟ್ಟು 125 ವಿದ್ಯಾರ್ಥಿಗಳು ಈ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಉತ್ತಮ ಅಂಕ ಗಳಿಸಿ ಕಾಲೇಜಿನ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ.

SSLCಯಲ್ಲಿ 95ಕ್ಕಿಂತ ಅಧಿಕ ಅಂಕ ಗಳಿಸಿದ ಕೇವಲ 9 ವಿದ್ಯಾರ್ಥಿಗಳನ್ನುಒಳಗೊಂಡು ಒಟ್ಟು 125 ವಿದ್ಯಾರ್ಥಿಗಳಿರುವ ಸುಜ್ಞಾನ ಪಿಯು ಕಾಲೇಜಿನ ಪ್ರಥಮ ಬ್ಯಾಚ್‌ನ ಫಲಿತಾಂಶದಲ್ಲಿ 22 ವಿದ್ಯಾರ್ಥಿಗಳು ಶೇಕಡಾ 95ಕ್ಕಿಂತ ಅಧಿಕ ಅಂಕ ಪಡೆದು ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ ಹಾಗೂ ವಿವಿಧ ವಿಭಾಗಗಳಲ್ಲಿ, 57 ವಿದ್ಯಾರ್ಥಿಗಳು ಶೇಕಡಾ 90ಕ್ಕಿಂತ ಅಧಿಕ ಹಾಗೂ 89 ವಿದ್ಯಾರ್ಥಿಗಳು ಶೇಕಡಾ 85ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದು ಉತ್ತಮ ಶೈಕ್ಷಣಿಕ ಸಾಧನೆ ಮಾಡಿದ್ದಾರೆ.

ಸಮ್ಮೆದ ಪಾರೀಸ ಭೋಜ 587, ಸಿಂಚನಾ 586, ಪ್ರತೀಕ್ಷಾ ಎಚ್.ಶೆಟ್ಟಿ 586, ಎನ್ ರಕ್ಷಾ 584, ಅನಘಾ ವಿ. ಶೆಟ್ಟಿ 583 ಶ್ರೀಶಾಂತ್ 582, ಶಿವ ರಾಜ್ ಬಿ. ಶೆಟ್ಟಿ581, ಕೌಶಿಕ್ ಶೆಟ್ಟಿ580, ಪವನ್ ಎ ಕುಲಾಲ್ 579 ಪ್ರಿಯಾಂಕಾ ಶೆಟ್ಟಿ–577 ಸೃಷ್ಟಿ ಶಿವಾಜಿ ನೆಲವಾಡೆ–577 ಜಯರಾಜ್ ಜೆ.ಎಸ್–575 ಸುಶ್ಮಿತಾ ಪ್ರವೀಣ್ ಕುಮಾರ್ ಸುಕಾಲಿ–575 ಭೂಮಿಕಾ ಎಸ್. ಆಚಾರ್ಯ–575 ಪಂಚಮಿ ಚಂದ್ರ ಕುಲಾಲ್–574 ಶ್ರೀಜನ್ ಶ್ರೀಧರ್ ಶೆಟ್ಟಿ–573, ದೇಶಿಕ್ ಕೆ–572 ಸುಜನ್ ಬಿ ಶೆಟ್ಟಿ–572 ನವ್ಯಾ–571 ತನುಷಾ ಎಸ್ ಶೆಟ್ಟಿ–571 ಪೃಥ್ವಿಕ್ –570.

CET/NEET/JEE ತರಬೇತಿಗೆ ಹೆಚ್ಚಿನ ಆದ್ಯತೆ

ದೇಶದ ನಾನಾ ಭಾಗಗಳಲ್ಲಿ CET/ NEET/JEE ತರಬೇತುದಾರರಾಗಿ ಕಾರ್ಯನಿರ್ವಹಿಸಿ ಅನುಭವವುಳ್ಳ ಬೋಧಕ ಸಿಬ್ಬಂದಿಗಳು ಸುಜ್ಞಾನ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ನಿರಂತರ ತರಬೇತಿ ನೀಡುವುದರಿಂದ ವಿದ್ಯಾರ್ಥಿಗಳು CET/NEET/JEE ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆಯಲು ಸಹಕಾರಿಯಾಗುತ್ತದೆ. ಪ್ರಥಮ ಪಿಯುಸಿಯಿಂದಲೇ ತರಬೇತಿಯನ್ನು ಆರಂಭಿಸುವುದರ ಜತೆಗೆ ಪ್ರತಿ ಸೋಮವಾರ Mock Test ಗಳನ್ನು ನಡೆಸಿ ಅದರ ಫಲಿತಾಂಶಗಳನ್ನು ವಿದ್ಯಾರ್ಥಿಗಳ ಪೋಷಕರಿಗೆ ತಿಳಿಸಲಾಗುವುದು.

CET/NEET/JEE ವಿಷಯಕ್ಕೆ ಪ್ರತ್ಯೇಕ Study Material ಅನ್ನು ಸಿದ್ಧಗೊಳಿಸಿ ವಿದ್ಯಾರ್ಥಿಗಳಿಗೆ ನೀಡುವುದರಿಂದ ಅವರ ಕಲಿಕೆಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ.

ಸುಸಜ್ಜಿತ ಕಾಲೇಜು ಹಾಸ್ಟೆಲ್ ಸೌಲಭ್ಯ

ಪಿಯುಸಿ ವಿದ್ಯಾರ್ಥಿಗಳ ನಿರಂತರ ಕಲಿಕೆಯ ಅವಶ್ಯಕತೆಯನ್ನು ಮನಗಂಡು ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಾಸ್ಟೆಲ್ ನಲ್ಲಿ ಬೆಳಗ್ಗೆ 5.15ರಿಂದ ಯೋಗ ಮತ್ತು ಧ್ಯಾನದೊಂದಿಗೆ ಆರಂಭವಾದ ದಿನಚರಿ ರಾತ್ರಿ 10.30ರ Study Hour ತನಕ ವಿಸ್ತಾರಗೊಳ್ಳುತ್ತದೆ. ವಿದ್ಯಾರ್ಥಿಗಳ ಸಂಶಯ ನಿವಾರಣೆಗೆ ಹಾಸ್ಟೆಲ್ ನಲ್ಲಿ Residential Teachers ಇರುವುದರಿಂದ ಅವರ ವಿಷಯವಾರು ಸಂಶಯವನ್ನು ಸದಾ ಕಾಲ ನಿವಾರಿಸಲು ಅನುಕೂಲವಾಗುತ್ತದೆ. ಹಾಸ್ಟೆಲ್ ನಲ್ಲಿ Physics,Chemistry, Mathematics, Biology ಮತ್ತು ಕಾಮರ್ಸ್ ವಿಭಾಗದ ಶಿಕ್ಷಕರು ವಾಸವಿರುವುದರಿಂದ ವಿದ್ಯಾರ್ಥಿಗಳ ಮೇಲೆ ಪ್ರತ್ಯೇಕವಾಗಿ ನಿಗಾ ವಹಿಸಲು ಸಹಕಾರಿಯಾಗುತ್ತದೆ.

ಬಾರ್ಕೂರಿನಲ್ಲಿ ಹೊಸ ಶಾಖೆ ಆರಂಭಿಸಿದ ಸುಜ್ಞಾನ ಎಜುಕೇಶನಲ್ ಟ್ರಸ್ಟ್

ಸುಜ್ಞಾನ ಎಜುಕೇಶನಲ್ ಟ್ರಸ್ಟ್ ಬಾರ್ಕೂರಿನಲ್ಲಿ ಸುಜ್ಞಾನ ನ್ಯಾಷನಲ್ ಜೂನಿಯರ್ ಕಾಲೇಜು ಎಂಬ ಹೆಸರಿನಲ್ಲಿ ತನ್ನ ಹೊಸ ಶಾಖೆಯನ್ನು ಆರಂಭಿಸಿದೆ. ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಈಗಾಗಲೇ ದಾಖಲಾತಿ ಆರಂಭಗೊಂಡಿದೆ.

ADMISSIONS OPEN
I & II PUC
SCIENCE
COMMERCE
NEET LONG TERM
NURSERY TO 10TH STD (1 to 10 STATE)
NURSERY TO 8TH STD (1 to 8 CBSE PROPOSED)
8217527362 / 9845925983 / 9964291755

KISNA

DIAMOND & GOLD JEWELLERY

BY HARI KRISHNA GROUP

CELEBRATE THIS SEASON WITH

NATURAL
DIAMOND JEWELLERY

ಫ್ಲಾಟ್ 40% ರಿಯಾಯಿತಿ*
ಮೇಲೆ ವಜ್ರಾಭರಣಗಳ
ತಯಾರಿಕೆ ಶುಲ್ಕದ

ಫ್ಲಾಟ್ 30% ರಿಯಾಯಿತಿ*
ಮೇಲೆ ಚಿನ್ನದ ಆಭರಣಗಳ
ತಯಾರಿಕೆ ಶುಲ್ಕದ

ಪಡೆಯಿರಿ 10 ಗ್ರಾಂ
ಬೆಳ್ಳಿ ನಾಣ್ಯವನ್ನು ಉಚಿತವಾಗಿ
ವಜ್ರದ ಆಭರಣಗಳನ್ನು
ಖರೀದಿಸಿದರೆ
₹1,00,000 ರಿಂದ ₹2,99,999*

ಪಡೆಯಿರಿ 20 ಗ್ರಾಂ
ಬೆಳ್ಳಿ ನಾಣ್ಯವನ್ನು ಉಚಿತವಾಗಿ
ಹೆಚ್ಚಿನ ಮೌಲ್ಯದ ವಜ್ರದ
ಆಭರಣಗಳನ್ನು ಖರೀದಿಸಿದರೆ
₹3,00,000 ಅಥವಾ ಅದಕ್ಕಿಂತ*

ಪಡೆಯಿರಿ 10 ಗ್ರಾಂ
ಬೆಳ್ಳಿ ನಾಣ್ಯವನ್ನು ಉಚಿತವಾಗಿ
ಹೆಚ್ಚಿನ ಮೌಲ್ಯದ ಚಿನ್ನಾ
ಭರಣ ಖರೀದಿಗೆ
₹3,00,000 ಅಥವಾ ಅದಕ್ಕಿಂತ*

ಷರತ್ತು ಮತ್ತು ನಿಯಮಗಳು ಅನ್ವಯಿಸುತ್ತವೆ*

ನಿಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಳ್ಳಿ
ಪಡೆಯಿರಿ 100%*
— ಮೌಲ್ಯವನ್ನು —

ಉಡುಗೊರೆ ವೋಚರ್
₹50,000 ಮೌಲ್ಯದ ವಜ್ರಾಭರಣ ಖರೀದಿಯ ಮೇಲೆ ₹1,000 ರಿಯಾಯಿತಿ ಮತ್ತು
₹1,00,000 ಮೌಲ್ಯದ ವಜ್ರಾಭರಣ ಖರೀದಿಯ ಮೇಲೆ ₹2,000 ರಿಯಾಯಿತಿ ಪಡೆಯಿರಿ*
(ಮೇ 1 ರಿಂದ ನವೆಂಬರ್ 30, 2026 ರವರೆಗೆ ರಿಡೀಮ್ ಮಾಡಿಕೊಳ್ಳಬಹುದು)

90%* ಖರೀದಿ | 95%* ವಿನಿಮಯ
ವಜ್ರದ ಆಭರಣಗಳ ಮೇಲೆ,
ಮೇಕಿಂಗ್ ಚಾರ್ಜ್ ಸೇರಿದಂತೆ

5% ತ್ವರಿತ ರಿಯಾಯಿತಿ*
ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳ ಮೇಲೆ
ICICI Bank

7% ರಿಯಾಯಿತಿ*
ಸಶಸ್ತ್ರ ಪಡೆಗೆ ವಿಶೇಷ ರಿಯಾಯಿತಿ
ವಜ್ರದ ಮೌಲ್ಯದ ಮೇಲೆ
(ಅಪರೂಪದ ಮೇಲೆ ಅನ್ವಯಿಸುವುದಿಲ್ಲ) (ಸಾಲಿಟೇರ್‌ಗಳು)
ಚಿನ್ನದ ಆಭರಣಗಳ ಮೇಲೆ
(ತಯಾರಿಕಾ ಶುಲ್ಕಗಳ ಮೇಲೆ)
ನಮ್ಮ ನಡೆಯುತ್ತಿರುವ ಪ್ರಚಾರಗಳೊಂದಿಗೆ ಹೆಚ್ಚುವರಿ ಪ್ರಯೋಜನ*

10+1
ಸ್ಥಿರ ಮಾಸಿಕ ಕಂತು ಯೋಜನೆ
10 ಕಂತುಗಳನ್ನು ಪಾವತಿಸಿ, 11ನೇ ಕಂತಿನಲ್ಲಿ
100%* ರಿಯಾಯಿತಿ ಪಡೆಯಿರಿ!"

ನಮ್ಮ ಅಸ್ತಿತ್ವದಲ್ಲಿರುವ ವಿಶೇಷ ಶೋರೂಮ್‌ಗಳು: ಬೆಳಗಾವಿ | ಬೆಂಗಳೂರು – ಬನಶಂಕರಿ | ಜಯನಗರ | ಫೀನಿಕ್ಸ್ ಮಾರ್ಕೆಟ್‌ಸಿಟಿ ಮಾಲ್ | ದಿ ಗ್ಯಾಲೇರಿಯಾ ಮಾಲ್ | **ಮೈಸೂರು**
ಮುಂದಿನ ಶೋರೂಮ್: ರಾಯಚೂರು

KISNA ಈಗ ಭಾರತದಾದ್ಯಂತ **150+** ವಿಶೇಷ ಶೋ ರೂಂಗಳು ಮತ್ತು **1,500** ಕ್ಕೂ ಹೆಚ್ಚು ಶಾಪ್-ಇನ್-ಶಾಪ್ ಮಳಿಗೆಗಳಲ್ಲಿ ಲಭ್ಯವಿದೆ। www.kisna.com

SCAN HERE

Bennett & Coleman
THE TIMES OF INDIA
www.vijaykarnataka.com
ಶನಿವಾರ,25 ಏಪ್ರಿಲ್ 2026 | ಪುಟಗಳು: 19+4+4 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 114
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಅಂಗ, ವಂಗ, ಕಳಿಂಗದಲ್ಲಿ ಮುಂದಿನ ತಿಂಗಳು ಬಿಜೆಪಿ ಸರಕಾರ ಇರಲಿದೆ: ಅಮಿತ್ ಶಾ ವಿಶ್ವಾಸ

₹14,020 ↓	₹15, 295 ↓	₹2,60,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಗೇಮಿಂಗ್ ವೇಳೆ ನಟ ಅಕ್ಷಯ್ ಕುಮಾರ್ ಪುತ್ರಿಗೆ ಅಶ್ಲೀಲ ಸಂದೇಶ, ಒಬ್ಬ ಆರೋಪಿ ಬಂಧನ

ವಿಕ ಹೊಂಗಿರಣ

ಏನಾದರೂ ಹಾನಿ ಮಾಡಬೇಕೆಂದರೆ ಮಾತ್ರ ನಿಮಗೆ ಅಧಿಕಾರ, ಬಲ ಬೇಕು. ಉಳಿದಂತೆ ಬೇರೆನು ಮಾಡಬೇಕೆಂದರೂ ಪ್ರೀತಿಯೊಂದೇ ಸಾಕು.

– ಚಾರ್ಲಿ ಚಾಪ್ಲಿನ್

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹ 90/- ಕೋಲಾರ 88/- ತುಮಕೂರು 88/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹130/- ಕೋಲಾರ 128/- ತುಮಕೂರು 128/-
ವಿಥ್ ಸ್ಕಿನ್ ₹183/- ಕೋಲಾರ 180/- ತುಮಕೂರು 180/-
ವಿಥೌಟ್ ಸ್ಕಿನ್ ₹209/- ಕೋಲಾರ 206/- ತುಮಕೂರು 206/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸಿಇಟಿ ಪರೀಕ್ಷೆಯಲ್ಲಿ ಜನಿವಾರ ಜಟಾಪಟಿ »02

ನೀಟ್ ಫಲಿತಾಂಶಕ್ಕೂ ಮೊದಲೇ ಎಂಜಿನಿಯರಿಂಗ್ ಸೀಟ್ ಭರ್ತಿ »05

ಶೇ.50ರ ಮಿತಿಯ ಕಟ್ಟಪ್ಪಣೆ ಒಳಗೆ ಒಳಮೀಸಲು ಹಂಚಿಕೆ | ಸಿದ್ದರಾಮಯ್ಯ ಸರಕಾರದ ಐತಿಹಾಸಿಕ ತೀರ್ಮಾನ | ಮೂರೂವರೆ ದಶಕದ ಹೋರಾಟಕ್ಕೆ ಜಯ

ಎಸ್‌ಸಿ ಒಳಮೀಸಲಿಗೆ ಜೈ

■ **ವಿಕ ಸುದ್ದಿಲೋಕ** ಬೆಂಗಳೂರು

ಪರಿಶಿಷ್ಟ ಜಾತಿಯ 101 ಉಪಜಾತಿಗಳಿಗೆ ಒಳಮೀಸಲು ಕಲ್ಪಿಸುವ ಐತಿಹಾಸಿಕ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯ ರಾಜ್ಯ ವಿಶೇಷ ಸಚಿವ ಸಂಪುಟ ಸಭೆ ಕೈಗೊಂಡಿದೆ. ಒಟ್ಟು ಮೀಸಲು ಪ್ರಮಾಣ ಶೇ.50 ಮೀರಬಾರದು ಎಂಬ ಕೋರ್ಟ್ ಕಟ್ಟಪ್ಪಣೆಯ ಮಿತಿಯಲ್ಲೇ ಪರಿಶಿಷ್ಟ ಜಾತಿಗೆ ಲಭ್ಯವಿರುವ ಶೇ.15 ಮೀಸಲು ಪ್ರಮಾಣವನ್ನು ಮೂರು ಗುಂಪುಗಳಲ್ಲಿ ಒಳ ಮೀಸಲಾಗಿ ನಿಗದಿ ಪಡಿಸಲಾಗಿದೆ. ಜತೆಗೆ ತಕ್ಷಣದಿಂದಲೇ ನೇಮಕ ಪ್ರಕ್ರಿಯೆ ಕೈಗೊಳ್ಳುವುದಕ್ಕೂ ಸಂಪುಟ ಸಭೆ ನಿರ್ಧರಿಸಿದೆ.

ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಶೇ.5.25, ಬಲಗೈ ಶೇ.5.25 ಎಂದು ಸಮನಾಗಿ ಹಂಚಲಾಗಿದೆ. ಸ್ಪೃಶ್ಯ ಜಾತಿಗಳಾಗಿರುವ ಕೊರಮ, ಕೊರಚ, ಲಂಬಾಣಿ, ಭೋವಿ ಜತೆಗೆ ಒಟ್ಟು 59 ಅಲೆಮಾರಿ ಜಾತಿಗಳನ್ನು 'ಸಿ' ಗುಂಪಿನಲ್ಲಿ ಗುರುತಿಸಿ ಶೇ.4.5 ಒಳ ಮೀಸಲು ಕಲ್ಪಿಸಲಾಗಿದೆ.

ವಿಶೇಷವೆಂದರೆ, ಉದ್ಯೋಗ ಮತ್ತು ಶಿಕ್ಷಣದ ಅವಕಾಶಗಳಲ್ಲಿ ಸಂವಿಧಾನಬದ್ಧ ಮೀಸಲು ಅವಕಾಶದಿಂದ ಹೆಚ್ಚು ವಂಚನೆಗೆ ಒಳಗಾಗಿರುವ ಅಲೆಮಾರಿ ಜಾತಿಗಳಿಗೆ ಒಳ ಮೀಸಲು ಒಳಗೊಂಡು ಒಳ ಮೀಸಲು ಕಲ್ಪಿಸಲಾಗಿದೆ. ಅಂದರೆ, 5 ಸ್ಥಾನಗಳಲ್ಲಿ ಒಂದು ಅವಕಾಶ ಅಲೆಮಾರಿಗಳಿಗೆ ಸಿಗುವಂತೆ ಶೇ.20 ಒಳ ಮೀಸಲು ನಿಗದಿಪಡಿಸಲಾಗಿದೆ.

ಇದರೊಂದಿಗೆ ಸುಮಾರು ಮೂರೂವರೆ ದಶಕಗಳ ದಲಿತ ಒಳ ಮೀಸಲು ಹಕ್ಕೊತ್ತಾಯ ಹಾಗೂ ಈ ಒಳ ಮೀಸಲು ನಿಗದಿ ವಿಚಾರದಲ್ಲಿ ಎದುರಾಗಿದ್ದ ಕಾನೂನಾತ್ಮಕ ಹಾಗೂ ತಾಂತ್ರಿಕ ಕಗ್ಗಂಟು ಬಿಡಿಸುವ ಕಠಿಣ ಸವಾಲಿನಲ್ಲಿ ವಿಶೇಷ ಸಂಪುಟ ಸಭೆ ಯಶಸ್ವಿಯಾಗಿದೆ. ಎಲ್ಲ ಪರಿಶಿಷ್ಟ ಸಮುದಾಯಗಳಿಗೂ

ಶೇ.15ರಲ್ಲಿ ಯಾರಿಗೆ ಎಷ್ಟು?

'ಎ' ಗುಂಪು	ಎಡಗೈ (ಮಾದಿಗ ಮತ್ತು ಇತರರು)	5.25%
'ಬಿ' ಗುಂಪು	ಬಲಗೈ (ಛಲವಾದಿ ಮತ್ತು ಇತರರು)	5.25%
'ಸಿ' ಗುಂಪು	ಸ್ಪೃಶ್ಯ, 59 ಅಲೆಮಾರಿ ಜಾತಿಗಳು	4.5%

ಸಮಾಧಾನ ತರುವಂತಹ ತೀರ್ಮಾನ ಇದಾಗಿದ್ದು, ಸ್ವಲ್ಪ ತಡವಾದರೂ ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸುವ ಬದ್ಧತೆಯನ್ನು ಈಡೇರಿಸಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ಈ ಮಾತಿಗೆ ಕೆ.ಎಚ್.ಮುನಿಯಪ್ಪ (ಎಡಗೈ), ಡಾ.ಜಿ. ಪರಮೇಶ್ವರ್ (ಬಲಗೈ) ಹಾಗೂ 'ಸಿ' ಗುಂಪಿನ ಸ್ಪೃಶ್ಯ ಜಾತಿಗಳನ್ನು ಪ್ರತಿನಿಧಿಸುವ ಶಿವರಾಜ್ ತಂಗಡಗಿ ಅವರು ಸಮ್ಮತಿ ವ್ಯಕ್ತಪಡಿಸಿದರು.

ವಿವರ »14

> ಸರ್ವರಿಗೂ ಸಮಪಾಲು ಸಮಬಾಳು ಎಂಬ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಎಲ್ಲ ಶೋಷಿತರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲಾಗಿದೆ. ಯಾವುದೇ ಆಕ್ಷೇಪಕ್ಕೆ ಅವಕಾಶ ಕೊಡದೆ ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಸಮ್ಮತ ತೀರ್ಮಾನ ತೆಗೆದುಕೊಳ್ಳಲಾಗಿದೆ.
>
> – **ಸಿದ್ದರಾಮಯ್ಯ** ಸಿಎಂ

56,000 ಹುದ್ದೆಗಳ ಭರ್ತಿ ಪ್ರಕ್ರಿಯೆ ಶುರು

ಒಳಮೀಸಲು ಕಾರಣದಿಂದಾಗಿ ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇದ್ದ ಸುಮಾರು 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಈಗ ಒಳಮೀಸಲು ಪ್ರಮಾಣ ನಿಗದಿಯಾಗಿರುವುದರಿಂದ ತಕ್ಷಣವೇ ಹೊಸ ಅಧಿಸೂಚನೆ ಹೊರಡಿಸಲು ಸರಕಾರ ಸಿದ್ಧತೆ ನಡೆಸಿದೆ. ಶೇ.17ರ ಮೀಸಲು ಪ್ರಮಾಣದ ಹಳೆಯ ಅಧಿಸೂಚನೆಯನ್ನು ವಾಪಸ್ ಪಡೆದು, ಹೊಸ ಮಾನದಂಡಗಳಡಿ ನೇಮಕ ನಡೆಯಲಿದೆ.

ಚಡ್ಡಾ ಸೇರಿ 7 ಸಂಸದರು ಆಪ್‌ಗೆ ಬೈ

ಕೇಜ್ರಿವಾಲ್‌ಗೆ ಆಘಾತ | ಕಮಲದ ತೆಕ್ಕೆಗೆ ಬಂಡಾಯ ನಾಯಕರು

ಹೊಸದಿಲ್ಲಿ: ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷಕ್ಕೆ ಶುಕ್ರವಾರ ಭಾರಿ ಆಘಾತ ತಟ್ಟಿದೆ. ಪಕ್ಷದ ಪ್ರಭಾವಿ ನಾಯಕ ಹಾಗೂ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಸೇರಿ ಒಟ್ಟು ಏಳು ಸಂಸದರು ಆಪ್ ತೊರೆದಿದ್ದಾರೆ. ಈ ಪೈಕಿ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಹಾಗೂ ಅಶೋಕ್ ಮಿತ್ತಲ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾಗಿ ಅಧಿಕೃತವಾಗಿ 'ಕಮಲ' ಪಾಳಯಕ್ಕೆ ಸೇರ್ಪಡೆಗೊಂಡಿದ್ದಾರೆ.

''ಆಪ್‌ನ ಏಳು ರಾಜ್ಯಸಭೆ ಸದಸ್ಯರು ಪಕ್ಷ ತೊರೆದು ಬಿಜೆಪಿ ಸೇರಲಿದ್ದಾರೆ. ಪಕ್ಷದ ಮೂರನೇ ಎರಡರಷ್ಟು ಸದಸ್ಯರು ಬಿಜೆಪಿಯೊಂದಿಗೆ ವಿಲೀನಗೊಳ್ಳುತ್ತಿದ್ದಾರೆ. ಈ ಸಂಬಂಧ ರಾಜ್ಯಸಭೆಯ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುತ್ತಿದ್ದೇವೆ. ಹರ್ಭಜನ್ ಸಿಂಗ್, ರಾಜೇಂದ್ರ ಗುಪ್ತಾ, ವಿಕ್ರಮ್ ಸಾಹ್ನಿ, ಸ್ವಾತಿ ಮಾಲಿವಾಲ್ ಸಹ ಬಿಜೆಪಿಗೆ ಸೇರುತ್ತಿದ್ದಾರೆ,'' ಎಂದು ಚಡ್ಡಾ ಪ್ರಕಟಿಸಿದ್ದಾರೆ.

ಈ ಬೆಳವಣಿಗೆಯು ದಿಲ್ಲಿ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದೆ. ಕಳೆದ ವರ್ಷ ಚುನಾವಣೆಯಲ್ಲಿ ದಿಲ್ಲಿಯಲ್ಲಿ ಅಧಿಕಾರ ಕಳೆದುಕೊಂಡ ಬಳಿಕ ಆಪ್‌ಗೆ ತಟ್ಟಿದ ದೊಡ್ಡ ಶಾಕ್ ಇದಾಗಿದೆ.



ದಿಲ್ಲಿಯ ಬಿಜೆಪಿ ಕಚೇರಿಯಲ್ಲಿ ರಾಘವ್ ಚಡ್ಡಾ ಅವರನ್ನು ಬರಮಾಡಿಕೊಂಡ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್.

ವಿವರ »12

ರಾಜ್ಯ ಬಿಜೆಪಿ ಮುಖಂಡನ ಪುತ್ರನಿಗೆ ಹೈ ದಂಡದ ಚಾಟಿ

ಬೆಂಗಳೂರು: ಇಪ್ಪತ್ತೊಂದು ವರ್ಷದ ವಿದ್ಯಾರ್ಥಿನಿಯನ್ನು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ ತಾಯಿಯಾಗುವಂತೆ ಮಾಡಿ ನಂತರ ಕೈತೊಳೆದುಕೊಳ್ಳಲು ಯತ್ನಿಸುತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಿಜೆಪಿ ಮುಖಂಡ ಜಗನ್ನಿವಾಸ್ ರಾವ್ ಪುತ್ರ ಕೃಷ್ಣ ಜೆ. ರಾವ್‌ಗೆ ಹೈಕೋರ್ಟ್ ದಂಡದ ಚಾಟಿ ಬೀಸಿದೆ.

ಆತನ ವರ್ತನೆ ಬಗ್ಗೆ ಕಿಡಿಕಾರಿರುವ ನ್ಯಾಯಾಲಯ, ಸಂತ್ರಸ್ತೆ ಮತ್ತು ಆಕೆಯ ಮಗುವಿನ ಪೋಷಣೆಗೆ ಮಾಸಿಕ 75 ಸಾವಿರ ರೂ.ಗಳನ್ನು ಪಾವತಿಸಬೇಕು ಎಂದು ಆರೋಪಿಗೆ ನಿರ್ದೇಶನ ನೀಡಿದೆ.

ವಿವರ »03

ಅವಧಿ ಪೂರ್ವ ಮುಂಗಾರು?

ಹೊಸದಿಲ್ಲಿ: ಭಾರತದ ಬಹುತೇಕ ಭಾಗಗಳಲ್ಲಿ ಸುಡುಬಿಸಿಲಿನ ನಡುವೆ, ಐರೋಪ್ಯ ಹವಾಮಾನ ಸಂಸ್ಥೆ ನಿರಾಳದ ಸುದ್ದಿ ನೀಡಿದೆ. ಈ ಬಾರಿ ನೈರುತ್ಯ ಮುಂಗಾರು ಮಾರುತ ಅವಧಿ ಪೂರ್ವವಾಗಿ ಕೇರಳ ಪ್ರವೇಶಿಸಲಿದೆ ಎಂದು ಐರೋಪ್ಯ ಹವಾಮಾನ ಮುನ್ಸೂಚನಾ ಸಂಸ್ಥೆ 'ಇಸಿಎಂಡಬ್ಲ್ಯುಎಫ್' ಭವಿಷ್ಯ ನುಡಿದಿದೆ.

ಸುಮಾರು ಒಂದು ವಾರಕ್ಕೂ ಮೊದಲೇ ಮೇ ಅಂತ್ಯದ ವೇಳೆಗೆ ದಕ್ಷಿಣದ ರಾಜ್ಯಗಳಲ್ಲಿ ಮುಂಗಾರು ಆಗಮಿಸಲಿದೆ. ದಕ್ಷಿಣದ ರಾಜ್ಯಗಳಲ್ಲಿ ಆರಂಭದಲ್ಲಿ ವಾಡಿಕೆಗಿಂತಲೂ ಅಧಿಕ ಮಳೆ ಸುರಿಯಲಿದೆ ಎಂದು ಸಂಸ್ಥೆಯು ಹೇಳಿದೆ. ಹೀಗಾಗಿ ಜೂನ್ ಮೊದಲ ವಾರದವರೆಗೂ ಬೇಸಿಗೆ ವಿಸ್ತರಿಸಬಹುದೆಂಬ ಆತಂಕ ಕೊಂಚ ಮಟ್ಟಿಗೆ ದೂರಾಗಿದೆ.

ಸಿಇಟಿ ಪ್ರವೇಶಕ್ಕೆ ಜನಿವಾರ ಜಟಾಪಟಿ

- ಖಾಸಗಿ ಕಾಲೇಜಿನ ಮೂವರು ಸಿಬ್ಬಂದಿ ಅಮಾನತು
- ಸೂಕ್ತ ಪರಿಶೀಲನೆ ನಡೆಸುವಂತೆ ಡಿಸಿಗೆ ಪ್ರಾಧಿಕಾರದ ಪತ್ರ
- ತಪ್ಪಿತಸ್ಥರ ವಿರುದ್ಧ ಕ್ರಮವಾಗುತ್ತೆ ಎಂದ ಸಚಿವ ಡಾ.ಎಂ.ಸಿ.ಸುಧಾಕರ್

ವಿಕ ಸುದ್ದಿಲೋಕ ಬೆಂಗಳೂರು

ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಕಲ್ಪಿಸಿದ್ದ ಆರೋಪದ ಮೇರೆಗೆ ನಗರದ ಮಡಿವಾಳದ ಖಾಸಗಿ ಕಾಲೇಜಿನ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಪರೀಕ್ಷೆ ವೇಳೆ ವಸ್ತ್ರಸಂಹಿತೆ ನೆಪದಲ್ಲಿ ಜನಿವಾರ ತೆಗೆಸಿದ್ದ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಕಾಲೇಜಿನ ಆಡಳಿತ ಮಂಡಳಿ ಈ ಕ್ರಮ ಜರುಗಿಸಿದೆ.

ಏ.23ರಂದು ನಡೆದ ಸಿಇಟಿ ಭೌತಶಾಸ್ತ್ರ ಹಾಗೂ ರಾಸಾಯನಶಾಸ್ತ್ರ ವಿಷಯಗಳ ಪರೀಕ್ಷೆ ವೇಳೆ ಕೋರಮಂಗಲದ ಖಾಸಗಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿ ಪ್ರವೇಶ ನೀಡಿದ್ದ ಬಗ್ಗೆ ಆರೋಪ ಕೇಳಿ ಬಂದಿತ್ತು. ಆನಂದ್ ಸುಧೀರ್‌ರಾವ್ ಎಂಬ ಅಭ್ಯರ್ಥಿ ಸೇರಿದಂತೆ ಐವರು ವಿದ್ಯಾರ್ಥಿಗಳ ಜನಿವಾರ ತೆಗೆಸಲಾಗಿದೆ ಎಂದು ಆರೋಪಿಸಲಾಗಿತ್ತು. ಘಟನೆ ಬಗ್ಗೆ ಸಾಕಷ್ಟು ವಿರೋಧ ವ್ಯಕ್ತವಾದ ಬೆನ್ನಲ್ಲೇ ಕಾಲೇಜಿನ ಡಿ. ಸುಧಾಕರ್, ಆರ್. ಸರಿತಾ ಹಾಗೂ ಗಿರಿಜಮ್ಮ ಎಂಬುವವರನ್ನು ವಿಚಾರಣೆಗೆ ಕಾಯ್ದಿರಿಸಿ ಕಾಲೇಜಿನ ಆಡಳಿತ ಮಂಡಳಿ ಅಮಾನತುಗೊಳಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ''ಈ ರೀತಿಯ ಕೃತ್ಯ ನಡೆಸುವವರ ಮನಸ್ಥಿತಿ ಹೇಗಿದೆ ಎಂಬುದನ್ನು ಪತ್ತೆಹಚ್ಚಬೇಕು. ಯಾರೇ ತಪ್ಪು ಮಾಡಿದ್ದರೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು,'' ಎಂದರು.

ಈ ಬಗ್ಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿರುವ ಎಚ್.ಪ್ರಸನ್ನ, ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಜತೆಗೆ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಕೋರಿದ್ದಾರೆ.

''ಕಳೆದ ವರ್ಷ ನಡೆದ ಘಟನೆ ಉಲ್ಲೇಖಿಸಿ ಸ್ಪಷ್ಟ ಸೂಚನೆ ನೀಡಲಾಗಿತ್ತು. ಆದರೆ, ಉದ್ದೇಶಪೂರ್ವಕವಾಗಿ ಮತ್ತೆ ಈ ಕೃತ್ಯ ನಡೆಸಿರುವಂತೆ ಕಾಣುತ್ತಿದೆ. ಈ ಕುರಿತು ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು,'' ಎಂದು ಕೆಇಎದ ಎಚ್.ಪ್ರಸನ್ನ ತಿಳಿಸಿದ್ದಾರೆ.

ಎಫ್‌ಐಆರ್ ದಾಖಲು: ಜನಿವಾರ ತೆಗೆಸಿದ್ದ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಖಾಸಗಿ ಪದವಿ ಪೂರ್ವ ಕಾಲೇಜಿನ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಗುರುವಾರ ಸಿಇಟಿ ಪರೀಕ್ಷೆಗೆ ಬಂದಿದ್ದ ವೇಳೆ ಜನಿವಾರ ತೆಗೆಸಿದ್ದಾರೆ ಎಂದು ಆರೋಪಿಸಿದ್ದ ವಿದ್ಯಾರ್ಥಿಯ ತಂದೆ ರಘುಬೀರ್ ದಾಸ್ ಅವರು ನೀಡಿದ ದೂರಿನ ಅನ್ವಯ, ಕಾಲೇಜಿನ ಸಿಬ್ಬಂದಿ ವಿರುದ್ಧ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದನ್ವಯ ಶುಕ್ರವಾರ ಎಫ್‌ಐಆರ್ ದಾಖಲಿಸಲಾಗಿದೆ.

ತನಿಖೆಗೆ ಸಮಿತಿ ರಚನೆ

ವಿದ್ಯಾರ್ಥಿಗಳ ಜನಿವಾರ ತೆಗೆಸಿ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಕಲ್ಪಿಸಿದ ಪ್ರಕರಣದ ಬಗ್ಗೆ ತನಿಖೆ ನಡೆಸಲು ಬೆಂಗಳೂರು ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ನಾಲ್ವರನ್ನು ಒಳಗೊಂಡ ತನಿಖಾ ತಂಡ ರಚಿಸಿರುವ ಜಿಲ್ಲಾಧಿಕಾರಿ, ಎರಡು ದಿನಗಳೊಳಗೆ ಘಟನೆ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ಸಿಇಟಿ, ನೀಟ್ ಪರೀಕ್ಷೆ ಸಂದರ್ಭದಲ್ಲಿ ಜನಿವಾರ ಕತ್ತರಿಸಿ, ಕೆಪಿಎಸ್ಸಿ ಪರೀಕ್ಷೆಯಲ್ಲಿ ಮಾಂಗಲ್ಯ ತೆಗೆಸಿ ಪರೀಕ್ಷೆ ಬರೆಯುವಂತೆ ಹೇಳಿದ್ದ ಕಾಂಗ್ರೆಸ್ ಸರಕಾರ ಈ ವರ್ಷವೂ ತನ್ನ ಹಳೆಚಾಳಿ ಮುಂದುವರಿಸಿದೆ. ಕೋರಮಂಗಲದ ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಜನಿವಾರ ತೆಗೆಸಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುವ ಮೂಲಕ ಮತ್ತೆ ಹಿಂದೂ ಸಮಾಜದ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತಂದಿದೆ.

-ಆರ್.ಅಶೋಕ್
ವಿಧಾನಸಭೆ ಪ್ರತಿಪಕ್ಷ ನಾಯಕ

ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್–2026 ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಆಶಯ

ಕೃಷಿ ತಂತ್ರಜ್ಞಾನಕ್ಕೂ ಬೆಂಗಳೂರು ರಾಜಧಾನಿಯಾಗಲಿ

ವಿಕ ಸುದ್ದಿಲೋಕ ಬೆಂಗಳೂರು

''ಐಟಿ ಕ್ಷೇತ್ರದಂತೆ ಕೃಷಿ ತಂತ್ರಜ್ಞಾನಕ್ಕೂ ಬೆಂಗಳೂರು ರಾಜಧಾನಿಯಾಗಬೇಕು.ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು'' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಅರಮನೆ ಆವರಣದಲ್ಲಿ ಏರ್ಪಡಿಸಿರುವ ಮೂರು ದಿನಗಳ 'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್–2026' ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು.

''ರಾಜ್ಯದ ಸಮಗ್ರ ಅಭಿವೃದ್ಧಿಗೆ ಎಐ ಸೇರಿದಂತೆ ಎಲ್ಲ ಕ್ಷೇತ್ರಗಳ ತಂತ್ರಜ್ಞಾನ ಬಳಸಿಕೊಳ್ಳಬೇಕು. ಆಗ ಕೃಷಿ ಮತ್ತಷ್ಟು ಸ್ಮಾರ್ಟ್ ಆಗುತ್ತದೆ. ಈ ದಿಸೆಯಲ್ಲಿ ಎಫ್‌ಕೆಸಿಸಿಐನ ಪ್ರಯತ್ನ ಉತ್ತಮವಾಗಿದೆ,'' ಎಂದು ಸಿಎಂ ಮೆಚ್ಚುಗೆ ವ್ಯಕ್ತಪಡಿಸಿದರು.

''ಕೃಷಿ ಲಾಭದಾಯಕವಾದರೆ ಯುವ ಜನತೆ ಸಹಜವಾಗಿ ಕೃಷಿಯತ್ತ ಮುಖಮಾಡುತ್ತಾರೆ. ಈ ದಿಸೆಯಲ್ಲಿ ಸರಕಾರ ಹಲವು ಯೋಜನೆ ರೂಪಿಸಿದೆ. ಈ ಉದ್ದೇಶಕ್ಕೆ ಕೈಗಾರಿಕೆಗಳೂ ಕೈಜೋಡಿಸಬೇಕು,'' ಎಂದು ಮನವಿ ಮಾಡಿದರು.

ಕೃಷಿ ಭಾಗ್ಯ ಪುನರ್ ಜಾರಿ: ''ರಾಜ್ಯದಲ್ಲಿ ಹೆಚ್ಚು ಒಣಭೂಮಿಯಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಬಿಜೆಪಿಯವರು ಅಧಿಕಾರಕ್ಕೆ ಬಂದಾಗ ಕೃಷಿ ಭಾಗ್ಯ ಯೋಜನೆಯನ್ನು ಸ್ಥಗಿತಗೊಳಿಸಿದ್ದು, ನಮ್ಮ ಸರಕಾರ ಈ ಯೋಜನೆಯನ್ನು ಮರುಜಾರಿಗೊಳಿಸಿದೆ. ಸುಮಾರು 83 ಲಕ್ಷ ರೈತರಿಗೆ 70 ಸಾವಿರ ಕೋಟಿ ರೂ.ಗಳ ಕೃಷಿ ಸಾಲ ನೀಡಲಾಗಿದೆ. ಕಳೆದ ವರ್ಷ 8 ಸಾವಿರ ಕೋಟಿ ರೂ.ಗಳನ್ನು ಮೂಲಭೂತ ಸೌಕರ್ಯಗಳಿಗೆ ಮೀಸಲಿಡಲಾಗಿತ್ತು. ಬಂಡವಾಳ ಹೂಡಿಕೆ ಅಧಿಕಗೊಳ್ಳಬೇಕು. ಕೈಗಾರಿಕೆ, ಗ್ರಾಮೀಣಾಭಿವೃದ್ಧಿಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದ್ದು, ಕೃಷಿ ಕ್ಷೇತ್ರದಲ್ಲಿಯೂ ಹೂಡಿಕೆಗಳು ಹೆಚ್ಚಾಗಬೇಕು. ಆಗ ಮಾತ್ರ ಕೃಷಿ ಲಾಭದಾಯಕವಾಗಲಿದೆ,'' ಎಂದರು.

ಪ್ರದರ್ಶನಗಳು ಪ್ರತ್ಯೇಕವಾಗಿರಬೇಕು: ''ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್–2026 ರೈತರಿಗೆ ಸಹಕಾರಿಯಾಗಿದೆ. ಇಲ್ಲಿ ಸಾವಯವ ಕೃಷಿ ಹಾಗೂ ಯಂತ್ರೋಪಕರಣಗಳ ವಸ್ತುಪ್ರದರ್ಶನ ಏರ್ಪಡಿಸಿರುವುದು ಉದ್ಯಮಿಗಳಾಗುವವರಿಗೆ ಉತ್ತಮ ವೇದಿಕೆಯಾಗಿದೆ. ಆದರೆ, ವಸ್ತುಪ್ರದರ್ಶನವನ್ನು ಪ್ರತ್ಯೇಕವಾಗಿ ಆಯೋಜಿಸುವುದು ಉತ್ತಮ. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವಂತಾಗಬೇಕು,'' ಎಂದು ಸಿಎಂ ಸಲಹೆ ನೀಡಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ''ರಾಜ್ಯದ ಆದಾಯದಲ್ಲಿ ಕೃಷಿ ಕ್ಷೇತ್ರ ಶೇ.17ರಷ್ಟು ಕೊಡುಗೆ ನೀಡುವುದರೊಂದಿಗೆ ಶೇ.58ರಷ್ಟು ಜನರಿಗೆ ಉದ್ಯೋಗ ಒದಗಿಸುವ ಪ್ರಮುಖ ಕ್ಷೇತ್ರವಾಗಿದೆ. 2025–26ನೇ ಸಾಲಿನಲ್ಲಿ ದೇಶದ ಆಹಾರ ಉತ್ಪಾದನೆ 355 ದಶಲಕ್ಷ ಟನ್ ತಲುಪುವ ನಿರೀಕ್ಷೆಯಿದ್ದು, ಕರ್ನಾಟಕ ರಾಜ್ಯದಲ್ಲಿಯೂ ಆಹಾರ ಉತ್ಪಾದನೆ 155–160 ದಶಲಕ್ಷ ಟನ್‌ನಷ್ಟು ಸಾಧನೆಯಾಗಿದೆ,'' ಎಂದರು.

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಟ್ರು ಆಲ್ಟ್ ಬಯೋ ಎನರ್ಜಿ ಸಂಸ್ಥಾಪಕ ವಿಜಯ್ ನಿರಾಣಿ, ಇಸ್ರೇಲ್ ಜನರಲ್ ಕಾನ್ಸುಲ್ ಆರ್ಲಿ ವೇಟ್ಜ್‌ಮನ್, ಎಫ್‌ಕೆಸಿಸಿಐ ಸದಸ್ಯೆ ರೂಪಾರಾಣಿ, ಕೆಪೆಕ್ ಎಂಡಿ ಸಿ.ಎನ್. ಶಿವಪ್ರಕಾಶ್, ಎಫ್‌ಕೆಸಿಸಿಐ ನಿರ್ದೇಶಕ ಕೆ.ವಿ. ರಾಜೇಂದ್ರಕುಮಾರ್, ಎಫ್‌ಕೆಸಿಸಿಐ ಪದಾಧಿಕಾರಿಗಳಾದ ಬಿ.ಪಿ. ಶಶಿಧರ್, ಟಿ. ಸಾಯಿರಾಮ್ ಪ್ರಸಾದ್, ಎಂ.ಜಿ. ಬಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026' ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಕೃಷಿ ಸಚಿವ ಚಲುವರಾಯಸ್ವಾಮಿ, ಎಫ್‌ಕೆಸಿಸಿಐ ನಿರ್ದೇಶಕ ಕೆ.ವಿ. ರಾಜೇಂದ್ರಕುಮಾರ್, ವಿಜಯ್ ನಿರಾಣಿ ಉಪಸ್ಥಿತರಿದ್ದರು.

ಗ್ಲೋಬಲ್ ಅಗ್ರಿ ಟೆಕ್ ಸಮ್ಮೇಳನ ಮೂಲಕ ಉದ್ಯಮಿಗಳು ಮತ್ತು ರೈತರನ್ನು ಒಂದೇ ವೇದಿಕೆಯಡಿ ಸೇರಿಸಲಾಗಿದೆ. ರೈತರು ಮತ್ತು ಉದ್ಯಮಿಗಳಿಗೆ ಬೇಕಾದ ಸಮಗ್ರ ಮಾಹಿತಿಯೂ ಒಂದೇ ಸೂರಿನಡಿ ದೊರೆಯಲಿದೆ.

-ಉಮಾ ರೆಡ್ಡಿ, ಎಫ್‌ಕೆಸಿಸಿಐ ಅಧ್ಯಕ್ಷೆ

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಬಿಜೆಪಿ ಮುಖಂಡನ ಪುತ್ರನಿಗೆ ಶಾಸ್ತಿ

ವಂಚನೆಗೊಳಗಾಗಿ 'ತಾಯಿ'ಯಾದ ವಿದ್ಯಾರ್ಥಿನಿಯ ನೆರವಿಗೆ ನಿಂತ ಹೈಕೋರ್ಟ್

ಮಗು, ಸಂತ್ರಸ್ತೆ ಪೋಷಣೆಗೆ ಮಾಸಿಕ 75 ಸಾವಿರ ರೂ. ನೀಡಲು ಕಟ್ಟಪ್ಪಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಇಪ್ಪತ್ತೊಂದು ವರ್ಷದ ವಿದ್ಯಾರ್ಥಿನಿಯನ್ನು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ ತಾಯಿಯಾಗುವಂತೆ ಮಾಡಿ ನಂತರ ಕೈತೊಳೆದುಕೊಳ್ಳಲು ಯತ್ನಿಸುತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಿಜೆಪಿ ಮುಖಂಡ ಜಗನ್ನಿವಾಸ್ ರಾವ್ ಪುತ್ರ ಕೃಷ್ಣ ಜೆ.ರಾವ್‌ಗೆ ಹೈಕೋರ್ಟ್ ಕಪಾಳ ಮೋಕ್ಷ ಮಾಡಿದೆ.

ಅಲ್ಲದೆ, ಆತನ ಕ್ರಮಕ್ಕೆ ಕಿಡಿಕಾರಿರುವ ನ್ಯಾಯಾಲಯ, ಸಂತ್ರಸ್ತೆ ಮತ್ತು ಆಕೆಯ ಮಗುವಿನ ಪೋಷಣೆಗೆ ಮಾಸಿಕ 75 ಸಾವಿರ ರೂ.ಗಳನ್ನು ಪಾವತಿಸಬೇಕು ಎಂದು ಆರೋಪಿಗೆ ನಿರ್ದೇಶನ ನೀಡಿದೆ.

ಇದೇ ವೇಳೆ ಆರೋಪಿ ವಿರುದ್ಧದ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿದ್ದು, ಸಂತ್ರಸ್ತೆ ಮತ್ತವರ ಕುಟುಂಬದವರು, ಬಂಧುಗಳು ಈ ವಿಚಾರ ಸಂಬಂಧ ಮಾಧ್ಯಮಗಳ ಮುಂದೆ ಹೇಳಿಕೆ ನೀಡಬಾರದು ಎಂದು ನಿರ್ಬಂಧ ವಿಧಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಕೋರಿ ಆರೋಪಿ ಕೃಷ್ಣ ಜೆ.ರಾವ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿ ವಿಚಾರಣೆ ಮುಂದೂಡಿತು.

''ಆರೋಪಿಯು ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂ. ಪಾವತಿಸಬೇಕು. ಮುಂದಿನ ಒಂದು ವಾರದೊಳಗೆ ಹಣ ಪಾವತಿ ಮಾಡಿ, ಆದರ ಬಳಿಕ ಪ್ರತಿ ತಿಂಗಳ ಹಣ ಪಾವತಿಸಬೇಕೆಂಬ ಷರತ್ತಿಗೆ ಒಳಪಟ್ಟು ಪ್ರಕರಣದ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡಲಾಗುತ್ತಿದೆ,'' ಎಂದು ನ್ಯಾಯಪೀಠ ಆದೇಶಿಸಿ ವಿಚಾರಣೆಯನ್ನು ಜೂ.5ಕ್ಕೆ ಮುಂದೂಡಿತು.

ಸಂತ್ರಸ್ತೆಯ ಪರ ವಕೀಲರು, ''ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಅರ್ಜಿದಾರ ಮತ್ತು ಸಂತ್ರಸ್ತೆ ಪ್ರೀತಿಸುತ್ತಿದ್ದರು. ಬಳಿಕ ಮದುವೆಯಾಗುವುದಾಗಿ ಭರವಸೆ ನೀಡಿ ಹಲವು ಬಾರಿ ಅತ್ಯಾಚಾರವೆಸಗಿದ್ದಾರೆ. ಇದರಿಂದ ಸಂತ್ರಸ್ತೆ ಮಗುವಿಗೆ ಜನ್ಮ ನೀಡಿದ್ದು, ಇನ್ನೂ ಎರಡು ತಿಂಗಳು ಕಳೆದರೆ ಮಗುವಿಗೆ ಒಂದು ವರ್ಷವಾಗಲಿದೆ. ಶ್ರೀಕೃಷ್ಣ ಎಂಬುದಾಗಿ ಮಗುವಿನ ಹೆಸರಿಡುವುದಾಗಿ ತಿಳಿಸಿದ್ದರು. ಆದರೆ, ಈವರೆಗೂ ಆ ಕಾರ್ಯಕ್ಕೆ ಮುಂದಾಗಿಲ್ಲ. ಮಗು ನೋಡಲು ಆರೋಪಿಯ ಕುಟುಂಬದವರು ಬಂದಿಲ್ಲ. ಸಂತ್ರಸ್ತೆಯ ತಾಯಿ ಮನೆ ಕೆಲಸ ಮಾಡುತ್ತಾರೆ. ತಂದೆ ಚಿನ್ನಾಭರಣ ಅಂಗಡಿಯಲ್ಲಿ ದಿನಗೂಲಿ ನೌಕರರಾಗಿದ್ದು, ಜೀವನ ನಡೆಸುವುದು ಕಷ್ಟಕರವಾಗಿದೆ,'' ಎಂದು ನ್ಯಾಯಾಲಯದ ಗಮನಸೆಳೆದರು.

ಸರಕಾರಿ ವಕೀಲರು, ''ಆರೋಪಿ ಮತ್ತವರ ಕುಟುಂಬಸ್ಥರು ಸಂತ್ರಸ್ತೆಗೆ 50 ಲಕ್ಷ ರೂ. ನೀಡಿ ಮದುವೆಯಾಗುವುದಾಗಿ ಮತ್ತು ಮದುವೆಯ ಬಳಿಕ ವಿಚ್ಛೇದನ ನೀಡಬೇಕು ಎಂಬ ಷರತ್ತು ವಿಧಿಸಿದ್ದಾರೆ,'' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಅದಕ್ಕೆ ಆಕ್ಷೇಪಿಸಿದ ಅರ್ಜಿದಾರರ ಪರ ವಕೀಲರು, ''ಸರಕಾರಿ ವಕೀಲರ ವಾದ ಸತ್ಯಕ್ಕೆ ದೂರವಾಗಿದೆ. ಇದು ಅರ್ಜಿದಾರರಿಗೆ ಸಂಬಂಧವಿಲ್ಲ. ಈ ಅಂಶ ಎಲ್ಲಿಂದ ಬಂದಿದೆ ಎಂಬುದೂ ಗೊತ್ತಿಲ್ಲ. ಅಲ್ಲದೆ, ಸ್ಥಳೀಯವಾಗಿ ಮಾಧ್ಯಮಗಳ ವಿಚಾರಣೆ ನಡೆಯುತ್ತಿದೆ. ಇದು ನಿಲ್ಲಬೇಕಾಗಿದೆ. ಅರ್ಜಿದಾರರ ಕುಟುಂಬದವರು ರಾಜಕೀಯ ಪಕ್ಷವೊಂದರಲ್ಲಿ ಗುರುತಿಸಿಕೊಂಡಿದ್ದು, ಮಾಧ್ಯಮದಲ್ಲಿನ ಸುದ್ದಿಗಳಿಂದ ಅವರಿಗೆ ತೊಂದರೆಯಾಗುತ್ತಿರುವುದರಿಂದ ಪ್ರಸಾರಕ್ಕೆ ತಡೆ ನೀಡಬೇಕು,'' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಮೂರು ಷರತ್ತುಗಳು

1. ಪ್ರತಿ ತಿಂಗಳು 75,000 ರೂ. ಪಾವತಿಸಬೇಕು. ಮುಂದಿನ ಒಂದು ವಾರದೊಳಗೆ ಮೊದಲ ಕಂತಿನ ಹಣ ನೀಡಬೇಕು
2. ಹಣ ಪಾವತಿಸುವ ಷರತ್ತಿಗೆ ಒಳಪಟ್ಟು, ಆರೋಪಿ ವಿರುದ್ಧದ ಕ್ರಿಮಿನಲ್ ಪ್ರಕರಣದ ಮುಂದಿನ ಪ್ರಕ್ರಿಯೆಗಳಿಗೆ ತಡೆ
3. ಈ ವಿಚಾರವಾಗಿ ಸಂತ್ರಸ್ತೆ ಅಥವಾ ಆಕೆಯ ಕುಟುಂಬದವರು ಮಾಧ್ಯಮಗಳ ಮುಂದೆ ಹೇಳಿಕೆ ನೀಡಬಾರದು

ಕೋರ್ಟ್ ಖಡಕ್ ನುಡಿ!

- ಆರೋಪಿ ಕೃಷ್ಣ ಜೆ.ರಾವ್ ಅವರೇ ಮಗುವಿನ ತಂದೆ ಎನ್ನುವುದು ಡಿಎನ್‌ಎ ಪರೀಕ್ಷೆಯಿಂದ ತಿಳಿದು ಬಂದಿದೆ
- ಹೀಗಾಗಿ, ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತೆಯ ಕುಟುಂಬಕ್ಕೆ ಆರೋಪಿ ಪರಿಹಾರ ನೀಡುವುದೊಂದೇ ದಾರಿ
- ಭವಿಷ್ಯ ನೋಡಬೇಕಿದ್ದಾಕೆ 20ನೇ ವಯಸ್ಸಿಗೆ ಮಗುವಿಗೆ ಜನ್ಮ ನೀಡಿದ್ದಾಳೆ. ಆಕೆಯ ಕಷ್ಟಗಳು ನಿಮಗೆ ತಿಳಿದಿಲ್ಲ
- ಯುವತಿಯ ಭವಿಷ್ಯವನ್ನು ಆರೋಪಿ ಸಂಪೂರ್ಣವಾಗಿ ಕೊಂದಿದ್ದಾರೆ. ಈಗ ಆಕೆ ಏನು ಮಾಡುತ್ತಾಳೆ?
- ಬಡ ಕುಟುಂಬದಿಂದ ಬಂದವಳೆಂಬ ಕಾರಣಕ್ಕೆ ಹೀಗೆಲ್ಲ ಮಾಡಲು ಸಾಧ್ಯವಿಲ್ಲ

ತಿಮರೋಡಿ ಗಡೀಪಾರು ಆದೇಶ: ಕಾಯ್ದಿರಿಸಿದ ತೀರ್ಪು

ಏ.29ರವರೆಗೆ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು



ಸೌಜನ್ಯಾ ಕೊಲೆ ಪ್ರಕರಣದಲ್ಲಿ ಹೋರಾಟ ಮಾಡಿದ್ದ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧದ ಗಡೀಪಾರು ಆದೇಶವನ್ನು ಏ.29ರವರೆಗೆ ಜಾರಿಗೊಳಿಸದಂತೆ ಹೊರಡಿಸಲಾಗಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಶುಕ್ರವಾರ ವಿಸ್ತರಣೆ ಮಾಡಿದೆ. ಅಲ್ಲದೆ, ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ತೀರ್ಪು ಕಾಯ್ದಿರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡೀಪಾರು ಮಾಡಿ 2026ರ ಮಾ.13ರಂದು ಪುತ್ತೂರು ವಿಭಾಗಾಧಿಕಾರಿ (ಮೂರನೇ ಬಾರಿ) ಹೊರಡಿಸಿರುವ ಆದೇಶ ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ಅರ್ಜಿ ಕುರಿತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ತಿಮರೋಡಿ ಪರ ವಕೀಲರು, ''ಪ್ರಕರಣದಲ್ಲಿ ಪೊಲೀಸರು ಅವಲಂಬಿಸಿರುವ 26ರ ಪೈಕಿ 13 ಪ್ರಕರಣಗಳಲ್ಲಿ ಅರ್ಜಿದಾರರು ಖುಲಾಸೆಗೊಂಡಿದ್ದಾರೆ. ಎರಡು ಪ್ರಕರಣಗಳಲ್ಲಿ 'ಬಿ' ರಿಪೋರ್ಟ್ ಸಲ್ಲಿಕೆಯಾಗಿದೆ. ಉಳಿದ 10 ಪ್ರಕರಣ ಕೇವಲ ತನಿಖೆ ಮತ್ತು ವಿಚಾರಣಾ ಹಂತದಲ್ಲಿದ್ದು, ಅವೆಲ್ಲವೂ ಜಾಮೀನು ನೀಡಬಹುದಾದ ಸ್ವರೂಪದ್ದಾಗಿವೆ. ಅರ್ಜಿದಾರರ ವಿರುದ್ಧ ದಾಖಲಾದ ಎಲ್ಲ ಹೊಸ ಕ್ರಿಮಿನಲ್ ಪ್ರಕರಣಗಳು ಗಡೀಪಾರು ಪ್ರಸ್ತಾವನೆಗೆ ಸಂಬಂಧಿಸಿದಂತೆ ಪೊಲೀಸರು ವರದಿ ಸಲ್ಲಿಸಿದ ನಂತರ ದಾಖಲಾಗಿವೆ. ಎಸಿ ಮುಂದೆ ಮೊದಲ ಗಡೀಪಾರು ಪ್ರಕ್ರಿಯೆ ನಡೆಯುತ್ತಿದ್ದಾಗ ಐದು ಪ್ರಕರಣಗಳನ್ನು ಉದ್ದೇಶಪೂರ್ವಕವಾಗಿ ದಾಖಲಿಸಲಾಗಿದೆ,'' ಎಂದು ದೂರಿದರು.

ಅಲ್ಲದೆ, ''ಅರ್ಜಿದಾರರು ಒಬ್ಬ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾಗಿದ್ದು, ಸೌಜನ್ಯಾ ಕೊಲೆ ಪ್ರಕರಣದ ಹೋರಾಟದ ನೇತೃತ್ವ ವಹಿಸಿದ್ದಾರೆ. ಅದೇ ಕಾರಣಕ್ಕೆ ಹಲವಾರು ಪ್ರಕರಣಗಳನ್ನು ದಾಖಲಿಸಿ ಗಡೀಪಾರು ಆದೇಶ ಹೊರಡಿಸಿದ್ದಾರೆ,'' ಎಂದು ಆಕ್ಷೇಪಿಸಿದರು.

ಈ ವಾದದ ಬಗ್ಗೆ ಆಕ್ಷೇಪಿಸಿದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ''ಅರ್ಜಿದಾರರು 1997ರಿಂದಲೂ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ತಾನು ಸೌಜನ್ಯಾ ಪ್ರಕರಣದ ಕಾರ್ಯಕರ್ತನೆಂದು ಹೇಳಿಕೊಳ್ಳುತ್ತಾ, ಅರ್ಜಿದಾರರು ನಿತ್ಯ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ,'' ಎಂದು ನ್ಯಾಯಪೀಠಕ್ಕೆ ವಿವರಿಸಿದರು.



ದಾವಿವಿ 28ಕ್ಕೆ ಪಿಎಚ್‌ಡಿ ಮರು ಪರೀಕ್ಷೆ

ವಿಜಯ IMPACT ಕರ್ನಾಟಕ

ದಾವಣಗೆರೆ: ಪ್ರಶ್ನೆಪತ್ರಿಕೆ ವಿನ್ಯಾಸದಲ್ಲಿನ ಎಡವಟ್ಟು ಹಿನ್ನೆಲೆಯಲ್ಲಿ ಇತಿಹಾಸ ವಿಷಯದ ಪಿಎಚ್‌ಡಿ ಪ್ರವೇಶಕ್ಕೆ ಮರು ಪರೀಕ್ಷೆಯನ್ನು ಏ. 28 ರಂದು ನಡೆಸಲು ದಾವಣಗೆರೆ ವಿಶ್ವವಿದ್ಯಾನಿಲಯ ತೀರ್ಮಾನಿಸಿದೆ. ಮರು ಪರೀಕ್ಷೆ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಲಾಗುವುದು ಎಂದು ವಿಶ್ವವಿದ್ಯಾನಿಲಯ ಪರೀಕ್ಷಾಂಗ ಕುಲಸಚಿವ ರಮೇಶ್ 'ವಿಜಯ ಕರ್ನಾಟಕ'ಕ್ಕೆ ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಎಡವಟ್ಟಿನ ಕುರಿತು ಬಾಹ್ಯ ಸಂಯೋಜಕರು ಮತ್ತು ಇತಿಹಾಸ ವಿಭಾಗದ ಸಂಯೋಜಕರಿಗೆ ನೋಟಿಸ್ ನೀಡಿ ಐದು ದಿನದೊಳಗೆ ಉತ್ತರ ನೀಡುವಂತೆ ಸೂಚಿಸಲಾಗಿದೆ. ದಾವಿವಿ ಪ್ರಶ್ನೆಪತ್ರಿಕೆ ರೂಪಿಸುವಲ್ಲಿನ ಎಡವಟ್ಟು ಕುರಿತು 'ವಿಜಯ ಕರ್ನಾಟಕ' ಏ.20ರಂದು ತನಿಖಾ ವರದಿ ಪ್ರಕಟಿಸಿತ್ತು. ನಂತರವೂ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ವಿಷಯಗಳ ಕುರಿತು ಮತ್ತೆರಡು ಪತ್ರಿಕೆಯಲ್ಲೂ ನಿಯಮ ಉಲ್ಲಂಘನೆ ಆಗಿರುವ ಬಗ್ಗೆ ವರದಿ ಪ್ರಕಟಿಸಿತ್ತು.

ಬಾಗಲಕೋಟೆ ವಿವಿ: ಗೌಡಾ ಪ್ರದಾನ

ಜಮಖಂಡಿ (ಬಾಗಲಕೋಟೆ): ಪಟ್ಟಣದಲ್ಲಿ ಶುಕ್ರವಾರ ನಡೆದ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಬಾಹ್ಯಾಕಾಶ ವಿಜ್ಞಾನಿ ಎಸ್.ನಂಬಿ ನಾರಾಯಣನ್, ಚಿಕ್ಕೋಡಿಯ ಟೆಕ್ ಉದ್ಯಮಿ ಮಹೇಶ ಬೆಲ್ಲದರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಗೌರವ ಡಾಕ್ಟರೇಟ್‌ಗೆ ಆಯ್ಕೆ ಆಗಿದ್ದ ಇಳಕಲ್‌ನ ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ ವಿದೇಶ ಪ್ರವಾಸದಲ್ಲಿದ್ದ ಕಾರಣ ಗೈರು ಹಾಜರಾಗಿದ್ದರು. ರ್‍ಯಾಂಕ್ ವಿಜೇತರಿಗೆ 16 ಮಂದಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಚಿನ್ನದ ಪದಕ ಪ್ರದಾನ ಮಾಡಿದರು.

ನಾಗ್ಪುರ ಐಐಎಂ ನಿರ್ದೇಶಕ ಡಾ.ಎ.ಭೀಮರಾಯ ಮೇತ್ರಿ ಅವರು ಘಟಿಕೋತ್ಸವ ಭಾಷಣ ಮಾಡಿದರು. ವಿವಿ ಕುಲಪತಿ ಪ್ರೊ.ಆನಂದ ದೇಶಪಾಂಡೆ, ರಿಜಿಸ್ಟ್ರಾರ್ ಸೋಮಲಿಂಗ ಗೆಣ್ಣೂರ ಇದ್ದರು.

ಜಮಖಂಡಿಯಲ್ಲಿ ಶುಕ್ರವಾರ ನಡೆದ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಬಾಹ್ಯಾಕಾಶ ವಿಜ್ಞಾನಿ ಎಸ್.ನಂಬಿ ನಾರಾಯಣನ್, ಟೆಕ್ ಉದ್ಯಮಿ ಮಹೇಶ ಬೆಲ್ಲದ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ದರೋಡೆ ಪ್ರಕರಣ: ನಾಲ್ವರ ಬಂಧನ

ವಿಕ ಸುದ್ದಿಲೋಕ ಶಿವಮೊಗ್ಗ

ನಗರದ ಸೂಳೆಬೈಲು ಭಾಗದ ಬಟ್ಟೆ ವ್ಯಾಪಾರಿಯ ಮನೆಗೆ ಮಾರಕಾಸ್ತ್ರ ಸಹಿತ ನುಗ್ಗಿ ದರೋಡೆ ಮಾಡಿದ್ದ ನಾಲ್ವರು ಆರೋಪಿಗಳನ್ನು ತುಂಗಾನಗರ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮಹ್ಮದ್ ಶೋಯೆಬ್, ಸೈಯದ್ ಶಕೀಲ್, ಆಯುಬ್ ಪಾಶಾ ಮತ್ತು ತಕಾಯತ್ ಬಂಧಿತರು. ಅವರಿಂದ 50 ಸಾವಿರ ರೂ. ನಗದು, ಮಾರಕಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ. ಏ.18ರಂದು ರಾತ್ರಿ ಬಟ್ಟೆ ವ್ಯಾಪಾರಿ ಮನೆಗೆ ನುಗ್ಗಿದ್ದ ಆರೋಪಿಗಳು, ಲಾಂಗು, ಮಚ್ಚು ತೋರಿಸಿ ಬೆದರಿಸಿ 50 ಸಾವಿರ ರೂ. ನಗದು ದೋಚಿಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬಸ್ ನಿಲ್ದಾಣದಲ್ಲಿ ಪ್ರೇಮಿಯ ಆತ್ಮಹತ್ಯೆ

ಶಿವಮೊಗ್ಗ: ಪ್ರೀತಿಸಿದ ಯುವತಿ ಹಾಗೂ ಆಕೆಯ ಕುಟುಂಬದವರಿಂದ ಹಲ್ಲೆ ಮತ್ತು ಅವಮಾನಕ್ಕೊಳಗಾಗಿದ್ದ ಯುವಕ ಶಿವಮೊಗ್ಗದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶಿಕಾರಿಪುರ ತಾಲೂಕಿನ ಶಬರೀಶ್ (28) ಆತ್ಮಹತ್ಯೆ ಮಾಡಿಕೊಂಡ ಯುವಕ. ಆತ್ಮಹತ್ಯೆ ಪ್ರಚೋದನೆ ನೀಡಿದ ಆರೋಪದ ಮೇಲೆ ಯುವತಿಯ ಕುಟುಂಬದ ಐವರ ವಿರುದ್ಧ ದೊಡ್ಡಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಬರೀಶ್ ತೀರ್ಥಹಳ್ಳಿಯಲ್ಲಿ ಟೈಲ್ಸ್ ಕೆಲಸ ಮಾಡುತ್ತಿದ್ದರು. ಶಬರೀಶ್ ಮತ್ತು ಯುವತಿಯ ಕುಟುಂಬಗಳಲ್ಲಿ ಅವರ ಪ್ರೀತಿಗೆ ವಿರೋಧವಿತ್ತು ಎನ್ನಲಾಗಿದೆ. ಏ.21ರಂದು ಶಬರೀಶ್‌ಗೆ ಕರೆ ಮಾಡಿದ ಯುವತಿ, ಶಿವಮೊಗ್ಗದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಶಬರೀಶ್‌ನನ್ನು ಕರೆಸಿಕೊಂಡಿದ್ದಳು. ಈ ಈ ವೇಳೆ ಆಕೆಯ ಸಂಬಂಧಿ ಶಬರೀಶ್ ಮೇಲೆ ಹಲ್ಲೆ ನಡೆಸಿ, ಮದುವೆಗೆ ನಿರಾಕರಿಸಿದರು. ಅಲ್ಲದೆ ಅವರ ಮೊಬೈಲ್‌ನಲ್ಲಿದ್ದ ಫೋಟೊಗಳನ್ನು ಡಿಲೀಟ್ ಮಾಡಿ ಬೆದರಿಕೆ ಹಾಕಿದರು ಎನ್ನಲಾಗಿದೆ. ಇದರಿಂದ ನೊಂದ ಶಬರೀಶ್ ಬಸ್ ನಿಲ್ದಾಣದಲ್ಲೇ ವಿಷ ಸೇವಿಸಿದರು. ಅಲ್ಲಿದ್ದವರು ತಕ್ಷಣ ಆತನನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ಏ.22ರ ಮಧ್ಯಾಹ್ನ ಕೊನೆಯುಸಿರೆಳೆದರು.

ನರೇಂದ್ರ ರೈ ದೇರ್ಲ, ಜಗದೀಶ ಶರ್ಮಗೆ ಪ್ರಶಸ್ತಿ

ಡಾ.ನರೇಂದ್ರ ರೈ ದೇರ್ಲ

ಜಗದೀಶ ಶರ್ಮ ಸಂಪ

ಪುತ್ತೂರು (ದ.ಕ): ವಿವೇಕಾನಂದ ಮಹಾವಿದ್ಯಾಲಯದ (ಸ್ವಾಯತ್ತ) ಡಾ.ಕೆ. ಶಿವರಾಮ ಕಾರಂತ ಅಧ್ಯಯನ ಕೇಂದ್ರ ಕೊಡಮಾಡುವ 2026ನೇ ಸಾಲಿನ ನಿರಂಜನ ಪ್ರಶಸ್ತಿಗೆ ಡಾ.ನರೇಂದ್ರ ರೈ ದೇರ್ಲ ಹಾಗೂ 2026ನೇ ಸಾಲಿನ ಶಂಕರ ಸಾಹಿತ್ಯ ಪ್ರಶಸ್ತಿಗೆ ಜಗದೀಶ ಶರ್ಮ ಸಂಪ ಅವರನ್ನು ವಿವೇಕಾನಂದ ವಿದ್ಯಾವರ್ಧಕ ಸಂಘ ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಮೇ 2ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

tender & notices

PUBLIC NOTICE

PUBLIC NOTICE

(ಸಂಖ್ಯೆ: NO.UASM/EO/TN-19/2026-27 Dt. 23.04.2026)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯದ ಅಧೀನದಲ್ಲಿರುವ ಕೃಷಿ ಮಹಾವಿದ್ಯಾಲಯ, ಕಾರೆಕೆರೆ ಹಾಸನದಲ್ಲಿ ತರಗತಿಗಳ ಮೊದಲನೆ ಮಹಡಿ ಕಟ್ಟಡ ನಿರ್ಮಾಣ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://kppp.karnataka.gov.in ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ. ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ:- (1) ಪೂರ್ವ ಬಿಡ್ ಸಭೆ : 19.05.2026 ಬೆಳಿಗ್ಗೆ 10.30 ಗಂಟೆಗೆ. (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 22.05.2026 ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 23.05.2026 ಬೆಳಿಗ್ಗೆ 10.30 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 25.05.2026 ಬೆಳಿಗ್ಗೆ 10.30 ಗಂಟೆಗೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿನಗಳಲ್ಲಿ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ, ವಿ.ಸಿ.ಫಾರಂ, ಮಂಡ್ಯ-571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.
ಸಹಿ/-ಆಸ್ತಿ ಅಧಿಕಾರಿಗಳು
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/071/2026-27

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.
ಸಂ: A1/BUD/RSP-RSPD/Tender/CR-1/2026-27 ದಿನಾಂಕ: 24.04.2026
ಮರು-ಟೆಂಡರ್ ಪ್ರಕಟಣೆ
2026-27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕಗ್ಗಲೀಪುರ ಸಾಮಾಜಿಕ ಅರಣ್ಯ ವಲಯಗಳಲ್ಲಿ ಆರ್.ಎಸ್.ಪಿ, ಆರ್.ಎಸ್.ಪಿ.ಡಿ, ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ, ನೆಡುತೋಪು ನಿರ್ಮಾಣ ಹಾಗೂ ಸಸಿ ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2026-27ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ https://kppp.karnataka.gov.in ಮೂಲಕ ಮರು-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 02.05.2026 ಸಂಜೆ 4.00 ಗಂಟೆಗೆ** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 04.05.2026** ರಂದು **ಪೂರ್ವಾಹ್ನ 11:00 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ: 05.05.2026 ಮದ್ಯಾಹ್ನ 1.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp. karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/354/ಆಕಾರ್/2026-27

ಬ್ಯಾಂಕ್ ಆಫ್ ಬರೋಡಾದಿಂದ ಹಿರಿಯ ನಾಗರಿಕರಿಗೆ ವಿಶೇಷ ಖಾತೆ

ಮುಂಬಯಿ: ಬ್ಯಾಂಕ್ ಆಫ್ ಬರೋಡಾ ಹಿರಿಯ ನಾಗರಿಕರಿಗೆ 'ಬಿಒಬಿ ಹಿರಿಯ ನಾಗರಿಕರ ವಿಶೇಷ ಸಮ್ಮಾನ್' ಉಳಿತಾಯ ಖಾತೆ ಆರಂಭಿಸುವುದಾಗಿ ಘೋಷಿಸಿದೆ. ಇದು 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯೋಮಾನದವರಿಗೆ ಅವರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಮತ್ತು ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತದೆ. ಖಾತೆಯ 6 ಕುಟುಂಬ ಸದಸ್ಯರಿಗೆ ಉಚಿತ ಆನ್‌ಲೈನ್ ವೈದ್ಯರ ಸಮಾಲೋಚನೆ ಒದಗಿಸಲಾಗುತ್ತದೆ. ''ಔಷಧಗಳು ಮತ್ತು ರೋಗ ಪತ್ತೆ ಸೇವೆಗಳ ಮೇಲೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುತ್ತದೆ. ಇದಲ್ಲದೆ ಹಿರಿಯ ನಾಗರಿಕರಿಗೆ ರಿವರ್ಸ್ ಮಾರ್ಟ್‌ಗೇಜ್ ಸಾಲ, ಕಡಿಮೆ ದರದಲ್ಲಿ ಲಾಕರ್ ಸೇವೆ ಮತ್ತಗು ಡೆಬಿಟ್ ಕಾರ್ಡ್‌ಗಳ ಸಂಸ್ಕರಣಾ ಶುಲ್ಕಗಳಲ್ಲಿ ಶೇ.50ರಷ್ಟು ವಿನಾಯಿತಿ ನೀಡಲಾಗುತ್ತದೆ,'' ಎಂದು ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಡಾ. ದೇವದತ್ ಚಂದ್ ಹೇಳಿದ್ದಾರೆ.

ಚಿನ್ನ, ಬೆಳ್ಳಿ ಬೆಲೆ ಮತ್ತೆ ಇಳಿಕೆ

ಹೊಸದಿಲ್ಲಿ: ಸತತ 3ದಿನಗಳಿಂದ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಯುತ್ತಲೇ ಇದೆ. ಶುಕ್ರವಾರ ಅಪರಂಜಿ ಚಿನ್ನದ ಧಾರಣೆಯಲ್ಲಿ 200 ರೂ. ಇಳಿದು 10 ಗ್ರಾಂಗೆ 1,55,900 ರೂ. ಆಗಿದೆ. ಬೆಳ್ಳಿ ಬೆಲೆ 3,000 ರೂ. ಕಡಿಮೆಯಾಗಿ ಕೆ.ಜಿಗೆ 2,47,000 ರೂ. ಆಗಿದೆ.

ಬೆಂಗಳೂರಿನಲ್ಲಿ ಅಪರಂಜಿ ಚಿನ್ನದ ಧಾರಣೆಯಲ್ಲಿ 10 ಗ್ರಾಂಗೆ 600 ರೂ. ಕುಗ್ಗಿ 1,52,950 ರೂ. ಆಗಿದೆ. ಆಭರಣ ಚಿನ್ನದ ಬೆಲೆಯಲ್ಲಿ 550 ರೂ. ಕಡಿಮೆಯಾಗಿ 1,40,200 ರೂ. ಆಗಿದೆ. ಬೆಳ್ಳಿ ಬೆಲೆ 2,60,000 ರೂ.ನಲ್ಲಿ ಸ್ಥಿರವಾಗಿದೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
2ನೇ ಮಹಡಿ, ವನ ವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003. ದೂರವಾಣಿ ಸಂಖ್ಯೆ: 080 – 2222 8263, 2222 8264
ಸಂ: STRRPA/TP/CLU/157/2025-26 ದಿನಾಂಕ : 23.04.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಹರಿ ರೆಡ್ಡಿ ಮಂಗಳಪೂರು ಬಿನ್ ಲೇಟ್ ರಾಜಾ ರಾಮಿ ರೆಡ್ಡಿ ಮಂಗಳಪೂರು, ನಂ.224, 5ನೇ ಹಂತ, ಆರ್.ಎಂ.ವಿ. 2ನೇ ಹಂತ, ಬೆಂಗಳೂರು ಉತ್ತರ, ಬೆಂಗಳೂರು-560094.	ದೊಡ್ಡಬಳ್ಳಾಪುರ	ದೊಡ್ಡಬೆಳವಂಗಲ	ಕತ್ತಿಹೊಸಹಳ್ಳಿ	130/1 130/2 130/3 131 132 134 135	0-29 0-24 0-25 1-22 1-04 0-33 0-16	ವ್ಯವಸಾಯ	ವಸತಿ

ಷರಾ:- ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವದರಿಂದ ಸಾರ್ವಜನಿಕರಿಗೆ ಅನುಕೂಲಕರವಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ.
ಸಹಿ/-
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ವಾ.ಪ್ರ/ಎಎಎ/347/2026-27

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: ECN-TRD-04-2026
ದಿನಾಂಕ: 18.04.2026
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಶ್ರವಣೂರಿನಲ್ಲಿ 2x25 ಕೆವಿ. ಓಹೆಚ್‌ಇ ಗೆ ಸೂಕ್ತವಾದ ನಿರ್ಮಾಣಗಳು / ಅಡಿಪಾಯಗಳು ಸೇರಿದಂತೆ ಹೊಸ ಕ್ರಾಸಿಂಗ್ ನಿಲ್ದಾಣದ ಪ್ರಸ್ತಾವಿತ ನಿರ್ಮಾಣಕ್ಕಾಗಿ ವಿದ್ಯುತೀಕರಣ ಕಾಮಗಾರಿ.	ರೂ. 2,56,82,475.13

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.05.2026, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ-II (ನಿರ್ಮಾಣ)/ಬೆಂಗಳೂರು ದಂಡು
PUB/52/AAF/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

OBITUARY

With profound grief, we regret to inform the sad demise of
SHRI. G VIJAYAKUMAR (GVK), Advocate
21st Sep 1953 - 24th April 2026
Past President, Domlur Club
He passed away on 24th April 2026.
We pray for the departed soul to rest in peace and extend our heartfelt condolences to the bereaved family.
Last rites will be held on 25th April 2026 at 4.00 pm Kudlu Crematorium, Bengaluru.
Deeply mourned by family members, members of the Managing Committee, staff & members of Domlur Club.

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಶನಿವಾರ, 25 ಏಪ್ರಿಲ್ 2026
ಇಂದಿನ ತಾಪಮಾನ 22° ಕನಿಷ್ಠ 35° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಹಾಪ್‌ಕಾಮ್ಸ್‌ನಲ್ಲಿ ಮಾವು, ಹಲಸು ಮೇಳಕ್ಕೆ ಚಾಲನೆ »08

ಅಗ್ರಿ ಟೆಕ್ ಸಮ್ಮಿಟ್‌ನಲ್ಲಿ ತಂತ್ರಜ್ಞಾನ, ಸ್ಟಾರ್ಟಪ್‌ಗಳ ಆಕರ್ಷಣೆ »08

ಕಟ್ಟಡಗಳ ಎತ್ತರದ ನಿರ್ಬಂಧ ಸಡಿಲಿಸಿ

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್‌ಗೆ ಡಿಸಿಎಂ ಡಿಕೆಶಿ ಮನವಿ
ರಕ್ಷಣಾ ಇಲಾಖೆಯ ಕೆಲ ನೀತಿಗಳಿಂದ ನಗರದ ಪ್ರಗತಿಗೆ ಅಡ್ಡಿ

ವ್ಯಾಪ್ತಿ 15 ಕಿ.ಮೀ.ಗೆ ಸೀಮಿತಗೊಳಿಸಲು ಮನವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಎಚ್‌ಎಎಲ್ ಸುತ್ತಮುತ್ತಲ ಪ್ರದೇಶದಲ್ಲಿ ವಿಧಿಸಲಾಗಿರುವ ಕಟ್ಟಡಗಳ ಎತ್ತರದ ನಿರ್ಬಂಧಗಳ ಸಡಿಲಿಕೆ, ಆವಲಿ ಸುರಂಗ ಮಾರ್ಗ, ರೋಟರಿ ಮೇಲ್ಸೇತುವೆ ಸೇರಿದಂತೆ ವಿವಿಧ ಯೋಜನೆಗಳ ಜಾರಿಗೆ ರಕ್ಷಣಾ ಸಚಿವಾಲಯದ ಜಾಗಗಳನ್ನು ನೀಡುವಂತೆ ಹಾಗೂ ಸುರಕ್ಷತೆ ಮತ್ತು ಪ್ರಗತಿಯ ವಿಚಾರ ಗಮನದಲ್ಲಿಟ್ಟುಕೊಂಡು ನಿರ್ಬಂಧ ಸಡಿಲಗೊಳಿಸಿ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್‌ಗೆ ಮನವಿ ಮಾಡಿದರು.

ಹೊಸದಿಲ್ಲಿಯಲ್ಲಿ ಶುಕ್ರವಾರ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿ ಮನವಿಪತ್ರ ಸಲ್ಲಿಸಿದ ಅವರು, "ರಕ್ಷಣಾ ಇಲಾಖೆಯ ಕೆಲ ನೀತಿಗಳಿಂದ ಬೆಂಗಳೂರಿನ ಪ್ರಗತಿಗೆ ಅಡ್ಡಿಯಾಗಿದೆ. ಬೆಂಗಳೂರಿನ ವಿಮಾನ ನಿಲ್ದಾಣಗಳ 20 ಕಿ.ಮೀ. ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ," ಎಂದು ಮನವರಿಕೆ ಮಾಡಿಕೊಟ್ಟರು.

"ಬೆಂಗಳೂರು ಜಾಗತಿಕವಾಗಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಎಚ್ ಎಎಲ್ ವಿಮಾನ ನಿಲ್ದಾಣವು ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆಯಿದೆ. »08

ರಕ್ಷಣಾ ಇಲಾಖೆ ಜಾಗಕ್ಕೆ ಕೋರಿಕೆ

ಬೆಂಗಳೂರಿನಲ್ಲಿ ವಾಹನ ದಟ್ಟಣೆ ನಿವಾರಣೆಗೆ ಕೈಗೊಂಡಿರುವ ವಿವಿಧ ಯೋಜನೆಗಳಿಗೆ ಅಗತ್ಯವಿರುವ ರಕ್ಷಣಾ ಇಲಾಖೆಯ ಜಾಗ ನೀಡುವಂತೆ ಡಿ.ಕೆ.ಶಿವಕುಮಾರ್ ಸಚಿವರಲ್ಲಿ ಮನವಿ ಮಾಡಿದರು. ಆವಲಿ ಸುರಂಗ ಯೋಜನೆಗೆ ಹೆಬ್ಬಾಳದ ಬಳಿ ಅಗತ್ಯವಿರುವ 2.039 ಎಕರೆ ಜಾಗ ನೀಡಬೇಕು. ಬೈಯಪ್ಪನಹಳ್ಳಿ ರೈಲ್ವೆ ಜಂಕ್ಷನ್‌ಗೆ ಸಂಪರ್ಕ ಕಲ್ಪಿಸುವ ರೋಟರಿ ಮೇಲ್ಸೇತುವೆಗೆ 1.197 ಎಕರೆ ಜಾಗ ಅಗತ್ಯವಿದ್ದು ಯೋಜನೆಯ ಶೀಘ್ರ ಜಾರಿಗೆ ತ್ವರಿತವಾಗಿ ಭೂಮಿ ಹಸ್ತಾಂತರ ಮಾಡಬೇಕು. ಏರ್‌ಪೋರ್ಟ್ ರಸ್ತೆಯಿಂದ (ಬಳ್ಳಾರಿ ರಸ್ತೆ) ಸರೋವರ ಬಡಾವಣೆಗೆ ನಿರ್ಮಿಸಲು ಉದ್ದೇಶಿಸಿರುವ 60 ಅಡಿ ಸಂಪರ್ಕ ರಸ್ತೆ ಡಿಫೆನ್ಸ್ ಡೇರಿ ಫಾರ್ಮ್ ಬಳಿ ಹಾದು ಹೋಗಲಿದೆ. ಈ ಯೋಜನೆಗೆ ಬಳಕೆಯಾಗುವ ಜಾಗಕ್ಕೆ ಬದಲಿ ಜಾಗ ನೀಡಲಾಗುವುದು. ಈ ಯೋಜನೆಗೆ ಸಹಕಾರ ನೀಡಬೇಕೆಂದು ಕೋರಿದ್ದಾರೆ.

ಲೋವರ್ ಆಗರಂ ರಸ್ತೆಯ ಸರಕಾರಿ ಆಸ್ಪತ್ರೆಯಿಂದ ಸರ್ಜಾಪುರ ರಸ್ತೆ ಮಾರ್ಗವಾಗಿ ಈಜಿಪುರ ಜಂಕ್ಷನ್‌ವರೆಗೂ 24 ಮೀ. ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ 13,709 ಎಕರೆ ಜಾಗ ನೀಡಬೇಕು. ಈ ಎಲ್ಲಾ ಜಾಗಗಳ ಹಸ್ತಾಂತರದಿಂದ ರಕ್ಷಣಾ ಇಲಾಖೆ ಕಾರ್ಯಾಚರಣೆಗೆ ಯಾವುದೇ ಅಡ್ಡಿಯಾಗುವುದಿಲ್ಲ. ಈ ಜಾಗಗಳನ್ನು ಸಮಾನ ಮೌಲ್ಯ ಭೂಮಿ (ಇವಿಎಲ್) ಅಥವಾ ಸಮಾನ ಮೌಲ್ಯ ಮೂಲಸೌಕರ್ಯ (ಇವಿಐ) ನೀತಿಯಡಿ ಹಸ್ತಾಂತರಿಸಬೇಕು ಎಂದು ಮನವಿ ಮಾಡಿದ್ದಾರೆ.

ಪಿಯು ಪರೀಕ್ಷೆ-2ಗೆ ಬಿಎಂಟಿಸಿಯಲ್ಲಿ ಉಚಿತ ಪ್ರಯಾಣ

ಬೆಂಗಳೂರು: 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-2ಗೆ ಹಾಜರಾಗುವ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿ ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ.

ಏ.30 ರಿಂದ ಮೇ 13ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-2 ನಡೆಯಲಿದೆ. ವಾಸಸ್ಥಳಗಳಿಂದ ಪರೀಕ್ಷಾ ಕೇಂದ್ರಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ವೇಗದೂತ ಸೇವೆಗಳನ್ನು ಹೊರತುಪಡಿಸಿ ಸಾಮಾನ್ಯ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶವಿರಲಿದೆ. ಜತೆಗೆ, ಪರೀಕ್ಷಾ ಕೇಂದ್ರಗಳ ಬಳಿ ವಿದ್ಯಾರ್ಥಿಗಳು ಕೋರಿದರೆ ನಿಲುಗಡೆ ನೀಡಲು ಸೂಚಿಸಲಾಗಿದೆ.

ಗ್ಲೋಬಲ್ ಅಗ್ರಿ-ಟೆಕ್ ಸಮ್ಮಿಟ್
GLOBAL AGRI-TECH SUMMIT 2026
Innovation in Every Seed
FKCCI
ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ
FEDERATION OF KARNATAKA CHAMBERS OF COMMERCE AND INDUSTRY
Estd. 1916
ಅಂತರಾಷ್ಟ್ರೀಯ ಕೃಷಿ ಸಮ್ಮೇಳನ - 2026
ಹಾಗೂ ಕೃಷಿ ವಸ್ತು ಪ್ರದರ್ಶನ
ದಿನಾಂಕ: 24, 25 ಹಾಗೂ 26 ಏಪ್ರಿಲ್ 2026
ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
97315 93442 | 98967 89567 ಸರ್ವರಿಗೂ ಸುಸ್ವಾಗತ agritech@fkcci.in

ಆನಂದತೀರ್ಥ ಪಿ.ಯು. ಕಾಲೇಜು
ANANDATHIRTHA P.U. COLLEGE (ATPUC)
Sri Sri Vishweshathirtha Swamiji Sri Sri Vishwaprasannathirtha Swamiji
ಪಾಜಕ, ಕುಂಜಾರುಗಿರಿ, ಕುರ್ಕಾಲು ಗ್ರಾಮ - 574 105, ಉಡುಪಿ, ಕರ್ನಾಟಕ
A unit of Anandathirtha Trust ®, Pejawara Mutt, Udupi www.atpuc.in
QR Code for Video
QR Code for Location
97 students out of 114 secured Distinctions and First Class
87 students out of 114 secured more than their Class X Marks
QR Code for WhatsApp
QR Code for Website
Principal
Vijay P. Rao
M.B.A. (Strategy and Tech.,
NTU, Singapore - Gold Medallist)
M.A.(Psychology)
B.E.(CS&E., 7 Gold Medals for University)
ANANDATHIRTHA CAMPUS
NO DONATIONS | NO DEVELOPMENT FEE
ADMISSION OPEN 2026-27
SCIENCE - PCMB / PCMCs
COMMERCE - BASE / BASCs
SCIENCE: Ananya N 97.70% (PCMB); Shri Deeksha 97.70% (PCMB)
COMMERCE: Shrimukh D Bhat 97.70% (BASE)
6 Pillars for P.U. Success @ATPUC
World Class Infrastructure and Amenities
Spiritually Oriented Distraction Free Campus
Accelerated Syllabus Coverage (ASC)
Daily Revision Tests (DRTs)
Top Rated Faculty
Scholarships and Sponsorships based on Academic Performance
Free mid-day meals
Residential Facilities: Boys/Girls Separate Hostel / Gurukula
Free Residential Facilities for Girls from Disadvantaged backgrounds
ಉಚಿತ ಮಧ್ಯಾಹ್ನದ ಬಿಸಿ ಊಟ
ವಸತಿ ಸೌಲಭ್ಯಗಳು: ಹುಡುಗರು / ಹುಡುಗಿಯರ ಪ್ರತ್ಯೇಕ ಹಾಸ್ಟೆಲ್ / ಗುರುಕುಲ
ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ಸೌಲಭ್ಯ
Integrated KCET / JEE / NEET Coaching from Sri Chaitanya + Infinity Learning
Other Educational Institutions at Anandathirtha Campus
Sri Vishweshathirtha Mahavidyalaya : Degree College B.C.A and B.COM.
Anandathirtha Vidyalaya : CBSE School: KG to Class X
Phone : 89510 99660 ; 98455 80245 ; 99640 80962

EXCELLENT MOODUBIDIRE
Kallabettu, Moodubidire-574227
76194 30144
99000 99652 / 653
www.excellentinstitution.org
Congratulations
II PUC STATE RANK ACHIEVERS
RESULT 100% | APPEARED 1112 | DISTINCTION 818 | 100 OUT OF 100 IN SUBJECTS 423
TANMAI A KOTI 597/600; K H ADITI BHUSHAN 597; SHEIKH M RAMIZ 595; SUVITH BHANDARI 594; SHRAVANI M 594; GOKUL M 593; POORVI P SHETTY 593
VARUN R 593; NAKSHA V PATEL 593; SUHANA SACHIN 593; HAMSIKA H S 592; SAMARTHA K S 592; SHYAMKALYAN B 592; THARUNIKA S 592
SATHWIK D BOYA 592; SHAMANTH K M 592; HRUTHIK M N 592; HARSHIT S KALAL 592; VIKRAM 592; SWARUPA M SHETTY 591; KUSUMA S 591
M R ASHMITHA R 591; KARTHIK S AGADI 591; HIMAVANTH P 590; GURUCHARAN M S 590; HIMESH S 590; BHARGAV S BHAT 590; NITHIN TALWAR 590
NIKHIL S S 589; LAAKSHYA Y 589; HEMA U 589; SANJANA H 589; RITISHA J K 589; NISHCHAYA PAI 589; SAMIKSHA P K 589
NAVEEN B M 589; CHINMAY G BELLUR 588; DHRUVANTH K 588; JAGADISH A H 588; KOMALA S K 588; NITHIN D V 588; SAMANVITHA P 588
CHINMAYI P 588; DHIKSHITH V 588; SUJAL S SHETTY 588
THE GROWTH STORY

	No. of Students at the Beginning of course 2023-24	No. of Students at Course End 2026
Above 98%	03	45
Above 95%	39	216
Above 90%	211	625
Above 85%	397	818

SSLC STATE RANK ACHIEVERS
RESULT 100% | APPEARED 203 | DISTINCTION 151 | ABOVE 600+ 45 STUDENTS | 100 OUT OF 100 IN SUBJECTS 141
SACHIN D NAIK 622; NAKSHATRA V 620; GAGAN PATIL 618; DEVANAND H G BIRADAR 618; ANMOL R PATIL 618
PRATEEK SANGRESHI 617; C HARIPREETH V PAI 616; AARYAN KUMAR HALLI 616; AKANKSH M JAIN 616
ADMISSIONS OPEN
LONG TERM NEET RESIDENTIAL BATCH 2027
6th to 10th Std TOPPERS
Are you aiming to join IIT / AIIMS / AFMC / JIPMER ...
Join "SUPER 36" BATCH
STATE / CBSE
COLLEGE "TOPPERS BATCH"
SCHOLARSHIP UPTO 2.7 LAKH
96% & above (State) and 94% & above (CBSE or ICSE) in 10th Std. only

ಎಸ್ಸೆಸ್ಸೆಲ್ಸಿ ಸಾಧಕರು

ವಿವೇಕಾನಂದ ವಿದ್ಯಾವರ್ಧಕ ಹೈಸ್ಕೂಲ್, ಹೆಸರಘಟ್ಟ, ಬೆಂಗಳೂರು.

ಅಂಶಿಕಾ ಕುಮಾರಿ ಜಿ. 98.88%

ಸಂಜನಾ ಎಂ 98.24%

ಅಮೃತ ಎ 97.92%

ಪ್ರಜ್ವಲ್ ಸಿಂಧೆ ಎ. 97.92%

ಮೇ 7ರಿಂದ ಕಬ್ಬನ್‌ಪಾರ್ಕ್‌ನಲ್ಲಿ, ಮೇ 28ರಿಂದ ಲಾಲ್‌ಬಾಗ್‌ನಲ್ಲಿ ತಾಜಾ ಹಣ್ಣಿನ ಮಾರಾಟ

ಹಾಪ್‌ಕಾಮ್ಸ್‌ನಲ್ಲಿ ಮಾವು, ಹಲಸು ಮೇಳಕ್ಕೆ ಚಾಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಆಯೋಜಿಸಿರುವ ಮಾವು ಮತ್ತು ಹಲಸು ಮೇಳಕ್ಕೆ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಚಾಲನೆ ನೀಡಿದರು.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಹಾಗೂ ಸಂಸ್ಕರಣ ಸಂಘ (ಹಾಪ್‌ಕಾಮ್ಸ್) ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ರೈತರಿಂದ ಖರೀದಿಸಿ ಗ್ರಾಹಕರಿಗೆ ತಲುಪಿಸುವುದು ಮೇಳದ ಉದ್ದೇಶ. ಯಾವುದೇ ರಾಸಾಯನಿಕ ಬಳಸದೆ ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ.

ಮಾವು ಹಾಗೂ ಹಲಸು ಬೆಳೆಗಾರರನ್ನು ಪ್ರೋತ್ಸಾಹಿಸುವ ಜತೆಗೆ ಗ್ರಾಹಕರಿಗೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ ಹಾಗೂ ನಗರ ಪ್ರದೇಶದ ಅತ್ಯುತ್ತಮ ಹಣ್ಣುಗಳ ಖರೀದಿಗೆ ಈ ಮೇಳ ವೇದಿಕೆ ಒದಗಿಸಲಿದೆ. 13 ಬಗೆಯ ಮಾವುಗಳನ್ನು ಮೇಳದಲ್ಲಿ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ, ತೂಬಗೆರೆ ತಳಿಯ ಹಲಸು ಲಭ್ಯವಿದೆ. ಹತ್ತು ದಿನಗಳ ಕಾಲ ನಡೆಯುವ ಮೇಳದಲ್ಲಿ ಶೇ.5ರಿಂದ 10ರವರೆಗೆ ಹಣ್ಣುಗಳ ಖರೀದಿಗೆ ರಿಯಾಯಿತಿ ಸಿಗಲಿದೆ.

ಮೇಳ ಉದ್ಘಾಟಿಸಿದ ಸಚಿವ ರಾಮಲಿಂಗಾರೆಡ್ಡಿ, ''ಮಾವು ಹಾಗೂ ಹಲಸಿನ ಬೆಳೆ ಒಂದೇ ಬಾರಿಗೆ ಬರುವುದರಿಂದ ಮೇಳ ಆಯೋಜಿಸಲಾಗುತ್ತಿದೆ. ಇಲ್ಲಿ ಉತ್ತಮ ಗುಣಮಟ್ಟದ ಹಣ್ಣುಗಳು ಕಡಿಮೆ ಬೆಲೆಗೆ ಸಿಗಲಿವೆ. ಇಲ್ಲಿ ಖರೀದಿಸಿರುವುದರಿಂದ ರೈತರಿಗೂ ಪ್ರೋತ್ಸಾಹ ನೀಡಿದಂತಾಗಲಿದೆ,'' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಉದಯ್ ಬಿ. ಗರುಡಾಚಾರ್, ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ, ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್. ಚಂದ್ರೇಗೌಡ, ಉಪಾಧ್ಯಕ್ಷ ನಾರಾಯಣಗೌಡ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಮಾವಿನ ತಳಿ	ಮಾರಾಟ ದರ	ರಿಯಾಯಿತಿ(ಪ್ರತಿ ಕೆಜಿ)
ತೋತಾಪುರಿ	45	40
ಸಕ್ಕರೆಗುತ್ತಿ	270	260
ಸೇಂದೂರ	135	125
ರಸಪುರಿ	175	165
ದಶೇರಿ	185	175
ಮಲ್ಲಿಕಾ	195	185
ಬಾದಾಮಿ	230	215
ಮಲಗೋವ	265	250
ಬಾದಾಮಿ ಅಲ್ಫಾನ್ಸೊ (3 ಕೆಜಿ.ಬಾಕ್ಸ್)	720	675
ಹಲಸಿನ ಬೆಲೆ(ಪ್ರತಿ ಕೆಜಿ)		
ತೂಬುಗೆರೆ	48	43

700ರಿಂದ 800 ಟನ್ ಮಾವು ಮಾರಾಟದ ಗುರಿ

''ಹತ್ತು ದಿನ ಬೆಂಗಳೂರು ಭಾಗದ ಜತೆಗೆ ಧಾರವಾಡದಿಂದಲೂ ಮಾವಿನ ಹಣ್ಣನ್ನು ತಂದು ಮೇಳದಲ್ಲಿ ಮಾರಾಟ ಮಾಡಲಾಗುತ್ತಿದೆ. ಸುಮಾರು 700ರಿಂದ 800 ಟನ್ ಮಾವು ಮಾರಾಟದ ಗುರಿ ಹೊಂದಲಾಗಿದೆ,'' ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಮಿರ್ಜಿ ಉಮೇಶ್ ಶಂಕರ್ ತಿಳಿಸಿದರು.

ರಾಮನಗರ ಭಾಗದ ಹಣ್ಣು ಮಾರಾಟಕ್ಕೆ ಅವಕಾಶ

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಮೇ 7ರಿಂದ 10 ದಿನಗಳ ಕಾಲ ಕಬ್ಬನ್‌ಪಾರ್ಕ್‌ನಲ್ಲಿ ಮಾವು ಮಾರಾಟ ಮೇಳ ಆಯೋಜಿಸಲಾಗಿದೆ.

ರಾಮನಗರದ ರೈತರಿಗೆ ಮಾತ್ರ ಕಬ್ಬನ್ ಪಾರ್ಕ್‌ನಲ್ಲಿ ಮೇಳವನ್ನು ಏರ್ಪಡಿಸಲಾಗಿದೆ. ರಾಮನಗರ ಭಾಗದಲ್ಲಿ ಮಾವು ಬೇಗ ಕೊಯ್ಲಿಗೆ ಬರುವುದರಿಂದ ಮೊದಲ ಹಂತದಲ್ಲಿ ಕಬ್ಬನ್‌ಪಾರ್ಕ್‌ನಲ್ಲಿ 30 ಮಳಿಗೆಗಳನ್ನು ತೆರೆದು ರಾಮನಗರದ ರೈತರಿಗೆ ಹಣ್ಣು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ತಿಳಿಸಿದರು.

ಮೇ 28ರಿಂದ ಲಾಲ್‌ಬಾಗ್‌ನಲ್ಲಿ ಮಾವು-ಹಲಸು ಮೇಳ: ''ಮೇ 28ರಿಂದ ಒಂದು ತಿಂಗಳ ಕಾಲ ಲಾಲ್‌ಬಾಗ್‌ನಲ್ಲಿ ಮಾವು ಮತ್ತು ಹಲಸು ಮೇಳ ಆಯೋಜಿಸಲಾಗುವುದು. ಇಲ್ಲಿ ರಾಜ್ಯದ ಎಲ್ಲಾ ಭಾಗಗಳ ರೈತರೂ ಪಾಲ್ಗೊಳ್ಳುವರು. ಈ ಅವಧಿಯಲ್ಲಿ ಮೆಟ್ರೊ ನಿಲ್ದಾಣಗಳು, ಸಾಫ್ಟ್‌ವೇರ್ ಕಂಪನಿಗಳ ಆವರಣದಲ್ಲಿ ಮೊಬೈಲ್ ವಾಹನಗಳ ಮೂಲಕ ಮಾವು ಮೇಳ ನಡೆಸಲಾಗುವುದು. ಜತೆಗೆ, ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನ, ವೈಟ್‌ಫೀಲ್ಡ್, ಸಹಕಾರ ನಗರ ಸೇರಿದಂತೆ ನಗರದ ಆಯ್ದ ಭಾಗಗಳಲ್ಲಿ ಮಂಡಳಿ ವತಿಯಿಂದ ಮಾವು-ಹಲಸು ಮೇಳದ ಮೂಲಕ ಹಣ್ಣುಗಳನ್ನು ಮಾರಾಟ ಮಾಡಲಾಗುವುದು,'' ಎಂದು ವೇದಮೂರ್ತಿ ತಿಳಿಸಿದರು.

ಆರೋಗ್ಯ ತಪಾಸಣೆ ಶಿಬಿರ ನಾಳೆ

ಬೆಂಗಳೂರು: ರೋಟರಿ, ಹೆಸರಘಟ್ಟ ರಸ್ತೆಯ ಸಪ್ತಗಿರಿ ಆಸ್ಪತ್ರೆ, ಸರ್ ಎಂ.ವಿಶ್ವೇಶ್ವರಯ್ಯ ವಿದ್ಯಾನಿಕೇತನ ಶಾಲೆ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರ ಭಾನುವಾರ (ಏ.26) ನಡೆಯಲಿದೆ. ಶೆಟ್ಟಿಹಳ್ಳಿಯ ಸರ್ ಎಂ.ವಿಶ್ವೇಶ್ವರಯ್ಯ ವಿದ್ಯಾನಿಕೇತನ ಶಾಲಾ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಚರ್ಮರೋಗ, ಕ್ಯಾನ್ಸರ್, ಸ್ತ್ರೀರೋಗ, ಮೂಳೆರೋಗ ಕುರಿತು ಪರೀಕ್ಷೆ ನಡೆಯಲಿದೆ.

ಕಟ್ಟಡಗಳ ಎತ್ತರದ ನಿರ್ಬಂಧ ಸಡಿಲಿಸಿ

» ನಮ್ಮ ಮೊದಲ ಪುಟದಿಂದ

ಆದರೆ, ಹೆಚ್ಚುವರಿಯಾಗಿ ವಿಧಿಸಿರುವ ನಿರ್ಬಂಧಗಳು ಈ ಪ್ರದೇಶದಲ್ಲಿ ಅಭಿವೃದ್ಧಿಗೆ ಅಡ್ಡಿಯಾಗಿವೆ. ನಿರ್ಬಂಧಗಳ ಸಡಿಲಿಕೆ ಸಂಬಂಧ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ, ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ಇಲಾಖೆ ಕಾರ್ಯದರ್ಶಿ ಹಾಗೂ ರಕ್ಷಣಾ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗೂ ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು,'' ಎಂದು ಕೋರಿದರು.

''ಬೆಂಗಳೂರಿನಲ್ಲಿ ಸದ್ಯ ನಾಲ್ಕು ವಿಮಾನ ನಿಲ್ದಾಣಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಪೈಕಿ ಎಚ್‌ಎಎಲ್ ಮತ್ತು ಯಲಹಂಕ ವಾಯುನೆಲೆಯು ರಕ್ಷಣಾ ಸಚಿವಾಲಯದ ನಿಯಂತ್ರಣದಲ್ಲಿವೆ. ಈ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ಕಟ್ಟಡ ನಿರ್ಮಾಣಕ್ಕೆ ಎನ್‌ಒಸಿ ಪಡೆಯಬೇಕಿದೆ. ವಿಮಾನ ನಿಲ್ದಾಣದ ಸುತ್ತಮುತ್ತ 15 ಕಿ.ಮೀ. ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀಟರ್‌ಗೆ ನಿಗದಿಪಡಿಸಲಾಗಿದೆ ಎಂದು ಜಿಎಸ್ ಆರ್ 751 (ಇ) ನಿಯಮದಲ್ಲಿ ಸೂಚಿಸಲಾಗಿದೆ. ಆದರೆ, ರಕ್ಷಣಾ ಸಚಿವಾಲಯದ ವಿಮಾನ ನಿಲ್ದಾಣಗಳು ವಿಪರೀತ ನಿರ್ಬಂಧ ಹೇರುವುದರ ಜತೆಗೆ 150 ಮೀ. ಎತ್ತರದ ಮಿತಿಯನ್ನು 20 ಕಿ.ಮೀ. ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಬೆಂಗಳೂರಿನ ಪ್ರಗತಿಗೆ ಮಾರಕವಾಗಿವೆ,'' ಎಂದು ಶಿವಕುಮಾರ್ ಮನವಿಪತ್ರದಲ್ಲಿ ವಿವರಿಸಿದ್ದಾರೆ. ''ಸಿಂಗಾಪುರ, ಆಮ್‌ಸ್ಟರ್‌ಡ್ಯಾಮ್, ಡಲ್ಲಾಸ್, ಲಂಡನ್ ಹಾಗೂ ದುಬೈ ಸೇರಿದಂತೆ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿದಂತೆ ವಿವಿಧೋದ್ದೇಶಕ್ಕೆ ಬಳಸಲಾಗುತ್ತಿದೆ. ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಕೇವಲ ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೆ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಹೀಗಾಗಿ, ಜಿಎಸ್‌ಆರ್ 751 (ಇ) ನಿಯಮ ಸಡಿಲಗೊಳಿಸಬೇಕು. 150 ಮೀ. ಎತ್ತರದ ಮಿತಿಯನ್ನು 20 ಕಿ.ಮೀ. ಬದಲಿಗೆ 15 ಕಿ.ಮೀ. ವ್ಯಾಪ್ತಿಗೆ ಸೀಮಿತಗೊಳಿಸಬೇಕು,'' ಎಂದು ಕೋರಿದ್ದಾರೆ.

ಗುತ್ತಿಗೆದಾರರ ಸಂಘದಿಂದ ದೃಢೀಕರಣ ಪತ್ರ ಸಲ್ಲಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

■ **ಘನ ತ್ಯಾಜ್ಯ ವಿಲೇವಾರಿ ಟೆಂಡರ್ ಅಂತಿಮಗೊಳಿಸಲು ಅಧಿಕಾರಿಗಳ ವಿರುದ್ಧ ಲಂಚದ ಆರೋಪ**



ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಘನತ್ಯಾಜ್ಯ ಟೆಂಡರ್ ಅಂತಿಮಗೊಳಿಸಲು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಮಂಡಳಿ (ಬಿಎಸ್ ಡಬ್ಲ್ಯುಎಂಎಲ್) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೀಗೌಡ ಲಂಚಕ್ಕೆ ಬೇಡಿಕೆ ಇರಿಸಿದ್ದಾರೆಂದು ಆರೋಪಿಸಿರುವ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣಿಯಂ ತಮ್ಮ ಆರೋಪ ದೃಢೀಕರಿಸಿ ಶುಕ್ರವಾರ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದರು.

ಬೆಂಗಳೂರು ನಗರದ ಸ್ವಚ್ಛತೆ, ಲಾರಿ ಮಾಲೀಕರ ಹಾಗೂ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣಿಯಂ ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು.

ಆಗ ಅರ್ಜಿದಾರರ ಪರ ವಕೀಲರಾದ ಪಿ.ಪ್ರಸನ್ನಕುಮಾರ್, ಅರ್ಜಿಯಲ್ಲಿ ಮಾಡಲಾಗಿರುವ ಆರೋಪಗಳನ್ನು ದೃಢೀಕರಿಸಿ ಪ್ರಮಾಣಪತ್ರ ಸಲ್ಲಿಸಿದರು.

ಅಲ್ಲದೆ, ಕಾನೂನುಬಾಹಿರವಾಗಿ ಪ್ರತಿಫಲಾಪೇಕ್ಷೆ ವ್ಯಕ್ತಪಡಿಸಿ ಲಂಚಕ್ಕೆ ಬೇಡಿಕೆಯಿಟ್ಟಿರುವ ಸಂಗತಿಗೆ ಸಾಕ್ಷ್ಯವಾಗಬಲ್ಲ ಬಿಎಸ್‌ಡಬ್ಲ್ಯುಎಂಎಲ್ ಕಚೇರಿಯಲ್ಲಿನ ಸಿಸಿಟಿವಿ ವಿಡಿಯೋ ತುಣುಕುಗಳು, ಹಾರ್ಡ್ ಡ್ರೈವ್ಸ್, ಟವರ್ ಡಂಪ್ ಲೊಕೇಷನ್ ಮತ್ತು ಪರಸ್ಪರ ಸಂಭಾಷಿಸಿರುವ ಮೊಬೈಲ್ ಕಾಲ್‌ಗಳ ವಿವರ ಸಂಗ್ರಹಗಳನ್ನು ಸಂರಕ್ಷಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದರು.

ಅರ್ಜಿದಾರರ ಪರ ವಕೀಲರು, ''ಶಾಂತಿನಗರ ಕ್ಷೇತ್ರದ ತ್ಯಾಜ್ಯ ವಿಲೇವಾರಿ ಟೆಂಡರ್ ಪ್ಯಾಕೇಜ್-2, ಸಿ.ವಿ.ರಾಮನ್ ನಗರದ ಪ್ಯಾಕೇಜ್-1 ಹಾಗೂ ದಾಸರಹಳ್ಳಿಯ ಪ್ಯಾಕೇಜ್-3ಗೆ ಅರ್ಜಿದಾರರು ಸಲ್ಲಿಸಿದ ಎಲ್1 ಬಿಡ್ ಅಂಗೀಕೃತಗೊಂಡಿತ್ತು. ಆದರೆ, ಕರೀಗೌಡ ಅವರು ಮಾ.10ರಂದು ಅರ್ಜಿದಾರರನ್ನು ತಮ್ಮ ಕಚೇರಿಗೆ ಕರೆಸಿಕೊಂಡು, ಕೆಲ ಬಾಧ್ಯತೆಗಳನ್ನು ಪೂರೈಸುವಂತೆ ಹೇಳಿದರು. ಅಂದರೆ ಹಣ ನೀಡಬೇಕು, ಇಲ್ಲವಾದರೆ ತುಷಾರ್ ಗಿರಿನಾಥ್ ಅವರು ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡುವುದಿಲ್ಲವೆಂದು ತಿಳಿಸಿದ್ದರು,'' ಎಂದು ಹೇಳಿದರು.

ಅಲ್ಲದೆ, ''ಏಳು ವರ್ಷದ ಗುತ್ತಿಗೆಗೆ ಸರಕಾರ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಶೇ.15ರಷ್ಟು ಲಂಚ ನೀಡಬೇಕೆಂದು ಕೇಳಿದ್ದರು. ಲಂಚ ನೀಡದಿದ್ದರೆ ಅರ್ಜಿದಾರರ ಇತರೆ ಗುತ್ತಿಗೆಗಳನ್ನು ರದ್ದುಪಡಿಸುತ್ತೇವೆಂದು ಬೆದರಿಸಿದ್ದಾರೆ. ಈ ಬಗ್ಗೆ ಮಾ.11ರಂದು ಮುಖ್ಯ ಕಾರ್ಯದರ್ಶಿಗೆ ದೂರು ನೀಡಲಾಗಿದೆ. ಅಂತಿಮವಾಗಿ ಲಂಚದ ಬೇಡಿಕೆಗೆ ಒಪ್ಪದ ಹಿನ್ನೆಲೆಯಲ್ಲಿ ಜು.30ರಂದು ಕರೆದಿದ್ದ ಟೆಂಡರ್ ಹಿಂಪಡೆದು ಹೊಸ ಟೆಂಡರ್ ಪ್ರಕಟಿಸಿ 2026ರ ಮಾ.25ರಂದು ಹೊಸದಾಗಿ ಅಧಿಸೂಚನೆ ಹೊರಡಿಸಲಾಗಿದೆ. ಹಾಗಾಗಿ, ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು. ಅಧಿಕಾರದ ದುರುಪಯೋಗ ಮಾಡಿ, ಟೆಂಡರ್ ಅಧಿಸೂಚನೆ ಹಿಂಪಡೆದ ಹಾಗೂ ಲಂಚಕ್ಕೆ ಬೇಡಿಕೆಯಿಟ್ಟ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಆದೇಶಿಸಬೇಕು,'' ಎಂದು ಕೋರಿದರು.

ಸಾರ್ವಜನಿಕ ವಿವಿಗಳಿಗೆ ಪ್ರಾಧ್ಯಾಪಕರ ಸೇವೆ ಒದಗಿಸಿ: ಪುಟ್ಟಣ್ಣ

ಬೆಂಗಳೂರು: ಕಾಯಂ ಬೋಧಕರ ಕೊರತೆ ಎದುರಿಸುತ್ತಿರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಿ.ಎಚ್.ಡಿ ಮಾರ್ಗದರ್ಶಕರಾಗಿ ಪ್ರಥಮ ದರ್ಜೆ ಕಾಲೇಜುಗಳ ಹಿರಿಯ ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಸರಕಾರಕ್ಕೆ ಮನವಿ ಮಾಡಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿರುವ ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾ ಅಧಿವೇಶನ ಉದ್ಘಾಟಿಸಿ ಮಾತನಾಡಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ 'ಉನ್ನತ ಶಿಕ್ಷಣದ ಸವಾಲುಗಳು ಮತ್ತು ಸಾಧ್ಯತೆಗಳು' ಎಂಬ ವಿಷಯ ಕುರಿತು ಪ್ರಧಾನ ಉಪನ್ಯಾಸ ನೀಡಿದರು. ಕಲಬುರಗಿ ಕೇಂದ್ರೀಯ ವಿವಿಯ ವಿಶ್ರಾಂತ ಸಮಕುಲಪತಿಗಳಾದ ಪ್ರೊ.ಎಸ್.ಚಂದ್ರಶೇಖರ ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ದೊಡ್ಡಕಮ್ಮನಹಳ್ಳಿ ಅರಳಕಟ್ಟೆ ಆಂಜನೇಯಸ್ವಾಮಿ ಬ್ರಹ್ಮರಥೋತ್ಸವ ಪ್ರಯುಕ್ತ ಶುಕ್ರವಾರ ತೆಪ್ಪೋತ್ಸವ ನಡೆಯಿತು.

ಗೋವಿಂದರಾಜನಗರದಲ್ಲಿ ಜಯದೇವ ಘಟಕ ಸ್ಥಾಪನೆ

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯಕೀಯ ಶಿಕ್ಷಣ ಇಲಾಖೆ-ಜಿಬಿಎ ನಡುವೆ ಒಪ್ಪಂದ

100 ಹಾಸಿಗೆ ಸಾಮರ್ಥ್ಯ

ಪಶ್ಚಿಮ ಬೆಂಗಳೂರಿನ ಗೋವಿಂದರಾಜ ನಗರದಲ್ಲಿನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದಲ್ಲಿ ಜಯದೇವ ಹೃದಯ ರಕ್ತನಾಳ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ 100 ಹಾಸಿಗೆಗಳ ಘಟಕ ಸ್ಥಾಪನೆಯಾಗಲಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಜಿಬಿಎ ಸಹಭಾಗಿತ್ವದಲ್ಲಿ ಘಟಕ ಸ್ಥಾಪಿಸಲು ಶುಕ್ರವಾರ ವಿಕಾಸಸೌಧದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

100 ಹಾಸಿಗೆಗಳ ಘಟಕ ಸ್ಥಾಪಿಸಲು ರಾಜ್ಯ ಸರಕಾರವು 15 ಕೋಟಿ ರೂ. ಮೀಸಲಿರಿಸಲಿದೆ. ಪಶ್ಚಿಮ ಮಹಾನಗರ ಪಾಲಿಕೆ ಮೂಲಕ ಹಣಕಾಸು ಒದಗಿಸಲು ಮತ್ತು ಸಿಎಸ್‌ಆರ್ ನಿಧಿಯಡಿ ಕ್ಯಾಥ್ ಲ್ಯಾಬ್ ಸೌಲಭ್ಯ ಒದಗಿಸಲು ತೀರ್ಮಾನಿಸಲಾಗಿದೆ. ಜತೆಗೆ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿ-ಆರ್‌ಐ) ಹೊಸ ಕ್ಯಾಂಪಸ್ ಅನ್ನು ಬೆಂಗಳೂರು ಪಶ್ಚಿಮದಲ್ಲಿ ಸ್ಥಾಪಿಸಲು ಕನಿಷ್ಠ ಐದು ಎಕರೆ ಸರಕಾರಿ ಭೂಮಿಯನ್ನು ಗುರುತಿಸುವಂತೆ ಪಶ್ಚಿಮ ಮಹಾನಗರ ಪಾಲಿಕೆ ಆಯುಕ್ತರಿಗೆ ಇಲಾಖೆ ಸೂಚಿಸಲಾಗಿದೆ.

''ಗೋವಿಂದರಾಜ ನಗರದಲ್ಲಿರುವ ಜಿಬಿಎನ ಮಲ್ಟಿ ಸ್ಪೆಷಾಲಿಟಿ ಕಟ್ಟಡದಲ್ಲಿ ಸ್ಥಾಪಿಸಲಾಗುವ ಹೊಸ ಘಟಕದಿಂದ ವಿಜಯನಗರ, ರಾಜಾಜಿನಗರ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಪೀಣ್ಯ ಮತ್ತು ಬೆಂಗಳೂರು ಗ್ರಾಮಾಂತರ ನಿವಾಸಿಗಳು ಹಾಗೂ ರಾಮನಗರ, ಮಂಡ್ಯ, ತುಮಕೂರು ಮತ್ತು ಹಾಸನ ಜಿಲ್ಲೆಗಳ ರೋಗಿಗಳಿಗೆ ಅನುಕೂಲವಾಗಲಿದೆ,'' ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಹೇಳಿದರು.

''ಬೆಂಗಳೂರಿನ ಮಧ್ಯ, ಉತ್ತರ ಮತ್ತು ಪೂರ್ವ ಭಾಗದಲ್ಲೂ ಜಯದೇವ ಘಟಕಗಳನ್ನು ಸ್ಥಾಪಿಸುವ ಚಿಂತನೆ ಸರಕಾರಕ್ಕಿದೆ. ಉತ್ತರ ಬೆಂಗಳೂರಿನ ಘಟಕಕ್ಕೆ ಈಗಾಗಲೇ ಸ್ಥಳ ಗುರುತಿಸಲಾಗಿದ್ದು, ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ಸಮಾಲೋಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು,'' ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ದಿನೇಶ್ ತಿಳಿಸಿದರು.

ಶಾಸಕ ಪ್ರಿಯಾಕೃಷ್ಣ ಈ ವೇಳೆ ಉಪಸ್ಥಿತರಿದ್ದರು.

ವಾಸವಿ ಜಯಂತಿ ಸಂಗೀತೋತ್ಸವ

ಬೆಂಗಳೂರು: ನಗರದ ವಿವಿ ಪುರಂನಲ್ಲಿರುವ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ವಾಸವಿ ಜಯಂತಿ ಸಂಗೀತೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತಿದೆ.

ಕನ್ನಿಕಾ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಏ. 26 ರ ಭಾನುವಾರದ ತನಕ ಪ್ರತಿದಿನ ಹೋಮ ಹವನಗಳು, ವಿಶೇಷ ಅಲಂಕಾರ ಪೂಜೆ ಪ್ರಸಾದ ವಿನಿಯೋಗ ನಡೆಯುತ್ತಿದೆ. ವಾಸವಿ ಪೀಠಾಧಿಪತಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮಾರ್ಗದರ್ಶನದಲ್ಲಿ ಏ. 25 ರ ಶನಿವಾರ ಗಾನ ಸುರಭಿ ತಂಡದಿಂದ ನಾದ ವೈಭವ ನಡೆಯಲಿದೆ. ಏ 26 ರ ಭಾನುವಾರ ಸಂಜೆ 6 ಗಂಟೆಗೆ ರಜತ ಬ್ರಹ್ಮರಥೋತ್ಸವ ನಡೆಯಲಿದೆ ಎಂದು ಮಾರ್ಗದರ್ಶಕ ಡಾ. ಎಸ್. ವಿ. ಎಸ್. ಗುಪ್ತ, ಅಧ್ಯಕ್ಷ ಬಿ. ಎ. ಶ್ರೀನಿವಾಸ್ ಗುಪ್ತ, ಉಪಾಧ್ಯಕ್ಷ ಎ. ಬಾಲಚಂದ್ರ, ಸಿ. ಎ. ಐ. ಎಸ್. ಪ್ರಸಾದ್, ಕಾರ್ಯದರ್ಶಿ ಎಲ್. ಸುರೇಶ್, ಜಂಟಿ ಕಾರ್ಯದರ್ಶಿ ಎಂ ಎಸ್. ಪ್ರಕಾಶ್, ಖಜಾಂಚಿ ಮಾನಂದಿ ಸತೀಶ್, ಜಂಟಿ ಖಜಾಂಚಿ ಎನ್. ಎಸ್. ಶ್ರೀನಿವಾಸಮೂರ್ತಿ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರು ತಿಳಿಸಿದ್ದಾರೆ.

ಅಗ್ರಿ ಟೆಕ್ ಸಮ್ಮಿಟ್‌ನಲ್ಲಿ ತಂತ್ರಜ್ಞಾನ, ಸ್ಟಾರ್ಟಪ್‌ಗಳ ಆಕರ್ಷಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಇವಿ ಚಾಲಿತ ಟ್ರ್ಯಾಕ್ಟರ್‌ನಿಂದ ಡ್ರೋನ್‌ವರೆಗೆ ಹಲವು ಕೃಷಿ ಉಪಕರಣಗಳು ರೈತರನ್ನು ಸೆಳೆದರೆ, ಶುದ್ಧ ಮುತ್ತು-ಹವಳಗಳು ಮಹಿಳೆಯರನ್ನು ಆಕರ್ಷಿಸುತ್ತಿದ್ದವು. ಆಹಾರ ಸಂಸ್ಕರಣೆ, ಮೌಲ್ಯವರ್ಧಿತ ಉತ್ಪನ್ನಗಳು ಉದ್ಯಮಿಗಳನ್ನು ಸೆಳೆಯುತ್ತಿದ್ದವು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ಬೆಂಗಳೂರು ಕೃಷಿ ವಿವಿ ಸಹಭಾಗಿತ್ವದೊಂದಿಗೆ ಅರಮನೆ ಆವರಣದಲ್ಲಿ ಆಯೋಜಿಸಿರುವ 'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026'ರಲ್ಲಿ ಕಂಡು ಬಂದ ದೃಶ್ಯಗಳಿವು.

ಬಿಸಿಲಿನ ಝಳವನ್ನೂ ಲೆಕ್ಕಿಸದೆ ಉತ್ಪಾದನೆ ಮತ್ತು ಆದಾಯ ಹೆಚ್ಚಿಸಿಕೊಳ್ಳಬಹುದಾದ ತಾಂತ್ರಿಕ ವ್ಯವಸ್ಥೆಗಳನ್ನು ನೋಡಲು ದೂರದ ಊರುಗಳಿಂದ ರೈತರು ಆಗಮಿಸಿದ್ದರು. ಸ್ವ ಉದ್ಯೋಗ ಮಾಡಬೇಕೆನ್ನುವವರಿಗೆ ಹಲವು ಸ್ಟಾರ್ಟಪ್‌ಗಳು ಮಾಹಿತಿ ನೀಡುತ್ತಿದ್ದವು. ಔಷಧ ಸಿಂಪಡಣೆ, ಹವಾಮಾನ ಮುನ್ಸೂಚನೆ ನೀಡುವ ಡ್ರೋನ್‌ಗಳು ಗಮನ ಸೆಳೆದವು.

ಕೃಷಿ ಟೆಕ್ ಸ್ಟಾರ್ಟಪ್‌ಗಳು, ರೈತರು, ರೈತ ಉತ್ಪಾದಕ ಸಂಸ್ಥೆಗಳು, ಆಹಾರ ಸಂಸ್ಕರಣೆ, ಸುಧಾರಿತ ಪ್ಯಾಕೇಜಿಂಗ್, ಕೃಷಿ ಇನ್‌ಪುಟ್ ಸರಬರಾಜುದಾರರು, ರಫ್ತುದಾರರು, ಸಂಶೋಧನಾ ಸಂಸ್ಥೆಗಳು, ಲಾಜಿಸ್ಟಿಕ್ ಪೂರೈಕೆದಾರರು, ಹಣಕಾಸು ಸಂಸ್ಥೆಗಳಂತಹ ಅನೇಕ ಸಂಸ್ಥೆಗಳು ಪಾಲ್ಗೊಂಡಿದ್ದವು. ಸ್ಮಾರ್ಟ್ ನೀರಾವರಿ ತಂತ್ರಜ್ಞಾನ ವ್ಯವಸ್ಥೆಗಳ ನೇರ ಪ್ರದರ್ಶನವೂ ಇತ್ತು.

ಸರಕಾರಿ ಸಂಸ್ಥೆಗಳಾದ ಜಲಾನಯನ ಅಭಿವೃದ್ಧಿ ಇಲಾಖೆ, ಕೆಪೆಕ್, ಮೈಸೂರು ಸ್ಯಾಂಡಲ್‌ನಂತಹ ಸಂಸ್ಥೆಗಳು ತಮ್ಮ ಉತ್ಪನ್ನಗಳ ಬಗ್ಗೆ ಪ್ರದರ್ಶನದಲ್ಲಿ ಮಾಹಿತಿ ನೀಡುತ್ತಿದ್ದವು.

ರಾಜ್ಯ ರೈತ ಉತ್ಪಾದಕರ ಸಂಸ್ಥೆಯಲ್ಲಿ ಬಗೆ ಬಗೆಯ ಉಪ್ಪಿನಕಾಯಿ, ಸಿರಿಧಾನ್ಯಗಳ ಮಾಲ್ಟ್, ರೇಷ್ಮೆ ಇಲಾಖೆ ಮಳಿಗೆಯಲ್ಲಿ ರೇಷ್ಮೆ ಗೂಡಿನಿಂದ ತಯಾರಾದ ಹಾರ, ತೋರಣ ಮತ್ತಿತರ ಅಲಂಕಾರಿಕ ಉತ್ಪನ್ನಗಳು, ಸಿಹಿ ನೀರಿನ ಮುತ್ತುಗಳು ಮತ್ತು ಅದರಿಂದ ತಯಾರಾದ ಆಭರಣಗಳಿದ್ದವು.

ಬೆಂಗಳೂರು ಕೃಷಿ ವಿವಿಯ ಮುಂಗಾರಿಗೆ ಲಭ್ಯವಿರುವ ಬಿತ್ತನೆ ಬೀಜಗಳ ಘಟಕ, ಚಿತ್ರದುರ್ಗ ಜಿಲ್ಲಾ ಖಾದಿ ಪರಸ್ಪರ ಸಹಕಾರ ಸಂಘದ ಮಳಿಗೆಯಲ್ಲಿ ಖಾದಿ ಬಟ್ಟೆಗಳನ್ನು ಸಿಎಂ ಸಿದ್ದರಾಮಯ್ಯ ವೀಕ್ಷಿಸಿದರು.

ಬಗೆಬಗೆಯ ತಿಂಡಿ ತಿನಿಸು

ಸಿರಿಧಾನ್ಯಗಳಿಂದ ತಯಾರಿಸಿದ ನಾನಾ ಬಗೆಯ ತಿಂಡಿಗಳು ಮೇಳಕ್ಕೆ ಬಂದಿದ್ದವರ ಮನಸೆಳೆದವು. ದೋಸೆ, ಪಾಯಸ, ಐಸ್‌ಕ್ರೀಂ ಮತ್ತಿತರ ಪದಾರ್ಥಗಳು ತಿನ್ನುವವರ ರುಚಿ ಹೆಚ್ಚಿಸಿದ್ದವು. ಜತೆಗೆ, ಬಿಸಿಲಲ್ಲಿ ದಣಿದವರು ಕಟ್‌ಫ್ರೂಟ್ಸ್ ಮತ್ತು ಜ್ಯೂಸ್ ಕುಡಿಯುತ್ತಿದ್ದರು. ಇದೇ ರೀತಿ ಸಾಕಷ್ಟು ಆಹಾರ ಮಳಿಗೆಗಳೂ ಮೇಳದಲ್ಲಿದ್ದವು. 'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್ ಏ.26 ರವರೆಗೆ ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ. ಬೆಳಗ್ಗೆ 9 ರಿಂದ ರಾತ್ರಿಯವರೆಗೆ ಮಳಿಗೆಗಳು ತೆರೆದಿರುತ್ತವೆ.

ಸಾರ್ವಜನಿಕ ಪ್ರಕಟಣೆ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಇವರು ಶೃಂಗೇರಿ ತಾಲ್ಲೂಕು, ಕಸಬಾ ಹೋಬಳಿ, ಶೃಂಗೇರಿ ಪಟ್ಟಣದ ಭಾರತೀಬೀದಿಯಲ್ಲಿರುವ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸೊತ್ತನ್ನು ಅದರ ಮಾಲೀಕರಾದ ಶ್ರೀ **ಅಶೋಕ್ ಕುಮಾರ್** ಬಿನ್ ದಿ|| ಎಸ್.ವಿ. ಮಂಜಪ್ಪಯ್ಯ ಸುಮಾರು 63 ವರ್ಷ, ಹಾಲಿ ವಾಸ ನಂ-48/44, ಭಾರತೀಬೀದಿ, ಶೃಂಗೇರಿ ಪಟ್ಟಣ, ಶೃಂಗೇರಿ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ ಇವರಿಂದ ಕ್ರಯಕ್ಕೆ ಪಡೆಯುವ ಬಗ್ಗೆ ಮಾತುಕತೆ ನಡೆಸಿರುತ್ತಾರೆ. ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸೊತ್ತಿನ ಸಂಬಂಧ ಯಾರದ್ದಾದರೂ ಯಾವುದೇ ರೀತಿಯ ಹಕ್ಕು ಬಾದ್ಯತೆಗಳು, ಹಿತಾಸಕ್ತಿ ಹಾಗೂ ಮಾರಾಟದ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ ಹತ್ತು ದಿನಗಳ ಒಳಗೆ ಸೂಕ್ತವಾದ ದಾಖಲಾತಿಗಳೊಂದಿಗೆ ಹಾಗೂ ಹಕ್ಕುಗಳನ್ನು ಪ್ರತಿಪಾದಿಸುವ ದಾಖಲಾತಿಗಳೊಂದಿಗೆ ತಮ್ಮ ಅಹವಾಲುಗಳನ್ನು ಈ ಕೆಳಗೆ ಸಹಿ ಮಾಡಿರುವವರ ಸಮಾಕ್ಷಮ ಸಲ್ಲಿಸತಕ್ಕದ್ದು. ಒಂದುವೇಳೆ ನಿಗದಿತ ಅವಧಿಯ ಒಳಗೆ ಯಾವುದೇ ರೀತಿಯ ತಕರಾರುಗಳು ಹಾಗೂ ಅಹವಾಲುಗಳು ಬಾರದೇ ಇದ್ದಲ್ಲಿ ಖರೀದಿದಾರರು ಷೆಡ್ಯೂಲ್ ಸೊತ್ತಿನ ಕ್ರಯದ ಬಗ್ಗೆ ಮುಂದುವರೆಯುತ್ತಾರೆ. ಅನಂತರ ಬರುವ ಯಾವುದೇ ಅಹವಾಲುಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಷೆಡ್ಯೂಲ್

ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲ್ಲೂಕು, ಕಸಬಾ ಹೋಬಳಿ, ಶೃಂಗೇರಿ ಪಟ್ಟಣದ ಭಾರತೀಬೀದಿಯ ಪೂರ್ವ ಸಾಲಿನಲ್ಲಿರುವ (ವಾರ್ಡ್ ನಂ 4) ಶೃಂಗೇರಿ ಪಟ್ಟಣ ಪಂಚಾಯ್ತಿಯ ನಮೂನೆ 3 (ನಿಯಮ 20) ರ ಇ-ಖಾತೆ ದಾಖಲೆಯಲ್ಲಿ ಇ-ಖಾತೆ ಸಂಖ್ಯೆ: 2-502-1 ಸೊತ್ತಿನ ಹಳೆ ಸಂಖ್ಯೆ: 48/44 ನಿರ್ಧರಣಾ ಸಂಖ್ಯೆ: 48/44 ಹೊಂದಿರುವ ಪೂರ್ವ-ಪಶ್ಚಿಮವಾಗಿ 99.60 ಮೀಟರ್ ಹಾಗೂ ಉತ್ತರ-ದಕ್ಷಿಣಕಾಗಿ 06.30 ಮೀಟರ್ ಈ ಪ್ರಕಾರವಾಗಿ ಜುಮ್ಲಾ 627.48 ಚದರ ಮೀಟರ್ ವಿಸ್ತೀರ್ಣವಿರುವ ನಿವೇಶನ ಮತ್ತು ಸದರಿ ನಿವೇಶನದಲ್ಲಿರುವ 185.898903 ಚದರ ಮೀಟರ್ ವಿಸ್ತೀರ್ಣದ ಪ್ಲಿಂತ್ ಏರಿಯ ಹೊಂದಿರುವ ಕಟ್ಟಡ, ಸದರಿ ಕಟ್ಟಡಕ್ಕೆ ಕೆಲವು ಭಾಗದಲ್ಲಿ ಮಂಗಳೂರು ಹೆಂಚು ಹೊದಿಸಿದ್ದು ಕೆಲ ಭಾಗದಲ್ಲಿ ಎ.ಸಿ. ಶೀಟ್ ಅಳವಡಿಸಿದ್ದು ಕೆಲಭಾಗವು ಆರ್.ಸಿ.ಸಿ. ಕಟ್ಟಡವಾಗಿರುತ್ತದೆ. ಮೇಲ್ಕಂಡ ಪೂರ್ತಿ ನಿವೇಶನ ಮತ್ತು ಅದರಲ್ಲಿರುವ ಪೂರ್ತಿ ಕಟ್ಟಡ, ಮಂಗಳೂರು ಹೆಂಚು ಹೊದಿಸಿದ ರೆಡ್ ಆಕ್ಸೈಡ್ ನೆಲಹಾಸು ಇರುವ ಪ್ರದೇಶವು 44.128925 ಚದರ ಮೀಟರ್ ಹಾಗೂ 50.260523 ಚದರ ಮೀಟರ್ ಪ್ರದೇಶವಿದ್ದು ಆರ್.ಸಿ.ಸಿ. ಕಟ್ಟಡವು 33.909595 ಚದರ ಮೀಟರ್ ಹಾಗೂ 33.445080 ಚದರ ಮೀಟರ್ ಪ್ರದೇಶದಲ್ಲಿದ್ದು ಆರ್.ಸಿ.ಸಿ. ಕಟ್ಟಡದ ಪ್ರದೇಶದಲ್ಲಿ ಸೆರಾಮಿಕ್ ನೆಲಹಾಸು ಹೊಂದಿರುತ್ತದೆ ಅಲ್ಲದೇ ಷೆಡ್ಯೂಲ್ ಸ್ವತ್ತಿನಲ್ಲಿನ ಎಸಿ ಶೀಟ್ ಕಟ್ಟಡದ ವಿಸ್ತೀರ್ಣವು 24.154780 ಚದರ ಮೀಟರ್ ಆಗಿರುತ್ತದೆ. **ಸ್ವತ್ತಿನ ಚೆಕ್ಕು ಬಂಧಿ:**

ಪೂರ್ವಕ್ಕೆ : ಗಾಂಧೀ ಮೈದಾನಕ್ಕೆ ಹೋಗುವ ರಸ್ತೆ
ಪಶ್ಚಿಮಕ್ಕೆ : ಎಸ್. ಪ್ರತಿಭಾ ಬಿನ್ ಮಂಜಪ್ಪಯ್ಯರವರ ಸ್ವತ್ತು
ಉತ್ತರಕ್ಕೆ : ಅಸೆಸ್‌ಮೆಂಟ್ ನಂಬರ್ 49/45/1, 49/45/2, 49/45/3ರ ಸ್ವತ್ತುಗಳು
ದಕ್ಷಿಣಕ್ಕೆ : ಪಟ್ಟಣ ಪಂಚಾಯ್ತಿ ರಸ್ತೆ

ಸ್ಥಳ: ಶೃಂಗೇರಿ
ದಿನಾಂಕ: 23.04.2026

ಎಸ್.ಜಿ. ಶಶಿಭೂಷಣ್
ವಕೀಲರು ಭಾರತೀಬೀದಿ, ಶೃಂಗೇರಿ
ಮೊ.: 9448500526

In The Court Of The Hon'ble Principal Senior Civil Judge and Mact at Chitradurga.
M.V.C. No. 354/2024
Petitioner :
Vijaykumar and others,
V/s
Repondents :
Zameer Khan and others.
Respondent No. 1 : **Zameer Khan S/o Nazeer Khan,** R/o H.No. 05, Masjid Road, Attibele, Anekal Taluk, Bangalore - 562107. Owner of the Lorry bearing Regn. No. KA-16-C-9946
PAPER PUBLICATION NOTICE TO RESPONDENT No. 1
Whereas the above named Petitioner filed the above petition before this Hon'ble Court praying for award compensation an account of death of Vishal Kumar V., in Motor Vehicle Accident. As per the order of this Hon'ble Court passed on 07.04.2026, your the above said addressee No. 1 i.e., Respondent No. 1 is hereby called upon to participate in the proceedings either in person or through Counsel on dated : 19.06.2025 at 11.00 a.m., Chitradurga failing which you will be placed exparte and the matter will be decided on merits. Given under my hands and the seal on the Court on 17.04.2026
By order of the Court
Sd /- **Shirasthedar,** Hob'ble Prl. Sr. Civil Judge & MACT, Chitradurga.
Sd /- **M. Nagendra,** Advocate for Petitioners, Chitradurga.
Dated : 07.04.2026

ಎಲ್ಲಿ-ಏನು? ಶನಿವಾರ

ಕಾನ್ಫಿಡರೇಷನ್ ಆಫ್ ಲಾ ಟೀಚರ್ಸ್: ಇಂಟರ್‌ಸೆಕ್ಷನ್ ಆಫ್ ಲಾ ಆ್ಯಂಡ್ ಟೆಕ್ನಾಲಜಿ-ಇಂಪ್ಯಾಕ್ಟ್ ಆನ್ ಲೀಗಲ್ ಎಜುಕೇಷನ್, ಲೀಗಲ್ ಪ್ರೊಫೆಷನ್ ಆ್ಯಂಡ್ ಜಸ್ಟೀಸ್ ಅಡ್ಮಿನಿಸ್ಟ್ರೇಷನ್. ಉದ್ಘಾಟನೆ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಅಧ್ಯಕ್ಷತೆ: ದಿಲ್ಲಿ ನ್ಯಾಯಾಂಗ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಬಿ.ಟಿ.ಕೌಲ್.
ಸ್ಥಳ: ಸಭಾಂಗಣ, ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಲಾ, ಎಂಎಸ್‌ಆರ್ ನಗರ, ಎಂಎಸ್‌ಆರ್ ಐಟಿ ಕ್ಯಾಂಪಸ್. ಬೆಳಗ್ಗೆ 10

ಸ್ಟೇಜ್ ಬೆಂಗಳೂರು, ರಂಗವರ್ಣ ತಂಡ: 'ರಂಗ ಸಂವಾದ' ಕಾರ್ಯಕ್ರಮ. ಕೃಷ್ಣಮೂರ್ತಿ ಕವತ್ತಾರ್ ಅವರ ಭಾಷಣ ಮರುಪ್ರಸಾರ ಹಾಗೂ ಸಮಕಾಲೀನ ಗ್ರಹಿಕೆಗಳ ಕುರಿತು ಚರ್ಚೆ.
ಸ್ಥಳ: ಕೆ.ವಿ.ಸುಬ್ಬಣ್ಣ ಆಪ್ತ ರಂಗಮಂದಿರ, ಕುಮಾರಸ್ವಾಮಿ ಲೇಔಟ್. ಬೆಳಗ್ಗೆ 10

ನವ ಬೆಂಗಳೂರು ಫೌಂಡೇಶನ್: ವಿದ್ಯಾರ್ಥಿವೇತನ ವಿತರಣಾ ಸಮಾರಂಭ. ಅತಿಥಿ: ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ. ರಾಮಮೂರ್ತಿ, ನಟಿ ಮಾನುಷಿ ಛಿಲ್ಲರ್, ಉಪಸ್ಥಿತಿ: ನಟ ಅನಿಲ್ ಶೆಟ್ಟಿ.



ಸ್ಥಳ: ಸತ್ಯ ಸಾಯಿ ಸಂಸ್ಕೃತಿ ಸದನ, ಕೋರಮಂಗಲ. ಬೆಳಗ್ಗೆ 10.30

ಈ ಹೊತ್ತಿಗೆ ಟ್ರಸ್ಟ್: ಡಾ. ಅಮರೇಶ್ ನುಗಡೋಣಿ ಅವರ 'ದಡ ಸೇರಿಸು ತಂದೆ' ಪುಸ್ತಕ ಕುರಿತು 'ತಿಂಗಳ ಪುಸ್ತಕ ಚರ್ಚೆ-81' ಕಾರ್ಯಕ್ರಮ. ಅತಿಥಿ: ವಿಮರ್ಶಕ ಡಾ. ಬಸವರಾಜ ಕಲ್ಗುಡಿ.
ಸ್ಥಳ: ಬೀಟಲ್ ಬುಕ್ ಶಾಪ್, ಎಲ್‌ಜೆ ಆರ್ಕೇಡ್, 14ನೇ ಮುಖ್ಯರಸ್ತೆ, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ, ಬಸವೇಶ್ವರ ಕಾಲೇಜಿನ ಎದುರು. ಸಂಜೆ 4

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ: ಅಂತಾರಾಷ್ಟ್ರೀಯ ಕೃಷಿ ಸಮ್ಮೇಳನ-2026 ಹಾಗೂ ಕೃಷಿ ವಸ್ತು ಪ್ರದರ್ಶನ. 'ಗಾಲಾ ಅವಾರ್ಡ್ ಕಾರ್ಯಕ್ರಮ'. ಅಧ್ಯಕ್ಷತೆ: ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಅತಿಥಿ: ಕಾನೂನು ಸಚಿವ ಎಚ್.ಕೆ.ಪಾಟೀಲ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ.
ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ. ಸಂಜೆ 4.30

ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್: ಶಂಕರ ಜಯಂತ್ಯುತ್ಸವ-2026. ಉದ್ಘಾಟನೆ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್, ಅಧ್ಯಕ್ಷತೆ: ನಿವೃತ್ತ ನ್ಯಾಯಮೂರ್ತಿ ಕೆ.ವಿ.ನರಸಿಂಹನ್.
ಸ್ಥಳ: ಸಿದ್ಧಾಶ್ರಮ, ಸಿದ್ಧಾಶ್ರಮ ರಸ್ತೆ, ಮಲ್ಲೇಶ್ವರ. ಸಂಜೆ 5.30

ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್: ಪ್ರಯೋಗ ನೃತ್ಯ ಶಾಲೆ ತಂಡದಿಂದ ಭರತನಾಟ್ಯ ಪ್ರದರ್ಶನ.
ಸ್ಥಳ: ಸಾಂಸ್ಕೃತಿಕ ಮಂದಿರ, 9ನೇ ಬಡಾವಣೆ, ಜಯನಗರ. ಸಂಜೆ 6.30

ರಂಗಾಸ್ಥೆ ಟ್ರಸ್ಟ್: 'ಈದಿ' ನಾಟಕ ಪ್ರದರ್ಶನ.
ಸ್ಥಳ: ಯುವಪಥ, ಜಯನಗರ 4ನೇ 'ಟಿ' ಬ್ಲಾಕ್. ಸಂಜೆ 7.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆ್ಯಪ್ ಮಾಡಿ
76766 68588

ವಾರಾಂತ್ಯ

ಶನಿವಾರ

ರಸಾನುಭಾವ

ನಟೇಶ ನೃತ್ಯಾಲಯ ಸಂಸ್ಥೆಯು ರಸ, ಭಾವ ಮತ್ತು ಕಲೆಯ ಸಂಭ್ರಮ 'ರಸಾನುಭಾವ' ಕಾರ್ಯಕ್ರಮವನ್ನು ಆಯೋಜಿಸಿದೆ. ಕಾರ್ಯಕ್ರಮದಲ್ಲಿ ಶ್ರೀಹರಿ ಮತ್ತು ತಂಡದಿಂದ ಕಥಕ್ ಪ್ರದರ್ಶನ, ನಯನ ಶ್ರೀನಿವಾಸಮೂರ್ತಿ ಅವರಿಂದ ಭರತನಾಟ್ಯ ಪ್ರದರ್ಶನ, ಆಕ್ಷಿತಿ ರಾಯ್‌ಚೌಧರಿ ಅವರಿಂದ ಒಡಿಸ್ಸಿ ನೃತ್ಯ ಪ್ರದರ್ಶನ ಸೇರಿದಂತೆ ನಾನಾ ಕಾರ್ಯಕ್ರಮಗಳು ಜರುಗಲಿವೆ.
ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್. ಬೆಳಗ್ಗೆ 10

ಕಲಾ ಸ್ಪಂದನ

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ಹಾಗೂ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಜಂಟಿಯಾಗಿ 'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ, ನೃತ್ಯ ತಿಂಗಳ ಕಾರ್ಯಕ್ರಮವನ್ನು ಆಯೋಜಿಸಿವೆ. ಕಾರ್ಯಕ್ರಮದಲ್ಲಿ ಪ್ರಕ್ಷಿಲಾ ಜೈನ್ ಬಿ. ಭರತನಾಟ್ಯ ಪ್ರಸ್ತುತಪಡಿಸಲಿದ್ದಾರೆ. ಜತೆಗೆ, ವರ್ಣಿಕ ಸಂದೀಪ್ ಮತ್ತು ರಿತೀಷ ಜೆ.ಆರ್. ಹಿಂದೂಸ್ತಾನಿ ಗಾಯನ ಪ್ರಸ್ತುತಪಡಿಸಲಿದ್ದಾರೆ.
ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ 4ನೇ ಬ್ಲಾಕ್. ಸಂಜೆ 6

ಸಂಗೀತ ಕಾರ್ಯಕ್ರಮ

ಅದ್ವೈತ ಫೌಂಡೇಶನ್ ದಿ. ಬಿ.ಎನ್. ಗೋಪಾಲ್ ಅವರ 100ನೇ ವರ್ಷದ ಜನ್ಮ ದಿನಾಚರಣೆ ಅಂಗವಾಗಿ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿದೆ. ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಗಾಯಕಿ ಬೇಗಂ ಪರ್ವೀನ್ ಸುಲ್ತಾನ ಗಾಯನ ಪ್ರಸ್ತುತಪಡಿಸಲಿದ್ದಾರೆ.
ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ. ಸಂಜೆ 6.30

ಭಾನುವಾರ

ನಾಟಕ



ಅಂತರಂಗ ಬಹಿರಂಗ ರಂಗತಂಡವು ಬಾಷ್ ರಾಘವೇಂದ್ರ ನಿರ್ದೇಶನದ 'ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್' ಎಂಬ ಸಾಂಸಾರಿಕ ನಗೆ ನಾಟಕದ 26ನೇ ಪ್ರದರ್ಶನವನ್ನು ಆಯೋಜಿಸಿದೆ.
ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ. ಸಂಜೆ 6.30

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಶನಿವಾರ,25 ಏಪ್ರಿಲ್ 2026
X.com /vijaykarnataka facebook.com/vijaykarnataka www.vijaykarnataka.com

ಎಚ್‌ಡಿಎಫ್‌ಸಿ ಬ್ಯಾಂಕ್ ಸಿಎಸ್‌ಆರ್ ಅನುದಾನದಡಿ ಬೆಂಗಳೂರು ಪೂರ್ವ ನಗರ ಪಾಲಿಕೆಗೆ ರಸ್ತೆ ಗುಡಿಸುವ ಯಂತ್ರವನ್ನು ಕೊಡುಗೆಯಾಗಿ ನೀಡಿದೆ.

ಕಲ್ಯಾಣ ಮಂಟಪಗಳಲ್ಲಿ ಆಭರಣ ಕಳವು: ಪಲ್ಸರ್ ಬಾಬು ಬಂಧನ

ಬೆಂಗಳೂರು: ಕಲ್ಯಾಣ ಮಂಟಪಗಳಲ್ಲಿ ಚಿಕ್ಕ ಮಕ್ಕಳನ್ನು ಯಾಮಾರಿಸಿ ಚಿನ್ನಾಭರಣ ಕದ್ದೊಯ್ಯುತ್ತಿದ್ದ ಆರೋಪಿಯನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆಂಧ್ರಹಳ್ಳಿಯ ಎಚ್.ಕೆ. ಬಾಬು ಅಲಿಯಾಸ್ ಪಲ್ಸರ್ ಬಾಬು (45) ಬಂಧಿತ.

ಥಣಿಸಂದ್ರದ ಇಬಿಸಿ ಕಲ್ಯಾಣ ಮಂಟಪದಲ್ಲಿ ಫೆ.2ರಂದು ನಡೆದ ಮದುವೆ ವೇಳೆ ಪೋಷಕರ ಜತೆ ತೆರಳಿದ್ದ ಏಳು ವರ್ಷದ ಬಾಲಕಿಯ ಎರಡು ಚಿನ್ನದ ಬಳೆ, ಚಿನ್ನದ ನೆಕ್ಲೇಸ್ ಕಸಿದು ಪರಾರಿಯಾಗಿದ್ದ. ಈ ಕುರಿತು ಬಾಲಕಿ ತಂದೆ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿ ಇತ್ತೀಚೆಗೆ ಆರೋಪಿ ಬಾಬುನನ್ನು ಬಂಧಿಸಲಾಗಿದೆ. ಆರೋಪಿ ಕದ್ದಿದ್ದ 5.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅರಮನೆ ಮೈದಾನ, ಮಂಟಪಗಳಲ್ಲಿಯೂ ಮಕ್ಕಳ ಚಿನ್ನಾಭರಣ ಕದ್ದಿದ್ದ ಬಾಬುನನ್ನು ಇದೇ ಮಾರ್ಚ್‌ನಲ್ಲಿ ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳಿಸಿದ್ದರು. ಜೈಲಿಂದ ಬಿಡುಗಡೆಯಾದ ಬಳಿಕ ಪುನಃ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಚನ್ನಪಟ್ಟಣ ಮೂಲದ ಬಾಬು, ಈ ಮೊದಲು ಅಡುಗೆ ಭಟ್ಟನಾಗಿ ಕೆಲಸ ಮಾಡುತ್ತಿದ್ದ. 2007ರಲ್ಲಿ ಮೊದಲ ಬಾರಿ ಕಳ್ಳತನ ಪ್ರಕರಣದಲ್ಲಿ ಕೆಂಗೇರಿ ಪೊಲೀಸರಿಂದ ಬಂಧನಕ್ಕೊಳಗಾಗಿ ಜೈಲು ಸೇರಿದ್ದ. ಮದುವೆ ಸಮಾರಂಭಗಳಲ್ಲಿ ಆಭರಣ ಧರಿಸುವ ಮಕ್ಕಳನ್ನು ಮಾತನಾಡಿಸುವ ನೆಪದಲ್ಲಿ ಚಿನ್ನದ ಸರ, ಉಂಗುರ ಕದಿಯುತ್ತಿದ್ದ. ಆಭರಣ ಕದಿಯಲು ಸಾಧ್ಯವಾಗದಿದ್ದರೆ ಬೈಕ್ ಕದ್ದು ಪರಾರಿಯಾಗುತ್ತಿದ್ದ. ಆರೋಪಿ ವಿರುದ್ಧ ವಿವಿಧ ಠಾಣೆಗಳಲ್ಲಿ 11 ಕೇಸ್‌ಗಳು ದಾಖಲಾಗಿವೆ. ಹಲವು ಬಾರಿ ಜೈಲು ಸೇರಿ ಬಿಡುಗಡೆಯಾಗಿದ್ದರೂ ಬುದ್ಧಿ ಕಲಿಯದೆ ಮತ್ತೆ ಮತ್ತೆ ಕಳ್ಳತನ ಕೃತ್ಯ ಮುಂದುವರಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಚೀಲದಲ್ಲಿ ಅಪರಿಚಿತನ ಮೃತದೇಹ ಪತ್ತೆ: ಹಂತಕರ ಪತ್ತೆಗೆ ಖಾಕಿ ತನಿಖೆ

ಬೆಂಗಳೂರು: ಲಕ್ಷ್ಮೀಪುರದ ಬಿಡಿಎ ಲೇಔಟ್‌ನಲ್ಲಿ ಅಪರಿಚಿತನ ಮೃತದೇಹ ಚೀಲದಲ್ಲಿ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ. ಬಿಡಿಎ ಲೇಔಟ್‌ನ ನಿರ್ಜನ ಪ್ರದೇಶದಲ್ಲಿ ಚೀಲವೊಂದನ್ನು ನಾಯಿಗಳು ಎಳೆದಾಡುತ್ತಿರುವುದನ್ನು ಶುಕ್ರವಾರ ಬೆಳಗ್ಗೆ ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲಿಸಿ ಮೃತದೇಹ ವಶಕ್ಕೆ ಪಡೆಯಲಾಗಿದ್ದು, ಅಪರಿಚಿತನ ಗುರುತು ಪತ್ತೆಗೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಸೀನ್ ಆಫ್ ಕ್ರೈಂ ಆಫೀಸರ್ಸ್ (ಸುಕೋ) ತಂಡಗಳು ಆಗಮಿಸಿ ಕೆಲವು ಮಾದರಿ ಸಂಗ್ರಹಿಸಿವೆ. ಮೃತನನ್ನು ಬೇರೆ ಕಡೆ ಕೊಲೆಗೈದು ಚೀಲದಲ್ಲಿ ಮೂಟೆ ಕಟ್ಟಿ ಎಸೆದು ಹೋಗಿರುವ ಅನುಮಾನವಿದೆ. ಪ್ರಕರಣದ ತನಿಖೆ ನಡೆಯುತ್ತಿದೆ. ಘಟನಾ ಸ್ಥಳದ ಸುತ್ತಮುತ್ತಲ ಪ್ರದೇಶದ ಸಿಸಿಟಿವಿ ಪರಿಶೀಲನೆ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆ ಎದುರಿಸಿದ ಪ್ರದೇಶಗಳಿಗೆ ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಭೇಟಿ

ಸಂಚಾರಿ ಕಾವೇರಿ ಟ್ಯಾಂಕರ್‌ಗಳ ಸಮರ್ಪಕ ಬಳಕೆ | ಪ್ರತಿದಿನ ಅಧಿಕಾರಿಗಳಿಂದ ಪರಿಸ್ಥಿತಿ ಅವಲೋಕನ

ಸಮರ್ಪಕ ನೀರು ಪೂರೈಕೆ: ಜಲಮಂಡಳಿ ಭರವಸೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಗರದಾದ್ಯಂತ ಪ್ರಸ್ತುತ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ತಕ್ಷಣವೇ ಸ್ಪಂದಿಸಲು ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ತೊಂದರೆ ಅನುಭವಿಸಿದ್ದ ಕನಕಪುರ ರಸ್ತೆ ಭಾಗದ ಬನಗಿರಿನಗರ, ಭುವನೇಶ್ವರಿನಗರ ಸೇರಿದಂತೆ ಹಲವು ಪ್ರದೇಶಗಳಿಗೆ ಶುಕ್ರವಾರ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಪ್ರಸ್ತುತ ನೀರಿನ ಸರಬರಾಜು ಪರಿಸ್ಥಿತಿ ಕುರಿತು ಸ್ಥಳೀಯ ನಿವಾಸಿಗಳೊಂದಿಗೆ ಮುಕ್ತವಾಗಿ ಚರ್ಚಿಸಿ ಮಾಹಿತಿ ಪಡೆದರು.

''ಕಳೆದ ಬೇಸಿಗೆಯಲ್ಲಿ ನೀರಿಗೆ ಸಾಕಷ್ಟು ತೊಂದರೆಯಾಗಿತ್ತು. ಆದರೆ, ಈ ಬಾರಿ ಜಲಮಂಡಳಿಯಿಂದ ಮುಂಜಾಗ್ರತಾ ಕ್ರಮವಾಗಿ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಿರುವುದರಿಂದ ನಮಗೆ ಯಾವುದೇ ಸಮಸ್ಯೆಯಾಗಿಲ್ಲ,'' ಎಂದು ಬನಗಿರಿ ನಗರದ ನಿವಾಸಿ ಸುಬ್ಬಮ್ಮ ಎಂಬುವವರು ಬೇಸಿಗೆಯಲ್ಲಿ ನೀರಿನ ಪೂರೈಕೆ ಸುಧಾರಿಸಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಮತ್ತೋರ್ವ ನಿವಾಸಿ ಮಲ್ಲಪ್ಪ ಪ್ರತಿಕ್ರಿಯಿಸಿ, ''ಮಿನಿ ಟ್ಯಾಂಕ್‌ಗಳ ಅಳವಡಿಕೆ ಹಾಗೂ ಕಾವೇರಿ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ನಮಗೆ ಬಹಳ ಅನುಕೂಲವಾಗಿದೆ. ಜಲಮಂಡಳಿ ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆದರೆ, ನಮ್ಮ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇನ್ನೂ ಕಲ್ಪಿಸಿಲ್ಲ. ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು,'' ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

ನಂತರ ಮಾತನಾಡಿದ ರಾಮ್‌ಪ್ರಸಾತ್, ''ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನದಂತೆ ಜಲಮಂಡಳಿ ವ್ಯಾಪ್ತಿಯಲ್ಲಿ ನೀರು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಗರದಾದ್ಯಂತ ನೀರಿನ ಸರಬರಾಜು ಪರಿಸ್ಥಿತಿ ಕುರಿತು ಪ್ರತಿ ದಿನ ಅಧಿಕಾರಿಗಳಿಂದ ವರದಿ ಪಡೆಯುತ್ತಿದ್ದು, ಲೋಪಗಳಿದ್ದಲ್ಲಿ ತಕ್ಷಣವೇ ಸರಿಪಡಿಸಲು ಸೂಚಿಸುತ್ತಿದ್ದೇನೆ. ಸಂಚಾರಿ ಕಾವೇರಿ ಟ್ಯಾಂಕರ್‌ಗಳು ಹಾಗೂ ಮಿನಿ ಟ್ಯಾಂಕ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಲಾಗುತ್ತಿದೆ,'' ಎಂದು ವಿವರಿಸಿದರು.

ಜಲಮಂಡಳಿಯ ಮುಖ್ಯ ಎಂಜಿನಿಯರ್ ವೆಂಕಟೇಶ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಿರುದ್ಯೋಗವೆಂದು ಜೀವನಾಂಶ ನಿರಾಕರಿಸಲಾಗದು

■ **ವಿಕ ಸುದ್ದಿಲೋಕ** ಬೆಂಗಳೂರು

''ಈ ಹಿಂದೆ ಹೆಚ್ಚಿನ ಆದಾಯ ಗಳಿಸುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ಪ್ರಸ್ತುತ ನಿರುದ್ಯೋಗಿಯಾಗಿದ್ದಾರೆಂಬ ಕಾರಣ ನೀಡಿ ಪತ್ನಿಗೆ ಜೀವನಾಂಶ ನೀಡುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ'' ಎಂದು ಹೈಕೋರ್ಟ್ ಆದೇಶಿಸಿದೆ.

ಮಾಸಿಕ 20 ಸಾವಿರ ರೂ. ಜೀವನಾಂಶ ಪಾವತಿಸಲು ನಿರ್ದೇಶಿಸಿರುವ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಾ.ಕೆ. ಮನ್ಮಥರಾವ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಸುಪ್ರೀಂಕೋರ್ಟ್‌ನ ಆದೇಶಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ''ದೇಹದಲ್ಲಿ ದುಡಿಯುವ ಶಕ್ತಿಯುಳ್ಳ ಗಂಡನು ಆದಾಯ ಗಳಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಕೇವಲ ನಿರುದ್ಯೋಗದ ಕಾರಣ ನೀಡಿ ಕಾನೂನುಬದ್ಧ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ,'' ಎಂದು ಆದೇಶಿಸಿದೆ.

''ಅಲ್ಲದೆ, ಪತಿಯ ಟಿಡಿಎಸ್ ದಾಖಲೆಗಳನ್ನು ಪರಿಗಣಿಸಿ, ಆತನಿಗೆ ಹೆಚ್ಚಿನ ಆದಾಯ ಗಳಿಸುವ ಸಾಮರ್ಥ್ಯವಿದೆ. ಪತ್ನಿ ಉದ್ಯೋಗದಲ್ಲಿದ್ದಾರೆಂಬ ಕಾರಣ ನೀಡಿ ಜೀವನಾಂಶ ಪಾವತಿಸುವುದನ್ನು ನಿರಾಕರಿಸಲಾಗುವುದಿಲ್ಲ,'' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರ ಪತಿ ಮತ್ತು ಪ್ರತಿವಾದಿ ಪತ್ನಿ 2021ರಲ್ಲಿ ಧಾರವಾಡದಲ್ಲಿ ವಿವಾಹವಾಗಿದ್ದರು. ಬಳಿಕ ದಂಪತಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿ 2022ರಲ್ಲಿ ಪ್ರತ್ಯೇಕವಾಗಿದ್ದರು. ಬಳಿಕ ಮಾಸಿಕ 70 ಸಾವಿರ ಜೀವನಾಂಶ ಕೋರಿ ಪತ್ನಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಮಾಸಿಕ 20 ಸಾವಿರ ಜೀವನಾಂಶ ನೀಡುವಂತೆ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಪತಿ ಹೈಕೋರ್ಟ್ ಮೊರೆ ಹೋಗಿದ್ದರು.

''ಪತ್ನಿ 70 ಸಾವಿರ ಜೀವನಾಂಶ ಕೇಳಿದ್ದರೂ, ಕೌಟುಂಬಿಕ ನ್ಯಾಯಾಲಯ 20 ಸಾವಿರ ಮೊತ್ತವನ್ನು ಮಂಜೂರು ಮಾಡಿದೆ. ಹಾಗಾಗಿ, ಕೌಟುಂಬಿಕ ನ್ಯಾಯಾಲಯದ ಆದೇಶದಲ್ಲಿ ಮಧ್ಯಪ್ರವೇಶಿಸಬೇಕೆಂಬ ಅಂಶ ಕಾಣುತ್ತಿಲ್ಲ'' ಎಂದು ಅಭಿಪ್ರಾಯಪಟ್ಟ ಪೀಠ, ''ಈವರೆಗೂ ಬಾಕಿ ಉಳಿದಿರುವ ಜೀವನಾಂಶದ ಮೊತ್ತವನ್ನು ಮೂರು ತಿಂಗಳೊಳಗೆ ಪಾವತಿಸಬೇಕು,'' ಎಂದು ನಿರ್ದೇಶಿಸಿ ಅರ್ಜಿ ವಜಾಗೊಳಿಸಿದೆ.

ಪತಿ ಪರ ವಕೀಲರು, '' ಅರ್ಜಿದಾರರು ಸಾಫ್ಟ್‌ವೇರ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಬಳಿಕ ಉದ್ಯೋಗ ಕಳೆದುಕೊಂಡಿದ್ದರು. ಪ್ರಸ್ತುತ ನಿರುದ್ಯೋಗಿಯಾಗಿದ್ದು ಉಳಿತಾಯ ಮತ್ತು ಪೋಷಕರ ಪಿಂಚಣಿಯ ಮೇಲೆ ಬದುಕುತ್ತಿದ್ದಾರೆ. ಅಲ್ಲದೆ, ಪತ್ನಿ ಮಲೇಷ್ಯಾದ ಸನ್ವೇ ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿ ಪದವಿ ಪಡೆದು 2023 ರ ಜನವರಿಯಿಂದ ತಿಂಗಳಿಗೆ 40 ಸಾವಿರಕ್ಕೂ ಅಧಿಕ ಸಂಬಳ ಪಡೆಯುತ್ತಿದ್ದಾರೆ. ಅವರ ತಾಯಿ ಪಿಂಚಣಿದಾರರಾಗಿದ್ದು ಯಾರೂ ಅವರನ್ನು ಅವಲಂಬಿಸಿಲ್ಲ'' ಎಂದರು.

ಅದಕ್ಕೆ ಆಕ್ಷೇಪಿಸಿದ ಪತ್ನಿಯ ಪರ ವಕೀಲರು, ''ಪತ್ನಿ ವೈವಾಹಿಕ ಜೀವನದಲ್ಲಿ ಹಿಂಸೆಗೊಳಗಾಗಿದ್ದರು. ಜತೆಗೆ ಬೆದರಿಕೆಯೂ ಇತ್ತು. ಪತಿಯು ತಿಂಗಳಿಗೆ 4.5 ಲಕ್ಷ ರೂ. ಆದಾಯ ಹೊಂದಿದ್ದರು ಹಾಗೂ ಬೆಂಗಳೂರಿನ ಯಲಹಂಕದಲ್ಲಿ ಮನೆ ಮತ್ತು ಯುಕೆಯಲ್ಲಿ ಎರಡು ಆಸ್ತಿಗಳನ್ನು ಹೊಂದಿದ್ದಾರೆ. ಪತಿ ಈಗಾಗಲೇ ಸುಮಾರು 66 ಲಕ್ಷಕ್ಕೂ ಅಧಿಕ ತೆರಿಗೆ ಪಾವತಿಸಿದ್ದಾರೆ. ಅಲ್ಲದೆ, ಕಳೆದ 2022ರ ಮೇ ತಿಂಗಳಿನಿಂದ ಯಾವುದೇ ಪರಿಹಾರ ನೀಡಿಲ್ಲ,'' ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

ನಗರದ ಜವಾಹರಲಾಲ್ ನೆಹರೂ ಪ್ಲಾನೆಟೋರಿಯಂನಲ್ಲಿ ಶುಕ್ರವಾರ ಜಮಾಯಿಸಿದ ಮಕ್ಕಳು ಶೂನ್ಯ ನೆರಳು ದಿನ ವಿದ್ಯಮಾನ ವೀಕ್ಷಿಸಿದರು.

ಆರು ಮಂದಿ ವಿರುದ್ಧ ಪ್ರಕರಣ ದಾಖಲು

ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಂಜೂರು

ಮೂಡಿಗೆರೆ (ಚಿಕ್ಕಮಗಳೂರು): ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಜಮೀನು ಮಂಜೂರು ಮಾಡಲಾಗಿದೆ ಎಂಬ ಮೂಡಿಗೆರೆ ತಹಸೀಲ್ದಾರ್ ಎಸ್.ಅಶ್ವಿನಿ ಅವರ ದೂರಿನ ಮೇರೆಗೆ ಮೂಡಿಗೆರೆ ಠಾಣೆಯಲ್ಲಿ ನಿವೃತ್ತ ತಹಸೀಲ್ದಾರ್ ಸೇರಿ 6 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

2018-19ರಲ್ಲಿ ತಾಲೂಕಿನ ಗೋಣಿಬೀಡು ಹೋಬಳಿಯ ದೇವವೃಂದ ಗ್ರಾಮದ ಸರ್ವೆ ನಂ.313ರ ಎಚ್.4, ಎಚ್.5ರಲ್ಲಿನ 9 ಎಕರೆ ಸರಕಾರಿ ಜಮೀನನ್ನು ಯಾವುದೇ ಅರ್ಜಿ ಸಲ್ಲಿಕೆಯಾಗದಿದ್ದರೂ ಅನ್ಯ ಕಡತದ ಸಾಗುವಳಿ ಚೀಟಿ ಅಪ್‌ಲೋಡ್ ಮಾಡಿ ಅಕ್ರಮವಾಗಿ ಬೇರೆಯವರಿಗೆ ಖಾತೆ ಮಾಡಿಕೊಡಲಾಗಿತ್ತು. ಈ ಹಿನ್ನೆಲೆಯಲ್ಲಿ ಮೂಡಿಗೆರೆ ತಹಸೀಲ್ದಾರ್ ಎಸ್.ಅಶ್ವಿನಿ ಅವರು ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮೂಡಿಗೆರೆ ಠಾಣೆಗೆ ದೂರು ನೀಡಿದ್ದರು. ಪ್ರಕರಣದಲ್ಲಿ ಭಾಗಿಯಾಗಿದ್ದ ತಹಸೀಲ್ದಾರ್ ಸಿ.ಚಿನ್ನರಾಜು ಮೃತಪಟ್ಟಿದ್ದಾರೆ. ನಿವೃತ್ತ ತಹಸೀಲ್ದಾರ್‌ಗಳಾದ ಪದ್ಮನಾಭ ಶಾಸ್ತ್ರಿ, ಗಿಲ್ಬರ್ಟ್ ಪಾಯ್ಸ್, ನಿವೃತ್ತ ರಾಜಸ್ವ ನಿರೀಕ್ಷಕ ಎಸ್.ಎನ್.ಕೃಷ್ಣಕುಮಾರ್ ಹಾಗೂ ಖಾತೆದಾರರಾದ ನಿಕೇಶ್ ಪಿರೇರಾ, ಅನಿಷ್ ನಿಕೇಶ್ ಪಿರೇರಾ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಉದ್ಯಮಿ ಕೊಲೆ ಪ್ರಕರಣ: ಆರು ಆರೋಪಿಗಳ ಬಂಧನ

ವಿಜಯಪುರ: ನಗರ ಹೊರವಲಯದ ಅಲಿಯಾಬಾದ್ ಸಮೀಪದ ಗೋಲ್ಡನ್ ದಡ್ಡಿ ಬಳಿ ಇತ್ತೀಚೆಗೆ ನಡೆದಿದ್ದ ಗ್ರಾಪಂ ಮಾಜಿ ಸದಸ್ಯ, ರಿಯಲ್ ಎಸ್ಟೇಟ್ ಉದ್ಯಮಿ ರಾಜು ಬಾಪು ಖರೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಅಬುಶಾ ಸೋಪಾನ್ ಕೊಡ್ಲೇಕರ್, ಅಬಾಶ್ಯಾ ಬಾಳು ಮಾನೆ, ವಾಗೀಶ ಶಂಕರ ಪೋಳ, ಜಾಲಿಂದರ್ ಅಲಿಯಾಸ್ ಪೋಪಟ್ ಮಲ್ಲಾರಿ ಹಕ್ಕೆ, ಖಂಡೂಬಾ ಅಲಿಯಾಸ್ ಅಜಿತ್ ಗುಂಡಿಬಾ ತಾಂಬೆ, ಮುರಗು ಅಲಿಯಾಸ್ ಮರಗು ಉತ್ತಮ ಹಕ್ಕೆ ಬಂಧಿತರು.

ಏ.14ರಂದು ರಾಜು ಬಾಪು ಖರೆ ಕೊಲೆ ಮಾಡಲಾಗಿತ್ತು. ವಿಶೇಷ ತನಿಖಾ ತಂಡ ಬಬಲೇಶ್ವರ ತಾಲೂಕಿನ ಖಿಲಾರಹಟ್ಟಿ ಗ್ರಾಮ ಹಾಗೂ ಇಂಡಿ ತಾಲೂಕಿನ ಕ್ಯಾತನಕೇರಿ ಗ್ರಾಮದಲ್ಲಿ ಆರೋಪಿಗಳನ್ನು ಬಂಧಿಸಿದೆ. 2 ನಾಡ ಪಿಸ್ತೂಲ್, 7 ಮೊಬೈಲ್, ಕೃತ್ಯಕ್ಕೆ ಬಳಸಿದ 2 ಬೈಕ್, 1 ಟಿಪ್ಪರ್ ಮತ್ತು 1 ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಮೊದ್ಲು ಪಂಚಮಸಾಲಿ ಪೀಠದ ಲೆಕ್ಕ ಕೊಡಿ

ಎಲ್ಲರನ್ನು ಉಚ್ಚಾಟಿಸಿದ ಮೇಲೆ ಯಾರಿಗೆ ಲೆಕ್ಕ ಕೊಡುತ್ತಾರೆ | ಪರಮೇಶ್ವರ ಗೌಡ ಪ್ರಶ್ನೆ

■ **ವಿಕ ಸುದ್ದಿಲೋಕ** ಬೆಳ್ಳೂಡಿ (ದಾವಣಗೆರೆ)

''ಹೊಗಳಿಕೆ, ತೆಗಳಿಕೆಗಳು ನಮಗೆ ಲೆಕ್ಕಕ್ಕಿಲ್ಲ, ಪಂಚಮಸಾಲಿ ಪೀಠದ ಅಭಿವೃದ್ಧಿಗಾಗಿ ನಮ್ಮ ಸಮಾಜದವರು ನೀಡಿರುವ ರೊಕ್ಕದ ಲೆಕ್ಕವನ್ನು ನಾವು ಕೇಳುತ್ತಿದ್ದೇವೆ,'' ಎಂದು ಲೆಕ್ಕಕೊಡಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಜಿ. ಪರಮೇಶ್ವರ ಗೌಡ ತಿರುಗೇಟು ನೀಡಿದರು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಆವರಣದಲ್ಲಿ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶುಕ್ರವಾರ ನಡೆದ ಬಸವೋತ್ಸವ ಕಾರ್ಯಕ್ರಮದ ನಂತರ ಅವರು ಮಾತನಾಡಿದರು.

''ಪಂಚಮಸಾಲಿ ಪೀಠದಲ್ಲಿ 2008ರಿಂದ 2025ರವರೆಗಿನ ಲೆಕ್ಕ ಇದೆ. 27ರಂದು ನಡೆಯುವ ಸಭೆಯಲ್ಲಿ ಇದನ್ನು ನೀಡುತ್ತೇವೆಂದು ಪೀಠದ ಧರ್ಮದರ್ಶಿ ಬಿ.ಸಿ ಉಮಾಪತಿ ಮಾಧ್ಯಮದ ಮೂಲಕ ಬಹಿರಂಗ ಪಡಿಸಿರುವುದು ಸಂತಸದ ವಿಷಯ. ಆದರೆ, ಲೆಕ್ಕ ಕೇಳಿದವರನ್ನು, ಪೀಠದ ಆಡಳಿತಾಧಿಕಾರಿಗಳನ್ನು ಅಮಾನತು ಮಾಡಿದ್ದೇವೆ, ವಚನಾನಂದ ಸ್ವಾಮೀಜಿ ಅವರನ್ನು ಉಚ್ಚಾಟಿಸಿದ್ದೇವೆ, ಸಮಾಜದ ಕೆಲ ಮುಖಂಡರು ನಮಗೆ ಸಂಬಂಧವಿಲ್ಲವೆಂದು ಹೇಳುವ ಇವರು ಯಾರಿಗೆ ಲೆಕ್ಕವನ್ನು ಕೊಡುತ್ತಾರೆ,'' ಎಂದು ಪ್ರಶ್ನಿಸಿದರು.

''ರಾಜ್ಯದ ಸಮಸ್ತ ಪಂಚಮಸಾಲಿ ಸಮಾಜದವರು, ಇಲ್ಲಿಯವರೆಗೂ ನಡೆದ ಹರ ಜಾತ್ರೆಯ ಎಲ್ಲಾ ಅಧ್ಯಕ್ಷರು ಮತ್ತು ದೇಣಿಗೆ ನೀಡಿರುವ ಸಮಾಜದ ಮುಖಂಡರನ್ನು ಕರೆಯಿಸಿ ಲೆಕ್ಕವನ್ನು ನೀಡಬೇಕು,'' ಎಂದು ಪರಮೇಶ್ವರ ಗೌಡ ಆಗ್ರಹಿಸಿದರು. ಬಸವೋತ್ಸವ ಹಿನ್ನೆಲೆಯಲ್ಲಿ ಬಸವ ಪಲ್ಲಕ್ಕಿ ಉತ್ಸವ, ವಚನಗ್ರಂಥಗಳ ಮೆರವಣಿಗೆ, ಸಾಮೂಹಿಕ ವಚನ ಪಠಣ, ವಚನ ಸಂಗೀತ, ಜೋಡೆತ್ತುಗಳ ಮೆರವಣಿಗೆ ನಡೆಯಿತು.

ಹರಿಹರ ಪಂಚಮಸಾಲಿ ಪೀಠದ ಆವರಣದಲ್ಲಿ ಶುಕ್ರವಾರ ನಡೆದ ಬಸವೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಭಕ್ತರು.

ತಿಪ್ಪೇಶನ ಹುಂಡಿಯಲ್ಲಿ ₹74.97 ಲಕ್ಷ ಸಂಗ್ರಹ

ನಾಯಕನಹಟ್ಟಿ (ಚಿತ್ರದುರ್ಗ): ತಿಪ್ಪೇರುದ್ರಸ್ವಾಮಿ ದೇವಾಲಯದ ಹುಂಡಿಗಳಲ್ಲಿ ಒಟ್ಟು 74.97 ಲಕ್ಷ ರೂ. ಸಂಗ್ರಹವಾಗಿದೆ. ಒಳ ಮಠದ ಹುಂಡಿಗಳಲ್ಲಿ 55,60,580 ರೂ., ಹೊರಮಠದ ಹುಂಡಿಗಳಲ್ಲಿ 19,37,145 ರೂ. ಒಟ್ಟಾರೆ 74,97,725 ರೂ.ಗಳನ್ನು ಭಕ್ತರು ಅರ್ಪಿಸಿದ್ದಾರೆ. ಹುಂಡಿಯಲ್ಲಿ ನಾನಾ ರೀತಿಯ ಬೆಳ್ಳಿಯ ಆಭರಣಗಳನ್ನು ಭಕ್ತರು ಅರ್ಪಿಸಿದರು. ಪಾದ, ಲಿಂಗ, ನಿಶಾನೆ, ಛತ್ರಿ, ಕಣ್ಣು ಸೇರಿದಂತೆ ನಾನಾ ಆಭರಣಗಳನ್ನು ಭಕ್ತರು ನೀಡಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಅಥಣಿ

ಸಂ:ಕೃಉಮಾಸ(ಅ)/ಅಭಿಕೆ/59/2025-26 ದಿನಾಂಕ:21/04/2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಅಥಣಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸನ್ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ https:// kppp.karnataka.gov.in ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ-07-05-2026 ಸಾಯಂಕಾಲ-5-00 ಗಂಟೆಯವರೆಗೆ

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ	ಇಂಡೆಂಟ್ ಸಂಖ್ಯೆ	ಮೀಸಲಾತಿ	ಟೆಂಡರಿಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ ಹೊರತು ಪಡಿಸಿ (ರೂ ಗಳಲ್ಲಿ)
1	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/56/ 2026-27 ದಿನಾಂಕ-21-04-2026	APMC/2025-26/OW/ WORK _INDENT 863	ಸಾಮಾನ್ಯ ವರ್ಗ	1,11,64,663-00
2	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/57/ 2026-27 ದಿನಾಂಕ-21-04-2026	APMC/2025-26/OW/ WORK_INDENT 862	ಸಾಮಾನ್ಯ ವರ್ಗ	45,04,230-00

ಟೆಂಡರನ ಷರತ್ತು ಮತ್ತು ನಿಬಂಧನೆಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ https://kppp. karnataka. gov.in ವೆಬ್‌ಸೈಟ್‌ನಲ್ಲಿ ಹಾಗೂ ಪೋರ್ಟಲ್ ಸಹಾಯವಾಣಿ +91 8046010000, +91 8068948777 ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.

ಸಹಿ/-ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.

DIPR/BGM/RO-NO-146/KSMCA/2026-27

ನಗರಸಭಾ ಕಾರ್ಯಾಲಯ, ಮಾಲೂರು,ಕೋಲಾರ ಜಿಲ್ಲೆ.

ಇ-ಮೇಲ್: ka.malur.tmc@gmail.com, ವೆಬ್‌ಸೈಟ್: www.malurtown.gov.in,
ದೂರವಾಣಿ: 08151-232847/ ಸಹಾಯವಾಣಿ: 08151-232840

ಸಂಖ್ಯೆ: ನಸಮಾ/ಸಅ/ಇ-ಪ್ರೊಕ್/ಸಿಆರ್/01/2026-27 ದಿನಾಂಕ : 22.04.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾಲೂರು ನಗರಸಭಾ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ವಿವಿಧ ಕಾಮಗಾರಿಗಳಿಗೆ (1) DMA/2025-26/IND6022/Call-2, (2) DMA/2026-27/SE7702/, (3)DMA/2026-27/SE7701/, (4) DMA/2026-27/SE7698, (5) DMA/2025-26/OW/WORK_INDENT56413, (6) DMA/2026-27/SE7759 ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ-1999 ನಿಯಮಗಳು 2000) ಅನ್ವಯ ದ್ವಿ-ಲಕೋಟೆ ಪದ್ಧತಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು/ಸರಬರಾಜುದಾರರು ಟೆಂಡರ್‌ಗಳನ್ನು, ತಾಂತ್ರಿಕ ಬಿಡ್‌ನ್ನು ಹಾಗೂ ಆರ್ಥಿಕ ಬಿಡ್ಡನ್ನು ತೆರೆಯುವ ವಿವರಗಳನ್ನು KPPP Portal ನಲ್ಲಿ ಕಾಣಬಹುದು.

ಸಹಿ/-
(ಡಾ|| ಎಂ.ಆರ್.ರವಿ, ಐ.ಎ.ಎಸ್)
ಆಡಳಿತಾಧಿಕಾರಿಗಳು,ನಗರಸಭೆ,ಮಾಲೂರು
ಹಾಗೂ ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ, ಕೋಲಾರ

ಸಹಿ/-
(ಮಹದೇವ.ಎಂ.ಎಸ್)
ಪೌರಾಯುಕ್ತರು ಶ್ರೇಣಿ-2
ನಗರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:45/ಕೆಎಸ್‌ಎಂಸಿಎ/2026-27

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ನಂ.ಕಗೃಮಂ/ಕಾ/ಹಂಚಿಕೆ/ಭೂ.ನಿ.ಸತ್ತೂರು/2026-27 ದಿನಾಂಕ: 22-04-2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು ಸತ್ತೂರು ಗ್ರಾಮದ ಸತ್ತೂರು 4ನೇ ಹಂತ ವಸತಿ ಯೋಜನೆಗಾಗಿ ಸರ್ವೆ ನಂ. ಒಟ್ಟು 258 ಎಕರೆ 8 ಗುಂಟೆ ಜಮೀನನ್ನು ವಸತಿ ಯೋಜನೆಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಈ ಪೈಕಿ 180 ಎಕರೆ 20 ಗುಂಟೆ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಈ ಬಡಾವಣೆಗೆ ಜಮೀನು ನೀಡಿದ ಭೂ ಮಾಲೀಕರು ನಗದು ಪರಿಹಾರದ ಬದಲಿಗೆ ಶೇ: 50:50ರ (ಕರ್ನಾಟಕ ಗೃಹ ಮಂಡಳಿ : ಭೂ ಮಾಲೀಕರು) ಅನುಪಾತದ ಪಾಲುಗಾರಿಕೆಯಡಿ ನಿವೇಶನಗಳನ್ನು ಹಂಚಿಕೆಗೆ ಕೋರಿರುತ್ತಾರೆ. ಆದ್ದರಿಂದ ಭೂ ಮಾಲೀಕರ ಪಾಲಿನ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಈ ಕೆಳಕಂಡಂತೆ ದಿನಾಂಕ, ಸಮಯ ಮತ್ತು ಸ್ಥಳವನ್ನು ನಿಗಧಿಪಡಿಸಲಾಗಿದೆ. ಸದರಿ ಯೋಜನೆಗೆ ಭೂ ಸ್ವಾಧೀನವಾಗಿರುವ ಜಮೀನುಗಳ ಭೂ ಮಾಲೀಕರ ಪೈಕಿ ಕೆಲವು ಭೂಮಾಲೀಕರು ಪಾಲುಗಾರಿಕೆ ಯೋಜನೆ ಅಡಿ ಜಮೀನು ಬಿಟ್ಟುಕೊಡಲು ಒಪ್ಪಿ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಅಂತಹ ಭೂ ಮಾಲೀಕರು ಸಹ ಒಪ್ಪಿಗೆ ಪ್ರಮಾಣ ಪತ್ರ ಮತ್ತು ಜಮೀನಿನ ದಾಖಲೆಗಳನ್ನು ನೀಡಿ ಅವರ ಪಾಲಿನ ನಿವೇಶಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಕ್ರ. ಸಂ.	ದಿನಾಂಕ	ಸಮಯ	ಕರ್ನಾಟಕ ಗೃಹ ಮಂಡಳಿ ವತಿಯಿಂದ ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು, ಸತ್ತೂರು ಗ್ರಾಮದ ಸತ್ತೂರು 4ನೇ ಹಂತ ವಸತಿ ಯೋಜನೆಗಾಗಿ ಸರ್ವೆ ನಂಬರ್‌ಗಳ ವಿವರ
1.	21-05-2026	ಬೆಳಿಗ್ಗೆ 11.00 ಗಂಟೆಯಿಂದ	38/3, 38/2ಪಿ3, 37/2, 38/1 35/1,
		ಸಂಜೆ 05.00 ಗಂಟೆಯವರೆಗೆ	35/2, 35/3, 36/1, 37/1, 60/2, 61/1, 61/2, 61/3, 62/6,
2.	22-05-2026	ಬೆಳಿಗ್ಗೆ 11.00 ಗಂಟೆಯಿಂದ	60/1, 59/1, 59/2, 59/3, 62/1, 62/2, 62/3, 62/4, 62/5,
		ಸಂಜೆ 05.00 ಗಂಟೆಯವರೆಗೆ	47, 48, 60/1, 61/5, 61/6

ಮೇಲ್ಕಂಡ ದಿನಾಂಕದಂದು ಹಾಜರಾಗದ ಭೂ ಮಾಲೀಕರಿಗೆ ನಿಯಮಾನುಸಾರ ಬರುವ ನಿವೇಶನಗಳನ್ನು ದಿನಾಂಕ: 26-05-2026 ರಂದು ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗುವುದು.

ಸ್ಥಳ : ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಹುಬ್ಬಳ್ಳಿಯಲ್ಲಿ ಸಂಬಂಧಿಸಿದ ಭೂಮಾಲೀಕರು ಜಮೀನುಗಳ ಮೂಲ ದಾಖಲಾತಿಗಳು ಮತ್ತು ಆಧಾರ್ ಕಾರ್ಡ್‌ಗಳೊಂದಿಗೆ ಮೇಲ್ಕಾಣಿಸಿದ ಸ್ಥಳ ಹಾಗೂ ದಿನಾಂಕಗಳಂದು ತಪ್ಪದೇ ಹಾಜರಾಗಿ ನಿಯಮಾನುಸಾರ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಭೂಮಾಲೀಕರಿಗೆ ನಿಯಮಾನುಸಾರ ನೀಡಬೇಕಾದ ನಿವೇಶನಗಳನ್ನು ಕಾಯ್ದಿರಿಸಿ ಉಳಿಕ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ನಿವೇಶನಗಳನ್ನು ಆಯ್ಕೆಮಾಡಿಕೊಳ್ಳುವಾಗ ಭೂಮಾಲೀಕರು ಅನುಸರಿಸಬೇಕಾದ ಅಂಶಗಳ ಬಗ್ಗೆ ಮಂಡಳಿಗೆ **ವೆಬ್‌ಸೈಟ್: https://www.khb.karnataka.gov.in** ಬೇಟಿಯಾಗಿ ಮಾಹಿತಿ ಪಡೆಯಬಹುದು ಅಥವಾ **ಸ.ಕಾ.ಅ., ಕ.ಗೃ.ಮಂ., ಜಿ.ಯೋ.ಕ., ಹುಬ್ಬಳ್ಳಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು** ಇವರನ್ನು ಖುದ್ದಾಗಿ ಅಥವಾ **ಮೊಬೈಲ್ ನಂ : 9448193438** ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO346/AAPL/2026-27

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ

ಕುಣಿಗಲ್ ತಾಲೂಕು, ತುಮಕೂರು ಜಿಲ್ಲೆ - 572142. ದೂ: 08132-228223. e-mail:yedeyur.ssss@gmail.com
website: www.yedeyursiddalingeshwara.com

ಸಂಖ್ಯೆ: ಮುಪ್ರ/ಸಿಆರ್/02/ದಿನಸಿ/ಖರೀದಿ/2026-27 ದಿನಾಂಕ: 24.4.2026

ಪ್ರಕಟಣೆ

ವಿಷಯ: ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದ ವಿವಿಧ ಪ್ರಕಟಣೆಗಳನ್ನು ಪ್ರಕಟಪಡಿಸುವ ಬಗ್ಗೆ

ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದ ಈ ಕೆಳಕಂಡ ಕ್ರ.ಸಂ.(1) ರಿಂದ (4)ರವರೆಗೆ ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ.ಪಿ) ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ.

ಕ್ರ ಸಂ.	ವಿವರ	ಅವಧಿ	ವಿಧ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ದೇವಾಲಯದ ವತಿಯಿಂದ ನೀಡುವ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಲಾಡು ಮತ್ತು ಕಾಯಿ ಮಿಠಾಯಿ ಮಹಾಪ್ರಸಾದವನ್ನು ತಯಾರು ಮಾಡಿ ಮಾರಾಟ ಮಾಡುವ ಹಾಗೂ ತೀರ್ಥದ ಬಾಟಲಿಗಳನ್ನು ಮಾರಾಟ ಮಾಡುವ ಹಕ್ಕು	ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ	ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ. ಪೋರ್ಟಲ್) ಮೂಲಕ	14.05.2026
2.	ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ದೇವಾಲಯದ ವತಿಯಿಂದ ಲಾಡು ಮತ್ತು ಕಾಯಿ ಮಿಠಾಯಿ ಮಹಾಪ್ರಸಾದವನ್ನು ತಯಾರಿಸಲು ಅವಶ್ಯಕವಾಗಿ ಬೇಕಾಗಿರುವ ದಿನಸಿ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ	ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ	ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ. ಪೋರ್ಟಲ್) ಮೂಲಕ	14.05.2026
3.	ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರಕ್ಕೆ ಬರುವ ವಾಹನಗಳ ನಿಲುಗಡೆ ಶುಲ್ಕ ವಸೂಲಿ ಮಾಡಿ ನಿರ್ವಹಣೆ ಮಾಡುವ ಹಕ್ಕು	ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ	ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ. ಪೋರ್ಟಲ್) ಮೂಲಕ	14.05.2026
4.	ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಮಹಾಪ್ರಸಾದವಾದ ಕಾಯಿ ಮಿಠಾಯಿ ಪ್ರಸಾದವನ್ನು ತಯಾರಿಸಲು ಹಾಗೂ ಪ್ರಜಾ ಕೈಂಕರ್ಯಗಳಿಗೆ ಬೇಕಾದ ತೆಂಗಿನಕಾಯಿ 700 ರಿಂದ 750 ಗ್ರಾಂ ತೂಕ ಇರುವಂತೆ ತೆಂಗಿನಕಾಯಿಗಳನ್ನು ಸರಬರಾಜು ಮಾಡುವ ಬಗ್ಗೆ	ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ	ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ. ಪೋರ್ಟಲ್) ಮೂಲಕ	14.05.2026

ಮೇಲ್ಕಂಡ ಕ್ರ.ಸಂ.(1) ರಿಂದ (4)ರವರೆಗೆ ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ.ಪಿ) ಮೂಲಕ ಟೆಂಡರ್ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ 08132-228223 ಅನ್ನು/ಮುದ್ದಾಂ ಕಚೇರಿ ವೇಳೆಯಲ್ಲಿ ಕಚೇರಿಗೆ ಭೇಟಿ ಕೊಟ್ಟು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು, ಕುಣಿಗಲ್ ತಾಲೂಕು.

ನಗರಸಭಾ ಕಾರ್ಯಾಲಯ-ತಿಪಟೂರು

ತಿಪಟೂರು ತಾಲ್ಲೂಕು. ತುಮಕೂರು ಜಿಲ್ಲೆ. 08134-250785
itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/22/2026-27 ದಿನಾಂಕ: 21-04-2026

ಟೆಂಡರ್ / ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999 - 2000ರ ನಿಯಮಗಳಂತೆ ನಗರಸಭೆಯ ವಿವಿಧ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು/ಸರಬರಾಜುದಾರರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ **(https://kppp.karnataka.gov.in)** ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ಸಮಯದಲ್ಲಿ ಪಡೆಯಬಹುದು). ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದಲ್ಲಿ KPPP Portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಕ್ರ ಸಂ	ಇಂಡೆಂಟ್ ನಂಬರ್	ಅಂದಾಜು ಮೊತ್ತ ಲಕ್ಷ ರೂ. ಗಳಲ್ಲಿ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	DMA/2025-26/IND6012/CALL-2	12.00	30,000/-	30.04.2026	02.05.2026
2	DMA/2025-26/OW/WORK_INDENT55703/CALL-2	10.00	25,000/-	30.04.2026	02.05.2026
3	DMA/2025-26/OW/WORK_INDENT55769/CALL-2	10.00	25,000/-	30.04.2026	02.05.2026
4	DMA/2026-27/OW/WORK_INDENT57459 (SC)	50.00	62,500/-	04.05.2026	05.05.2026
5	DMA/2026-27/OW/WORK_INDENT57475 (ST)	17.20	21,500/-	04.05.2026	05.05.2026
6	DMA/2026-27/0W/WORK_INDENT57496 (CAT-IIA)	45.50	56,875/-	04.05.2026	05.05.2026
7	DMA/2026-27/OW/ WORK_INDENT57456	30.00	60,000/-	04.05.2026	05.05.2026
8	DMA/2026-27/OW/WORK_INDENT57466	25.00	50,000/-	04.05.2026	05.05.2026
9	DMA/2026-27/OW/WORK_INDENT57480	20.00	50,000/-	04.05.2026	05.05.2026
10	DMA/2026-27/OW/WORK_INDENT57482	42.00	84,000/-	04.05.2026	05.05.2026
11	DMA/2026-27/OW/WORK_INDENT57493	50.00	1,00,000/-	04.05.2026	05.05.2026

ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ

ಕ್ರ ಸಂ	ವಿವರ
1	ತಿಪಟೂರು ನಗರಸಭಾ ವ್ಯಾಪ್ತಿಯ ವಾರ್ಡ್ ನಂ 6 ರ ಲಾಯರ್ ಜಗದೀಶ್ ಮನೆ ಹತ್ತಿರ ಡೆಕ್ ಸ್ಲಾಬ್ ಮತ್ತು ಸಿ.ಸಿ. ಚರಂಡಿ ರಿಪೇರಿ ಕಾಮಗಾರಿಗೆ ಕೊಟೇಷನ್ ಸಲ್ಲಿಸುವುದು
2	ನಗರಸಭಾ ಕಛೇರಿ ಮುಂಭಾಗದ ಕಾಂಪೌಂಡ್ ಗೋಡೆಗಳಿಗೆ ಹಾಗೂ ಗೇಟ್‌ಗಳಿಗೆ ಬಣ್ಣ ಬಳಿಯಲು ಕೊಟೇಷನ್ ಸಲ್ಲಿಸುವುದು
3	ತಿಪಟೂರು ನಗರಸಭಾ ವ್ಯಾಪ್ತಿಯ ವಾರ್ಡ್ ನಂ 10 ರ ದೊಡ್ಡಯ್ಯನಪಾಳ್ಯ ಹಳೇಪಾಳ್ಯ ಮುಖ್ಯರಸ್ತೆಯಲ್ಲಿ ಇರುವ ಪೌರಾಕಾರ್ಮಿಕರ ವಿಶ್ರಾಂತಿ ಗೃಹ ದುರಸ್ಥಿ ಕಾಮಗಾರಿ
4	ತಿಪಟೂರು ನಗರಸಭಾ ವ್ಯಾಪ್ತಿಯ ಅಂಬೇಡ್ಕರ್ ವೃತ್ತದ ಹತ್ತಿರ Steel Railings ಹಾಕುವ ಕಾಮಗಾರಿಗೆ ಕೊಟೇಷನ್ ಸಲ್ಲಿಸುವುದು
5	ತಿಪಟೂರು ನಗರಸಭಾ ವ್ಯಾಪ್ತಿಯ ಎಸ್.ವಿ.ಪಿ ಕಾಂಪೌಂಡ್ Kailsh Auto Mobile ಮುಂಭಾಗ ಚರಂಡಿ ದುರಸ್ಥಿ ಕಾಮಗಾರಿ
6	ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ಅಮಾನಿಕೆರೆಯ ನಡುಗಡ್ಡೆಗಳಿಗೆ (Island) ತೂಗುಸೇತುವೆ ನಿರ್ಮಾಣ ಕಾಮಗಾರಿಗೆ Soil Test (ಮಣ್ಣು ಪರೀಕ್ಷೆ) ಎಸ್.ಟಿ.ಪಿ ಇತ್ಯಾದಿಗಳನ್ನು ಮಾಡಿ ವರದಿ ನೀಡಲು ಕೊಟೇಷನ್ ಸಲ್ಲಿಸುವುದು
7	ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ಹಳೇಪಾಳ್ಯ ರಸ್ತೆಯಲ್ಲಿರುವ ಪೂರ್ವಭಾಗದಲ್ಲಿರುವ ನಡುಗೆಡ್ಡೆಗೆ (Island-1) ತೂಗುಸೇತುವೆ ನಿರ್ಮಾಣಗೆ ಡಿ.ಪಿ.ಆರ್ ಗಳನ್ನು ತಯಾರಿಸಲ್ಲಿಸಲು ಕೊಟೇಷನ್ ಸಲ್ಲಿಸುವುದು
8	ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ಅಮಾನಿಕೆರೆಯಲ್ಲಿ ದ್ವೀಪದಿಂದ ಬಂಡ್‌ವರೆಗೆ ತೂಗು ಸೇತುವೆ ಮತ್ತು ದ್ವೀಪದ ಅಭಿವೃದ್ಧಿ ಕಾಮಗಾರಿಗೆ (Island-2) ಡಿ.ಪಿ.ಆರ್ ಗಳನ್ನು ತಯಾರಿಸಲ್ಲಿಸಲು ಕೊಟೇಷನ್ ಸಲ್ಲಿಸುವುದು
9	ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ CMIDP ಯೋಜನೆ ಅಡಿಯಲ್ಲಿ ತಿಪಟೂರು ನಗರದ ಕೋಡಿ ಸರ್ಕಲ್ ಬಳಿ ಸೇತುವೆ ನಿರ್ಮಾಣ, ರಾಜಕಾಲುವೆ ಹಾಗೂ ಕೆರೆ ಭಾಗಕ್ಕೆ ತಡೆಗೋಡೆ ನಿರ್ಮಾಣ ಮತ್ತು ಕೋಡಿ ಸರ್ಕಲ್ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಿತ್ತಿರುವ ಬ್ರಿಡ್ಜ್ ನಿರ್ಮಾಣಕ್ಕೆ ಯೋಜನಾ ನಿರ್ವಹಣಾ ಸಮಾಲೋಚಕರನ್ನು ಸೇವೆಯ ಒದಗಿಸಲು ಕೊಟೇಷನ್ ಸಲ್ಲಿಸುವುದು
10	ತಿಪಟೂರು ನಗರಸಭಾ ವ್ಯಾಪ್ತಿಯ ಎಸ್.ಟಿ.ಪಿ ಘಟಕ ಮತ್ತು ನೀರು ಸರಬರಾಜು ವಿಭಾಗದ ಸಾಮಾಗ್ರಿಗಳ ದಾಸ್ತಾನು ಕಟ್ಟಡಕ್ಕೆ CC Camera (Audio, Video and Human Detaction, 4MM Lence, Night Colour Vision IP 67) ಅಳವಡಿಸಿ ಅಗತ್ಯ ವಿರುವ NVR ಮತ್ತು Display ಗಳನ್ನು ಅಳವಡಿಸಲು ಸ್ಥಳ ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು
11	ತಿಪಟೂರು ನಗರಸಭೆ ಕಛೇರಿಯಲ್ಲಿ ದಿನನಿತ್ಯ ಉಪಯೋಗಕ್ಕೆ ಬಳಸಲು Computer (Core i-5-14500, 8GB RAM, SSD 512 GB, WIFI, 21.5" Monitor, Win 11), Printer (A4 Black and White Laser Printer, Perfect For Business, Print, Copy, Scan, Duplex, Print speed up to 30 ppm (black, A4), USB, Automatic Duplex Printing/Two-sided printing ಗಳನ್ನು ಒದಗಿಸಲು ಕೊಟೇಷನ್ ಸಲ್ಲಿಸುವುದು
12	ತಿಪಟೂರು ನಗರಸಭಾ ವ್ಯಾಪ್ತಿಯ Desilting ವಾಹನದ (KA 44 A 1219) ದ ಹಿಂಭಾಗದ ತೊಟ್ಟಿ, Steel Wire Rope ಅನ್ನು ದುರಸ್ಥಿ ಪಡಿಸಲು ಕೊಟೇಷನ್ ಸಲ್ಲಿಸುವುದು
13	ತಿಪಟೂರು ನಗರಸಭಾ ವ್ಯಾಪ್ತಿಯ ವಾರ್ಡ್ ನಂ 16 ರ ಶಾರದನಗರ ಬ್ರೈಫ್ ಆಫೀಸ್ ಹಿಂಭಾಗ ಕೊಳವೆ ಬಾವಿಗಳ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ಅಂದಾಜು ಪಟ್ಟಿಯಂತೆ ಕಾರ್ಯ ನಿರ್ವಹಿಸಲು ಕೊಟೇಷನ್ ಸಲ್ಲಿಸುವುದು
14	ನಗರಸಭೆಯ ಅಣ್ಣಾಪುರದಲ್ಲಿರುವ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಪರಿವೇಷ್ಠಿತ ಗಾಳಿಯ ಗುಣಮಟ್ಟವನ್ನು ವಾರ್ಷಿಕವಾಗಿ ಎರಡು ಬಾರಿ ಮತ್ತು ಹೊಂಡ ತುಂಬುವ ಸ್ಥಳದ ಪರಧಿಯ 50 ಮೀಟರ್ ಒಳಗೆ ಅಂತರ್ಜಲ ಗುಣಮಟ್ಟವನ್ನು ವಾರ್ಷಿಕವಾಗಿ ಮೂರು ಬಾರಿ ಘನತ್ಯಾಜ್ಯ ವ್ಯವಸ್ಥಾಪನೆ ನಿಯಮ 2016 ಗಳ ನಿಗಾವಣೆ ಮಾನದಂಡಗಳಂತೆ ಪರೀಕ್ಷಿಸಿ ವರದಿ ನೀಡುವುದಕ್ಕೆ NABL ಸಂಸ್ಥೆಯಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಕೋಟೇಷನ್ ಸಲ್ಲಿಸುವುದು.
15	ತಿಪಟೂರು ನಗರಸಭೆಯ ವಾಹನಗಳ ಜಿ.ಪಿ.ಎಸ್ Tracking System ವಾರ್ಷಿಕ ನಿರ್ವಹಣೆ ಮಾಡಲು ಕೋಟೇಷನ್ ಸಲ್ಲಿಸುವುದು.
16	ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ತ್ಯಾಜ್ಯ ಬಿಸಾಡುವವರನ್ನು ಗುರುತಿಸುವ ಸಲುವಾಗಿ ಸಿ.ಸಿ.ಟಿ.ವಿ ಗಳನ್ನು ಅಳವಡಿಸಲು ಕೋಟೇಷನ್ ಸಲ್ಲಿಸುವುದು.
17	ತಿಪಟೂರು ನಗರಸಭೆ ಕಛೇರಿ ಮುಂಭಾಗ ಹುಲ್ಲುಹಾಸು ಅಳವಡಿಸಿ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸಿಕೊಡಲು ಕೋಟೇಷನ್ ಸಲ್ಲಿಸುವುದು.
18	ತಿಪಟೂರು ನಗರವನ್ನು ಸ್ವಚ್ಛ ಸುಂದರ ನಗರವನ್ನಾಗಿಸುವ ನಿಟ್ಟಿನಲ್ಲಿ ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಛೇರಿಗಳ ಕಾಂಪೌಂಡ್‌ಗಳಿಗೆ ಗೋಡೆ ಬರಹ ಹಾಗೂ ಚಿತ್ರ ಬಿಡಿಸಲು ಕೋಟೇಷನ್ ಸಲ್ಲಿಸುವುದು.
19	ತಿಪಟೂರು ನಗರಸಭೆಯ SWM ಘಟಕದಿಂದ ಬಿಡದಿಯಲ್ಲಿರುವ ಕರ್ನಾಟಕ ಪವರ್ ಕಾರ್ಪೋರೇಷನ್ WASTE TO ENERGY PLANT ಗೆ RDF ಸಾಗಿಸಲು ಕೋಟೇಷನ್ ಸಲ್ಲಿಸುವುದು.
20	ಕೆ.ಎ-44-ಎಂ-4846 ಬೆಮೆಲ್ ಫ್ರಂಟ್ ಎಂಡ್ ಲೋಡರ್ ಬ್ಯಾಕ್ ಹೋ ವಾಹನದ ಹಿಂಭಾಗದ ಬೂಮ್ ಬಕೆಟ್‌ನ ಪಿನ್‌ಗಳು ಮತ್ತು ಬುಷ್‌ಗಳನ್ನು ಅಳವಡಿಸಿ ದುರಸ್ಥಿ ಮಾಡಿಕೊಡಲು ಕೋಟೇಷನ್ ಸಲ್ಲಿಸುವುದು.
21	ತಿಪಟೂರು ನಗರಸಭೆಯ KA 44 - 6798 ಬೊಲೆರೋ ವಾಹನದ ಹಿಂಭಾಗದ ತೊಟ್ಟಿ ಮತ್ತು ಹೈಡ್ರಾಲಿಕ್ ಜಾಕ್ ಸಿಸ್ಟಂ ದುರಸ್ಥಿ ಮಾಡಲು ಕೊಟೇಷನ್ ಸಲ್ಲಿಸುವುದು.
22	ತಿಪಟೂರು ನಗರಸಭೆಯ KA 44 - 6799 ಬೊಲೆರೋ ವಾಹನದ ಹಿಂಭಾಗದ ತೊಟ್ಟಿ ಮತ್ತು ಹೈಡ್ರಾಲಿಕ್ ಜಾಕ್ ಸಿಸ್ಟಂ ದುರಸ್ಥಿ ಮಾಡಲು ಕೊಟೇಷನ್ ಸಲ್ಲಿಸುವುದು.
23	ತಿಪಟೂರು ನಗರಸಭೆ ವ್ಯಾಪ್ತಿಯ ವಾರ್ಡ್‌ಗಳ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿರುವ ನಗರ ಸುಂದರೀಕರಣಗೊಳಿಸಿರುವ, ಬ್ಲಾಕ್‌ಸ್ಪಾಟ್‌ಗಳನ್ನು ಕ್ಲಿಯರ್ ಮಾಡಿರುವ, ಪಾರ್ಕ್ ನಿರ್ವಹಣೆ ಹಾಗೂ ಇತರೆ ಫೋಟೋಗಳನ್ನು ತೆಗೆದು ಸಾಫ್ಟ್ ಕಾಪಿ ರೆಡಿ ಮಾಡಿ ಕೊಡಲು ಕೊಟೇಶನ್ ಆಹ್ವಾನಿಸಲಾಗಿದೆ.
24	ತಿಪಟೂರು ನಗರದ ಕಲ್ಲೇಶ್ವರ ದೇವಸ್ಥಾನ ಹತ್ತಿರ ಖಾಲಿ ಜಾಗವನ್ನು ಸೌಂದರೀಕರಣ ಮಾಡುವ ಕಾಮಗಾರಿಗೆ ಫೌಂಟೈನ್ ನಿರ್ಮಿಸಲು ಅಗತ್ಯವಿರುವ ಸಾಮಗ್ರಿಗಳ ದರಗಳ ಕೊಟೇಷನ್ ಸಲ್ಲಿಸುವುದು

ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

ಸಹಿ/- ವಿಶ್ವೇಶ್ವರ್ ಬದರಗಡೆ
ಪೌರಾಯುಕ್ತರು, ನಗರಸಭೆ, ತಿಪಟೂರು

DIPR/TUM/RO-18/26-27/Oysters

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.4/ಪಂ.ರಾ.ಇಂ/ವಿ.ಹಾ/ಪಿ.ಬಿ-1&2/ಟೆಂಡರ/2026-27/429 ದಿನಾಂಕ : 23-04-2026

ಇ-ಟೆಂಡರ್ ಪ್ರಕಟಣೆ

ದಿನಾಂಕ : 23-04-2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 22907/CALL-5, 26300Cat-I, 25984, 26056, 26072ST, 26075SC, (1ನೇ & 5ನೇ ಕರೆ) ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹನೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **30-04-2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬಸೈಟ್ http:// www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ,
ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/66/2026-27

ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯತ್ ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಾಗರ

ನಂ.ಕಾಇಂ/ಪಂರಾಇಂ/ವಿಸಾ/ಶಿ.ಹೊ/KW-1&2&3/ಎಇ/ಜೆಇ/2026-27/234
ದಿ: 23.04.2026

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಸಾಗರ ಇವರು KW-1&2&3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ "ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025-26ನೇ ಸಾಲಿನ ಎಸ್.ಡಿ.ಎಂ.ಎಫ್ ಮತ್ತು 2024-25 ನೇ ಸಾಲಿನ ಆದರ್ಶ ಗ್ರಾಮ ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ ಒಗ್ಗೂಡಿಸುವಿಕೆ ಯೋಜನೆಅಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 27.04.2026 ರಿಂದ 04.05.2026 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 04.05.2026 ಸಮಯ 17:00:00 3) ಬಿಡ್ ತೆರೆಯುವ ದಿನಾಂಕ: 05.05.2026 ಸಮಯ 17:01:00.

1. GENERAL Category Work: 25533, 25440, 25502, 23062/ CALL 3 2. SC Category Works: 26320,23059/CALL-3 3. ST Category Works: 26319

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183-226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080-25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26-27/122/04/134

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಮುದ್ದೇಬಿಹಾಳ

ದೂರವಾಣಿ ಸಂ: 08356-220876,
ವೆಬ್‌ಸೈಟ್: www.muddebihaltown.mrc.gov.in
ಇ-ಮೇಲ್: itstaff_ulb_muddebihal@yahoo.co.in

ಕ್ರ.ಸಂ:ಪುಸಮು/ಎಸ್.ಎಫ್.ಸಿ/ವಿಶೇಷ/ಟೆಂಡರ್/2025-26
ದಿನಾಂಕ:22.04.2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ಅರ್ಹ ಏಜೆನ್ಸಿದಾರರಿಗೆ ತಿಳಿಯಪಡಿಸುವುದೇನೆಂದರೇ, ಎಸ್. ಎಫ್. ಸಿ ವಿಶೇಷ ಅನುದಾನ 2024-25 ಯೋಜನೆಯ ಅನುದಾನದಡಿ ಪಟ್ಟಣದಲ್ಲಿ ಅತಿ ಅವಶ್ಯವಿರುವ ಈ ಕೆಳಗೆ ಕಾಣಿಸಿದಂತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲು ಇ-ಪ್ರೋಕ್ಯೂರಮೆಂಟ್ ಮೂಲಕ ಐಟಂವಾರು ದರವಾರುಗಳನ್ನು ಅರ್ಹ ಗುತ್ತಿಗೆದಾರರಿಂದ ಕೆ.ಜಿ ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾಮಗಾರಿ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಇಂಡೆಂಟ್ ನಂ: **DMA/2026-27/IND6188**

01. ಭರ್ತಿ ಮಾಡಿದ ಕೆ.ಪಿ.ಪಿ.ಪಿ ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 07.05.2026 (ಸಂಜೆ 17.00 ರವರೆಗ)
02. ಕೆ.ಪಿ.ಪಿ.ಪಿ ಮುಖಾಂತರ ಟೆಂಡರ್ ತೆಗೆಯುವ ದಿನಾಂಕ: 08.05.2026 (ಸಂಜೆ 17-15 ಘಂಟೆಗೆ)
03. ಕೆಲಸದ ಅವಧಿ: ಕೆ.ಪಿ.ಪಿ.ಪಿ ನಲ್ಲಿ ನಮೂದಿಸಿದಂತೆ.
04. ಫಾರಂ ಬೆಲೆ ಕೆ.ಪಿ.ಪಿ.ಪಿ- ಪೋರ್ಟಲ್ ಮುಖಾಂತರ ಪಡೆಯಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗಾಗಿ ಪುರಸಭೆ ಕಾರ್ಯಾಲಯ ಮುದ್ದೇಬಿಹಾಳ ಹಾಗೂ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

http://kppp.karnataka.gov.in & www.muddebihaltown.mrc.gov.in and any changes in tender Addendum or corrigendum can be published in kpp portal only will not publish in newspapers.

ಸಹಿ/-
ಮುಖ್ಯಾಧಿಕಾರಿಗಳು
ಪುರಸಭೆ, ಮುದ್ದೇಬಿಹಾಳ

ಸಹಿ/-
ಆಡಳಿತಾಧಿಕಾರಿಗಳು
ಪುರಸಭೆ, ಮುದ್ದೇಬಿಹಾಳ

ವಾಸಾಸಂಇ/ವಿಜಯಪುರ/55/ಕೆಎಸ್‌ಎಂಸಿಎ/2026-27

ಕರಾವಳಿ ಕೃತಕ ನೆರೆಗೆ ಯಾರು ಹೊಣೆ?

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನದಿ–ರಾಜಕಾಲುವೆ ಒತ್ತುವರಿ

> ಜಿಲ್ಲೆಯಲ್ಲಿ ನದಿ ಹಾಗೂ ರಾಜಕಾಲುವೆಗಳನ್ನು ಒತ್ತುವರಿ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಒತ್ತುವರಿ ಪತ್ತೆಗೆ 1 ಕೋಟಿ ರೂ. ಅನುದಾನವನ್ನು ಮೀಸಲಿರಿಸಿ ಸರ್ವೆಗೆ ಆದೇಶ ಮಾಡಲಾಗಿದೆ. ಒತ್ತುವರಿ ತೆರವು ಮಾಡಿದರಷ್ಟೆ ಮಂಗಳೂರಲ್ಲಿ ಸೃಷ್ಟಿಯಾಗುವ ಕೃತಕ ನೆರೆಯನ್ನು ನಿಯಂತ್ರಿಸಲು ಸಾಧ್ಯ.
> **-ದಿನೇಶ್ ಗುಂಡೂರಾವ್** ಉಸ್ತುವಾರಿ ಸಚಿವರು, ದ.ಕ.

ವಿಜಯ್ ಕೋಟ್ಯಾನ್ ಮಂಗಳೂರು
vijaya.poojary@timesofindia.com

ಎರಡೂವರೆ ದಶಕಗಳ ಹಿಂದೆ ಎಷ್ಟೇ ಮಳೆ ಬಂದರೂ ಜಪ್ಪೆನ್ನದ ಕರಾವಳಿ ತೀರದ ಮಂಗಳೂರು ಮತ್ತು ಉಡುಪಿ ನಗರಗಳು ಈಗ ಒಂದೆರಡು ಗಂಟೆಯ ಮಳೆಗೆ ನೆರೆಯ ಭೀತಿ ಎದುರಿಸುತ್ತಿವೆ. ಕಾರಣ ನದಿ ಮತ್ತು ರಾಜಕಾಲುವೆಗಳ ವ್ಯಾಪಕ ಒತ್ತುವರಿ. ದಕ್ಷಿಣ ಕನ್ನಡದ ಜೀವನದಿಗಳಾದ ನೇತ್ರಾವತಿ ಮತ್ತು ಫಲ್ಗುಣಿ ಪಾತ್ರಗಳು ಸಂಕುಚಿತಗೊಳ್ಳುತ್ತಿದ್ದು, ಮಂಗಳೂರಿನ ರಾಜಕಾಲುವೆಗಳು ವಾಣಿಜ್ಯ ಕಟ್ಟಡಗಳ ಪಾಲಾಗಿವೆ.

ಬಂಟ್ವಾಳದಿಂದ ಪಶ್ಚಿಮಕ್ಕೆ ಸುಮಾರು 20 ಕಿ.ಮೀ ವ್ಯಾಪ್ತಿಯಲ್ಲಿ ನೇತ್ರಾವತಿ ನದಿ ಪಾತ್ರ ದೊಡ್ಡ ಮಟ್ಟದಲ್ಲಿ ಒತ್ತುವರಿಯಾಗಿದೆ. ಇನ್ನೊಂದು ಪ್ರಮುಖ ನದಿ ಪಲ್ಗುಣಿಯು (ಗುರುಪುರ) ಕೆಂಜಾರು, ಮರವೂರು, ಕುಳೂರು ಮತ್ತು ಅಳಿವೆಬಾಗಿಲು ಪ್ರದೇಶದಲ್ಲಿ ಕಿರಿದಾಗಿದೆ. ಅಂದರೆ ನದಿ ಗಾತ್ರ ಶೇ. 3–5ರಷ್ಟು ಕುಸಿದಿದೆ!

ರಾತೋರಾತ್ರಿ ನದಿ ಕಿನಾರೆಗಳಿಗೆ ಕಟ್ಟಡ ತ್ಯಾಜ್ಯ ಮತ್ತು ಮಣ್ಣನ್ನು ಸುರಿಯಲಾಗುತ್ತಿದ್ದು, ಇದು ನದಿಯ ಒಡಲು ಸೇರಿ ಹೂಳು ತುಂಬಲು ಕಾರಣವಾಗುತ್ತಿದೆ. ಒಂದೆಡೆ ನದಿಗಳು, ರಾಜಕಾಲುವೆಗಳು ಒತ್ತುವರಿಯಾದ ಕಾರಣ ನೀರು ಸರಾಗವಾಗಿ ಹರಿದು ಹೋಗಲು ಜಾಗವಿಲ್ಲ, ಇನ್ನೊಂದೆಡೆ ಅಳಿವೆ ಬಾಗಿಲು (ನದಿ– ಸಮುದ್ರವನ್ನು ಸೇರುವ ಜಾಗ ಪರಿಸರದಲ್ಲಿ ಹೂಳೆತ್ತದ ಕಾರಣ ನದಿಗಳಲ್ಲಿ ವೇಗವಾಗಿ ಹರಿದು ಬಂದ ನೀರು ಸಮುದ್ರ ಸೇರಲು ಅಡ್ಡಿಯಾಗುತ್ತಿದೆ. ಮಂಗಳೂರು ಸುತ್ತಮುತ್ತ 5 ರಾಜ ಕಾಲುವೆಗಳಿದ್ದು, ಇವುಗಳ ಪರಿಸ್ಥಿತಿ ನದಿಗಿಂತ ಭಿನ್ನವಾಗಿಲ್ಲ, ರಾಜಕಾಲುವೆಗಳು ಮಧ್ಯಭಾಗದಲ್ಲಿ ಸುಮಾರು 30–40 ಅಡಿ ಅಗಲವಿದ್ದರೆ, ನದಿ ಸೇರುವ ಜಾಗದಲ್ಲಿ ಇದರ ಗಾತ್ರ 20–25 ಅಡಿಗೆ ಸೀಮಿತಗೊಂಡಿದೆ. ಇದರಿಂದ ನೆರೆ ನೀರು ನದಿ ಸೇರುವ ಜಾಗದಲ್ಲಿ ರಾಜಕಾಲುವೆ ಮೀರಿ ಹರಿಯುತ್ತಿದೆ. ಇನ್ನು ರಾಜಕಾಲುವೆಗಳನ್ನೂ ಒತ್ತುವರಿ ಮಾಡಿ ವಾಣಿಜ್ಯ ಕಟ್ಟಡ, ಶಿಕ್ಷಣ ಸಂಸ್ಥೆ, ಮನೆ, ಕಾಂಪೌಂಡ್ ಹಾಲ್, ಪ್ರಾಂಗಣಗಳನ್ನು ಕಟ್ಟಲಾಗಿದೆ.

ಮಂಗಳೂರಿನ ಸುಲ್ತಾನ್ ಬತ್ತೇರಿ ಪರಿಸರದಲ್ಲಿ ನದಿ ಒತ್ತುವರಿ.

ಒತ್ತುವರಿ ಸರ್ವೇಗೆ ₹1 ಕೋಟಿ
ನದಿಗಳ ಒತ್ತುವರಿ ಬಗ್ಗೆ ವಿಜಯ ಕರ್ನಾಟಕ ವಿಶೇಷ ವರದಿ ಮೂಲಕ ಜಿಲ್ಲಾಡಳಿತದ ಗಮನಸೆಳೆದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿದ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ನದಿ ಹಾಗೂ ರಾಜಕಾಲುವೆಗಳ ಒತ್ತುವರಿ ಸರ್ವೇಗೆ 1 ಕೋಟಿ ರೂ. ಅನುದಾನ ಮೀಸಲಿಟ್ಟಿದ್ದಾರೆ. ನೇತ್ರಾವತಿ ಮತ್ತು ಫಲ್ಗುಣಿ ನದಿ ತೀರದಲ್ಲಿ ಸರ್ವೇ ನಡೆಸಿ ಕೂಡಲೇ ಒತ್ತುವರಿಗಳನ್ನು ತೆರವುಗೊಳಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯ
ನದಿ ಪಾತ್ರಗಳು, ರಾಜಕಾಲುವೆಗಳ ಒತ್ತುವರಿ ಬಗ್ಗೆ ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳ ನಿರ್ಲಕ್ಷ್ಯವೂ ಇದೆ. ನದಿ ಪಾತ್ರದಲ್ಲಿ ಒತ್ತುವರಿ, ತ್ಯಾಜ್ಯ ಹಾಕುವವರ ಬಗ್ಗೆ ನಾವು ವರದಿ ನೀಡಬಹುದು, ಯಾವುದೇ ಕ್ರಮಕೈಗೊಳ್ಳಲು ಸಾಧ್ಯವಿಲ್ಲ. ಈ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಸಿಆರ್‌ಝಡ್ ಅಧಿಕಾರಿಗಳು ಪ್ರತಿಕ್ರಿಯಿಸುತ್ತಾರೆ.

ಕಸದ ಬುಟ್ಟಿಗೆ ಸರ್ವೆ ವರದಿ: 7 ವರ್ಷದ ಹಿಂದೆ ದಕ್ಷಿಣ ಕನ್ನಡ ಸಸಿಕಾಂತ್ ಸೆಂಥಿಲ್ ಜಿಲ್ಲಾಧಿಕಾರಿಯಾಗಿದ್ದಾಗ ರಾಜಕಾಲುವೆ ಒತ್ತುವರಿಯ ಸರ್ವೆಗೆ ಮುಡಾ ಆಯುಕ್ತರಾದ ಭಾಸ್ಕರ್ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಈ ತಂಡವು ನಗರದ ಎಲ್ಲ ರಾಜಕಾಲುವೆಗಳ ಸರ್ವೆ ನಡೆಸಿ ಒತ್ತುವರಿ ಬಗ್ಗೆ ವರದಿ ನೀಡಿತ್ತು. ಇದಾದ ಬಳಿಕ ಜಿಲ್ಲಾಧಿಕಾರಿ ಸ್ಥಾನಕ್ಕೆ ಸಸಿಕಾಂತ್ ಸೆಂಥಿಲ್ ರಾಜೀನಾಮೆ ನೀಡಿದ್ದು, ಆ ಬಳಿಕ ಒತ್ತುವರಿ ತೆರವು ವರದಿ ಮೂಲೆ ಸೇರಿತು.

ಕೋರ್ಟಿನಲ್ಲಿ ಉಡುಪಿ ಕೇಸ್: ಉಡುಪಿ ಜಿಲ್ಲೆಯಲ್ಲಿ ಮೂರು ಮದಗ ಕೆರೆ ಒತ್ತುವರಿಯಾಗಿದ್ದು, ತೆರವಿಗೆ ಜಿಲ್ಲಾಡಳಿತ ಮುಂದಾಗಿದೆ. ಸದ್ಯ ಈ ಮೂರು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಕಾರಣ ಅಧಿಕಾರಿಗಳು ಮೌನವಾಗಿದ್ದಾರೆ. ಉಳಿದಂತೆ ಹೆಬ್ರಿ ತಾಲೂಕಿನ ಬೆಳ್ವೆಗ್ರಾಮದ ಮದಗ ಒತ್ತುವರಿಯಾಗಿದೆ. ಉಡುಪಿಯಲ್ಲಿ 93 ಸೆಂಟ್ಸ್, ಹೆಬ್ರಿಯಲ್ಲಿ 32 ಸೆಂಟ್ಸ್ ಜಾಗದಲ್ಲಿ ಒತ್ತುವರಿಯಾಗಿದೆ.

ಸಿಡಿಲಿಗೆ ರೈತರು ಬಲಿ

ಭಾಲ್ಕಿ (ಬೀದರ್): ತಾಲೂಕಿನ ನಾವದಗಿ ಗ್ರಾಮದಲ್ಲಿ ಗುರುವಾರ ರಾತ್ರಿ ಸಿಡಿಲು ಬಡಿದು ಇಬ್ಬರು ರೈತರು ಮೃತಪಟ್ಟಿದ್ದಾರೆ.

ನಾವದಗಿ ಗ್ರಾಮದ ರೇವಣಸಿದ್ದ ಹಣಮಂತ (28) ಮತ್ತು ಜೇವರ್ಗಿಯ ಯಲ್ಲಾಲಿಂಗ (28) ಮೃತರು. ಈ ಇಬ್ಬರು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಗುಡುಗು ಸಹಿತ ಮಳೆ ಸುರಿಯಲಾರಂಭಿಸಿತು. ಇಬ್ಬರೂ ಮಾವಿನ ಗಿಡದ ಕೆಳಗೆ ಆಶ್ರಯ ಪಡೆದಿದ್ದರು. ಈ ವೇಳೆ ಜೋರಾಗಿ ಸಿಡಿಲು ಬಡಿದು ಸ್ಥಳದಲ್ಲಿಯೇ ಮೃತಪಟ್ಟರು. ಖಟಕ್ ಚಿಂಚೋಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಅಪಘಾತದಲ್ಲಿ ಯುವಕ ದುರ್ಮರಣ

ಹನೂರು (ಚಾಮರಾಜನಗರ): ತಾಲೂಕಿನ ಕೆಂಪಯ್ಯನಹಟ್ಟಿ ಗ್ರಾಮ ಸಮೀಪ ಸಂಭವಿಸಿದ ರಸ್ತೆ ಅಪಘಾತದಲ್ಲಿ ಒಬ್ಬ ಯುವಕ ಮೃತಪಟ್ಟು, 9 ಮಂದಿ ಗಾಯಗೊಂಡಿದ್ದಾರೆ.

ಹನೂರು ತಾಲೂಕಿನ ಒಡೆಯರಪಾಳ್ಯ ಗ್ರಾಮದ ಸಂತೋಷ್ (30) ಮೃತ ಯುವಕ. ಒಡೆಯರಪಾಳ್ಯದ ನಂದಿನಿ, ಗೋವಿಂದನ್, ಶಿಲ್ಪಾ, ಮುರುಗೇಶ್, ಮಂಜುಳಾ, ಮುನಿಯಮ್ಮ, ರತ್ನಮ್ಮ, ಕನಗವೇಲ್ ಹಾಗೂ ಸೂರ್ಯ ಗಾಯಗೊಂಡವರು.

ಒಡೆಯರಪಾಳದ ಒಂದೇ ಕುಟುಂಬದ ಸದಸ್ಯರು ತಮಿಳುನಾಡಿನ ಅಂಕಾಳಮ್ಮ ದೇವಸ್ಥಾನಕ್ಕೆ ತೆರಳಿ ಹಿಂದಿರುಗುತ್ತಿದ್ದ ವೇಳೆ ರಾಮಾಪುರ – ಕೆಂಪಯ್ಯನಹಟ್ಟಿ ರಸ್ತೆಯಲ್ಲಿ ಕಾರು ನಿಯಂತ್ರಣ ತಪ್ಪಿ ಮೊದಲು ತಡೆಗೋಡೆಗೆ, ಬಳಿಕ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆಯಿತು. ಗಾಯಾಳುಗಳನ್ನು ಮೂರು ಆಂಬ್ಯುಲೆನ್ಸ್‌ಗಳ ಮೂಲಕ ಕೊಳ್ಳೇಗಾಲದ ಆಸ್ಪತ್ರೆಗೆ ದಾಖಲಿಸಲಾಯಿತು. ಪ್ರಾಥಮಿಕ ಚಿಕಿತ್ಸೆ ನೀಡಿ ಬಳಿಕ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಲಾಯಿತು. ಆದರೆ, ಸಂತೋಷ್ ಮಾರ್ಗ ಮಧ್ಯೆ ಮೃತಪಟ್ಟರು. ರಾಮಾಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ನಗರ ಯೋಜಕರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಮು.ನ.ಯೋ/ಜಿಬಿಎ/CLU–5/2025–26/ಇ–203598 ದಿನಾಂಕ: 24–04–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14A-(1) (c) ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು **'ವಾಣಿಜ್ಯ ಹಾಗೂ ವಸತಿ '** ಉಪಯೋಗದಿಂದ **'ವಾಣಿಜ್ಯ (ಆಸ್ಪತ್ರೆ)'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಚ.ಮೀಗಳಲ್ಲಿ)	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೆ.ಎನ್. ಸೋಮಶೇಖರ್ ಮತ್ತು ಶ್ರೀ ಎ.ಜಿ. ರಾಮಯ್ಯ ರೆಡ್ಡಿ ಚಾರಿಟೆಬಲ್ ಟ್ರಸ್ಟ್ ಕೈಕೊಂಡ್ರಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು	ಬೆಂಗಳೂರು ಪೂರ್ವ	ವರ್ತೂರು	ಕೈಕೊಂಡ್ರ ಹಳ್ಳಿ	62, 63 & 65/1ಎ	16490.93 ರ ಪೈಕಿ 14985.08	ವಾಣಿಜ್ಯ ಹಾಗೂ ವಸತಿ	ವಾಣಿಜ್ಯ (ಆಸ್ಪತ್ರೆ)

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ (ಆಸ್ಪತ್ರೆ) ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ಉತ್ತಮ ಆರೋಗ್ಯ ಸೇವೆಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಆಸ್ಪತ್ರೆ ಕಟ್ಟಡವನ್ನು ನಿರ್ಮಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ಅವಕಾಶಗಳು ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವಾಣಿಜ್ಯ ಹಾಗೂ ವಸತಿ'** ವಲಯದಿಂದ **'ವಾಣಿಜ್ಯ (ಆಸ್ಪತ್ರೆ)'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, 1ನೇ ಮಹಡಿ,
ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

No.DGM-3/BSWML/TEND/26/2025-26/Call-2 Date:24.04.2026.

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ, ಬೆಂಗಳೂರು ಇವರ ಪರವಾಗಿ ಡೆಪ್ಯುಟಿ ಜನರಲ್ ಮ್ಯಾನೇಜರ್–3, BSWML ಇವರು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಕೆಲಸಗಳಿಗಾಗಿ ಅರ್ಹ ಬಿಡ್ಡರ್ ಗಳಿಂದ ಟೆಂಡರ್ ಗಳನ್ನು ಕರೆದಿದ್ದಾರೆ. ಆಯಾ ಕೆಲಸದ ಮುಂದೆ ನಮೂದಿಸಲಾಗಿರುವ ನಿಗದಿತ ಶುಲ್ಕವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪೇಮೆಂಟ್ ವಿಧಾನದಲ್ಲಿ ಪಾವತಿಸಿದ (ಮರುಪಾವತಿರಹಿತ) ನಂತರ ಟೆಂಡರ್ ಪ್ರತಿಗಳನ್ನು https://kppp.karnataka.gov.in ದಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ಬಿಡ್ ದಾರರು ತಮ್ಮ ಬಿಡ್ ಅನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಸಲ್ಲಿಸಬೇಕು. ಇತರ ವಿವರಗಳನ್ನು ಬಿಡ್ ಪ್ರತಿಯಲ್ಲಿ ಗಮನಿಸಬಹುದು.

ನಂ.	ಕಾಮಗಾರಿಯ ವಿವರ	ಟೆಂಡರ್‌ಗೆ ಹಾಕಲಾದ ಮೊತ್ತ ಲಕ್ಷ ರೂ.ಗಳಲ್ಲಿ (ಜಿಎಸ್‌ಟಿ ಹೊರತುಪಡಿಸಿ)	ಇ.ಎಂ.ಡಿ. ಮೊತ್ತ ರೂ. ಗಳಲ್ಲಿ	ಅವಧಿ
01	ಬಯೋ–ಎಂಜೈಮ್ (ಜೈವಿಕ ಎಂಜೈಮ್) ಆಧಾರಿತ ದುರ್ಗಂಧ ನಿವಾರಣೆ ಹಾಗೂ ದೊಡ್ಡಬಳ್ಳಾಪುರ ಕ್ಷೇತ್ರದ MSGP ಸಂಸ್ಕರಣಾ ಘಟಕ ಹಾಗೂ ಅದರ ಸುತ್ತಮುತ್ತ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು. ಕರೆ–2	823.74	12,35,610/-	11 ತಿಂಗಳು

ವೇಳಾಪಟ್ಟಿ :

1). ಬಿಡ್ ಸಲ್ಲಿಕೆಗೆ ಮುನ್ನ ಕೆಪಿಪಿ ಪೋರ್ಟಲ್ ನಲ್ಲಿ ಪ್ರಶ್ನೆಗಳನ್ನು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 27.04.2026 ರ 15.00 ಗಂಟೆಯವರೆಗೆ, 2). ಬಿಡ್ ಪೂರ್ವಭಾವಿ ಸಭೆ: 28.04.2026ರ 15.00 ಗಂಟೆಗೆ, ಸಿಇ & ಸಿಜಿಎಂ (ತಾಂತ್ರಿಕ), ಬಿ ಎಸ್ ಡಬ್ಲ್ಯು ಎಂ ಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು, ಈ ವಿಳಾಸ ದಲ್ಲಿರುವ ಕಚೇರಿಯಲ್ಲಿ, 3). ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 02.05.2026ರ 16.00 ಗಂಟೆಯವರೆಗೆ
4). ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2026ರ 10.30 ಗಂಟೆಗೆ, 5). ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ ದಾರರಿಗೆ ಮುಂದೆ ತಿಳಿಸಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3
ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

DIPR/CP/365/NR/2026-27

PUBLIC NOTICE

Notice is hereby given to the general public that our client proposes to acquire the property described in the schedule hereinbelow, referred to as the "Schedule Property", from its owners, **Smt. Chandra A Pirgal wife of late Anand Pirgal, Smt. Neha A Pirgal, Smt. Naina A Pirgal, Smt. Pooja A. Pirgal and Sri. Siddarth A Pirgal**. Smt. Chandra A Pirgal and Smt. Naina A Pirgal, both are residing at No. 39, Sanghvi Haveli, Govindappa Road, Opposite Jain Temple, Basavanagudi, Bangalore South, Bangalore - 560004. Smt. Neha A Pirgal, residing at No.10, O No. 16, Valmiki Street, VTC Thiyagaraya Nagar, Chennai, Tamil Nadu – 600017. Smt. Pooja A. Pirgal, residing at No. 4, NR Road, Opposite Town Hall, N.R. Road, Bangalore North, Bangalore – 560002. Sri. Siddarth A Pirgal, residing at No.4/1, 1st Floor, Pirgal Arcade, N R Road, Town Hall, Kalasipalayam, Bengaluru – 560002.

Any individuals or entities asserting any right, title, interest, or claim of any nature in the Schedule Property or any portion thereof, or opposing the aforementioned sale to our client, are required to submit their objections in writing, accompanied by all pertinent documentary proofs, to the undersigned within **fifteen (15) days** from the date of publication of this notice. Failure to lodge such claims or objections within the specified period will lead to the presumption that the Schedule Property is unencumbered by any claim or interest, thereby enabling our client to proceed with the consummation of the sale transaction.

: SCHEDULE PROPERTY :

ALL THAT PIECE AND PARCEL of residentially converted property consisting of 1) Katha No. 286/125/4, EPID No. 152900402100720241 (Survey No. 125/4, old Survey No. 125/3) measuring 1 Acre 28 G (6879.66 sq mts), 2) Katha No. 287/125/5, EPID No. 152900402100720242 (Survey No. 125/5, old Survey No. 125/1) measuring 1 Acre 34G (7486.68 sq mts), 3) Katha No. 288/125/6, EPID No. 152900402100720243 (Survey No. 125/6, old Survey No. 125/2) measuring 1 Acre 34 G (7486.68 sq mts), all situated at Kethohalli Village, Kasaba 1 Hobli, Ramanagara Taluk, Bengaluru. The specifics of the boundaries of the property are delineated as follows:

Sl No.	Village Panchayat Katha Number (Survey Nos)	Extent	East by	West by	North by	South by
1.	Katha No.286/ 125/4 (Survey No. 125/4, old Survey No.125/3)	1 Acre 28 G (6879.66 sq mts)	Road Lahi 3	La Survey No.126 and AMP 123	Lahi 6	La Survey Nos. 123, 124
2.	Katha No. 287/ 125/5 (Survey No. 125/5, old Survey No. 125/1)	1 Acre 34G (7486.68 sq mts)	Road Lahi 1	La Survey No. 126	La Survey No. 127	Lahi 6
3.	Katha No. 288/125/6 (Survey No. 125/6, old Survey No.125/2)	1 Acre 34 G (7486.68 sq mts)	Road Lahi 2	La Survey No. 126	Lahi 5	Lahi 4

Date: 25.04.2026, Bengaluru

ILP INDIA LAW PRACTICE ADVOCATES AND ATTORNEYS
Prashanth Mirle, Partner, India Law Practice – ILP
Advocates and Attorneys
4th Floor, JP Square, No.190, Sankey Road,
Sadashivanagar, Bangalore 560 080
B: +91 80 2361 2770/3770 | F: +91 80 2361 4770
e-mail: contact@ilplaw.co.in

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ,
ಕೆ.ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com
ಸಂ:ಬೆಂಮಸಾಸಂ/ಕೇಕ/ಸಂ/ವಾ2044/468/2026–27 ದಿನಾಂಕ:24.04.2026

ಟೆಂಡರ್ ಪ್ರಕಟಣೆ ಸಂಖ್ಯೆ: 03/2026–27 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ದಕ್ಷಿಣ ವಲಯದ ವಿವಿಧ ಸ್ಥಳಗಳಲ್ಲಿ ಖಾಲಿ ಇರುವ ವಾಣಿಜ್ಯ ಕ್ಷೇತ್ರಗಳನ್ನು ನಡೆಸಲು/ನಿರ್ವಹಣೆ ಮಾಡಲು ಏಕಸ್ವಾಮ್ಯ ಏಜೆನ್ಸಿಗೆ ಪರವಾನಗಿದಾರರ/ ಗುತ್ತಿಗೆದಾರರ ಆಯ್ಕೆಗಾಗಿ ಪರವಾನಗಿ ನೀಡಲು ಆಸಕ್ತ ವ್ಯಕ್ತಿ/ಸಂಸ್ಥೆ/ಕಂಪನಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	04.05.2026 ರಂದು 11:00 ಗಂಟೆಗೆ	ಸ್ಥಳ: ಮು.ಸ.ವ್ಯವಸ್ಥಾಪಕರ (ವಾ)ರವರ ಕಛೇರಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂ.ಮಸಾ.ಸಂಸ್ಥೆ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	22.05.2026 ರಂದು 17:00 ಗಂಟೆಯ ವರೆಗೆ	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	25.05.2026 ರಂದು 11:00 ಗಂಟೆ.	
ಆರ್ಥಿಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು.	

ಇ.ಎಂ.ಡಿ ಮೊತ್ತ, ವಿಸ್ತೀರ್ಣ, ಇನ್ನಿತರ ಎಲ್ಲಾ ಮಾಹಿತಿ ಹಾಗೂ ಆಯ್ಕೆ ವಿಧಾನ ಇತ್ಯಾದಿಗಳಿಗಾಗಿ **www.kppp.karnataka.gov.in** ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ:–09240214000: 09240214001; 080–22483777 & 7760991222 ಇ–ಮೇಲ್; **ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

GOVERNMENT OF KARNATAKA

Karnataka Government Secretariat, Vikasa Soudha,
Dr. B.R. Ambedkar Veedhi, Bengaluru.

NO: DOH 57 RERA 2026 Dated: 24-04-2026

NOTIFICATION

In continuation of the Notification No. DOH 57 RERA 2026, Dated: 24-03-2026, the Last Date for Submitting Application for the Post of Technical / Administrative Member in the Karnataka Real Estate Appellate Tribunal, Bengaluru, is extended to **13-05-2026 till 5.00 PM.** All other terms & conditions of the original notification remain the same.

By Order and in the name of the
Governor of Karnataka
Sd/-
(HEMAVATHI)
Under Secretary to Government,
Housing Department (RERA).

DIPR/CP/363/Adverto/2026-27

वित्त मंत्रालय MINISTRY OF FINANCE

ತ್ರೈಮಾಸಿಕ ರಿಟರ್ನ್ ಮಾಸಿಕ ಪಾವತಿ (QRMP)

ಹಣಕಾಸು ವರ್ಷ 2025–26ರಲ್ಲಿ ಒಟ್ಟು ವಾರ್ಷಿಕ ವಹಿವಾಟು ರೂ.5 ಕೋಟಿವರೆಗಿನ ಸಣ್ಣ ತೆರಿಗೆದಾರರ ವ್ಯವಹಾರವನ್ನು ಸುಲಭಗೊಳಿಸುವತ್ತ ಒಂದು ಹೆಜ್ಜೆ

ಕಿಖಒಕ ಯೋಜನೆಯನ್ನು ಪಡೆಯಲು ಬಯಸುವ ಅರ್ಹ ತೆರಿಗೆದಾರರು ಜಿಎಸ್‌ಟಿ ಪೋರ್ಟಲ್ (www.gst.gov.in) ನಲ್ಲಿ ಕೆಳಕಂಡ ಕ್ರಮಗಳನ್ನು ನಿರ್ವಹಿಸುವ ಮೂಲಕ ಆರಿಸಿಕೊಳ್ಳಬಹುದು



- ತೆರಿಗೆದಾರರ ಇಂಟರ್ಫೇಸ್‌ಗೆ ಲಾಗಿನ್ ಮಾಡಿ
- ತ್ರೈಮಾಸಿಕ ರಿಟರ್ನ್ ಆಯ್ಕೆಗಾಗಿ Services > Returns > Opt-inಗೆ ಹೋಗಿ

ORMP ಯೋಜನೆಯು ಈಗಾಗಲೇ ಲಭ್ಯವಿರುವ ತೆರಿಗೆದಾರರು ಈ ಯೋಜನೆಗೆ ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ

ಪ್ರಯೋಜನಗಳು

- GSTR-1 ಮತ್ತು GSTR-3B ಫಾರಂನಲ್ಲಿ ತ್ರೈಮಾಸಿಕಕ್ಕೆ ಒಮ್ಮೆ ಮಾತ್ರ ಜಿಎಸ್‌ಟಿ ಸ್ಟೇಟ್‌ಮೆಂಟ್ಸ್/ ರಿಟರ್ನ್ಸ್
- ಯೋಜನೆಗೆ ಸುಲಭವಾಗಿ ಒಳಗೊಳ್ಳಿರಿ ಮತ್ತು ಹೊರಗುಳಿಯಿರಿ
- ಫ್ಲೆಕ್ಸಿಬಲ್ ಇನ್ವಾಯ್ಸ್ ಫರ್ನಿಶಿಂಗ್ ಫೆಸಿಲಿಟಿಯ (IFF) ಅನುಕೂಲತೆಯನ್ನು ಆನಂದಿಸಿ
- ಪ್ರತಿ ತ್ರೈಮಾಸಿಕಕ್ಕೂ ಒಮ್ಮೆ ಐಟಿಸಿ ಮತ್ತು ತೆರಿಗೆಯ ಸ್ವಯಂ ಮೌಲ್ಯಮಾಪನ

ತ್ರೈಮಾಸಿಕದ ಮೊದಲೆರಡು ತಿಂಗಳಲ್ಲಿ ಸ್ಥಿರ ಸಂಗ್ರಹ ವಿಧಾನ (ಮೊದಲೇ ತುಂಬಿದ ಚಲನ್) ಅಥವಾ ಸ್ವಯಂ ಮೌಲ್ಯಮಾಪನ ವಿಧಾನವನ್ನು (ಐಟಿಸಿಯನ್ನು ಸರಿಹೊಂದಿಸಿದ ಬಳಿಕ ನೈಜ ತೆರಿಗೆ) ಬಳಸಿಕೊಂಡು ಅನುಕೂಲಕ್ಕೆ ತಕ್ಕಂತೆ ಮಾಸಿಕ ತೆರಿಗೆಯನ್ನು ಪಾವತಿಸಿ

ಹಣಕಾಸು ವರ್ಷ 2026–27ರ ತ್ರೈಮಾಸಿಕ 1 ರಿಂದ QRMP ಯೋಜನೆಯನ್ನು ಆರಿಸಲು ಅಂತಿಮ ದಿನಾಂಕ 30ನೇ ಏಪ್ರಿಲ್, 2026

ಅರ್ಹ ನೋಂದಾಯಿತ ವ್ಯಕ್ತಿಯು ಹಿಂದಿನ ತ್ರೈಮಾಸಿಕದ ಎರಡನೇ ತಿಂಗಳ ಮೊದಲ ದಿನದಿಂದ ಮೊದಲ ತಿಂಗಳ ಕೊನೆಯ ದಿನದವರೆಗಿನ ಯಾವುದೇ ತ್ರೈಮಾಸಿಕವನ್ನು ಆರಿಸಿಕೊಳ್ಳಬಹುದು

ಹೆಚ್ಚಿನ ವಿವರಗಳಿಗೆ ಅಧಿಸೂಚನೆ ಸಂಖ್ಯೆ 81 ರಿಂದ 85/2020–ಕೇಂದ್ರ ತೆರಿಗೆ ಮತ್ತು ಸುತ್ತೋಲೆ ಸಂಖ್ಯೆ 143/13/2020–ಜಿಎಸ್‌ಟಿ ದಿನಾಂಕ 10.11.2020ನ್ನು ಪರಾಮರ್ಶಿಸಿ

QRMP ಯೋಜನೆ ಕುರಿತು ಹೆಚ್ಚಿನ ವಿವರಗಳಿಗೆ ಸ್ಕ್ಯಾನ್ ಮಾಡಿ

ಜಿಎಸ್‌ಟಿ ರಿಟರ್ನ್ ಫೈಲಿಂಗ್: ವೇಗ, ಸುಲಭ ಮತ್ತು ಸರಳ

@cbicindia @cbic_india @cbicindia @CBICINDIA @CBIC india

CBC 15502/13/0001/2627

ವಿಕ ಈ ದಿನ ವಿಶೇಷ | ಏ.25

ವಿಶ್ವ ಮಲೇರಿಯಾ ದಿನ

ಭಾರತವೂ ಸೇರಿದಂತೆ ಜಾಗತಿಕವಾಗಿ ಏ.25ರಂದು ವಿಶ್ವ ಮಲೇರಿಯಾ ದಿನ ಆಚರಿಸಲಾಗುತ್ತದೆ. ಮಲೇರಿಯಾ ತಡೆಗಟ್ಟುವಿಕೆ, ನಿಯಂತ್ರಣ ಮತ್ತು ನಿರ್ಮೂಲನೆಯ ಬಗ್ಗೆ ಜಾಗೃತಿ ಮೂಡಿಸಲು ಈ ಅಂತಾರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತದೆ. ಸಾರ್ವಜನಿಕ ಆರೋಗ್ಯದ ಪ್ರಮುಖ ಸಮಸ್ಯೆಯಾಗಿರುವ ಮಲೇರಿಯಾವನ್ನು ಹೋಗಲಾಡಿಸಲು ನಿರಂತರ ಶ್ರಮ ಮತ್ತು ಬದ್ಧತೆ ಬೇಕಿದೆ.

Quick ನ್ಯೂಸ್

- **ಬೇಸಿಗೆ ರಜೆಯಲ್ಲಿ ಜನರ ಸಂಚಾರ ದಟ್ಟಣೆ ನಿಭಾಯಿಸಲು 18,262 ವಿಶೇಷ ರೈಲುಗಳನ್ನು ಹಳಿಗೆ ಇಳಿಸಲು ಭಾರತೀಯ ರೈಲ್ವೆ ಇಲಾಖೆ ನಿರ್ಧಾರ**
- ಮುಸ್ಲಿಮರಿಗೆ ನ್ಯಾಯ ಸಿಗುವವರೆಗೆ ಭಾರತ ವಿಶ್ವಗುರುವಾಗಲ್ಲ, ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅಭಿಪ್ರಾಯ
- **ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಪರವಾನಗಿ ರದ್ದುಪಡಿಸಿದ ಭಾರತೀಯ ರಿಸರ್ವ್ ಬ್ಯಾಂಕ್**
- ಮಣಿಪುರದಲ್ಲಿ ಉಖ್ರುಲ್‌ನಲ್ಲಿ ಕುಕಿ-ನಾಗಾ ಸಮುದಾಯದ ನಡುವೆ ಹಿಂಸಾಚಾರ; 3 ಮಂದಿ ಹತ್ಯೆ
- **ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಯುವತಿಯನ್ನು ಓಡಿಸಿಕೊಂಡು ಹೋದ ಯುವಕನ ತಂದೆಗೆ ಮೂತ್ರ ಕುಡಿಸಿದ ಆಕ್ರೋಶಿತರ ಗುಂಪು; 5 ಮಂದಿ ಬಂಧನ**
- ಗುಜರಾತ್‌ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕ್ರಿಮಿನಲ್ ರೆಕಾರ್ಡ್ ಇರುವಂತವರು ಪೋಲಿಂಗ್ ಏಜೆಂಟ್ ಆಗುವಂತಿಲ್ಲ ಎಂಬ ನಿಯಮ ರದ್ದುಗೊಳಿಸಿದ ರಾಜ್ಯ ಚುನಾವಣಾ ಆಯೋಗ

ದಿಲ್ಲಿಯಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆ | ಆಪ್ ತೊರೆದ 7 ರಾಜ್ಯಸಭೆ ಸದಸ್ಯರು

ಆಮ್ ಆದ್ಮಿ ಪಕ್ಷಕ್ಕೆ ಬಿಗ್ ಶಾಕ್

ಹೊಸದಿಲ್ಲಿ: ರಾಜ್ಯಸಭೆಯಲ್ಲಿ 10 ಸದಸ್ಯರನ್ನು ಹೊಂದಿರುವ ದಿಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷದಲ್ಲಿ ಭಾರಿ ಬಿರುಕು ಕಾಣಿಸಿಕೊಂಡಿದೆ.

ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ರಾಜ್ಯಸಭೆ ಸದಸ್ಯರಾದ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಹಾಗೂ ಅಶೋಕ್ ಮಿತ್ತಲ್ ಅವರು ಆಪ್‌ಗೆ ಗುಡ್‌ಬೈ ಹೇಳಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರನ್ನು ಭೇಟಿಯಾಗಿ 'ಕಮಲ' ಪಾಳಯಕ್ಕೆ ಸೇರ್ಪಡೆಯಾದರು.

ಇದಕ್ಕೂ ಮುನ್ನ ಶುಕ್ರವಾರ ಬೆಳಗ್ಗೆ ಸುದ್ದಿಗೋಷ್ಠಿ ನಡೆಸಿದ್ದ ರಾಘವ್ ಚಡ್ಡಾ ಅವರು, ''ನಾನು ಸೇರಿದಂತೆ ಆಪ್‌ನ ಏಳು ರಾಜ್ಯಸಭೆ ಸದಸ್ಯರು ಪಕ್ಷ ತೊರೆದು ಬಿಜೆಪಿ ಸೇರಲಿದ್ದಾರೆ. ಪಕ್ಷದ ಮೂರನೇ ಎರಡರಷ್ಟು ಸದಸ್ಯರು ಬಿಜೆಪಿಯೊಂದಿಗೆ ವಿಲೀನಗೊಳ್ಳುತ್ತಿದ್ದಾರೆ. ಈ ಸಂಬಂಧ ರಾಜ್ಯಸಭೆ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುತ್ತಿದ್ದೇವೆ. ಹರ್ಭಜನ್ ಸಿಂಗ್, ರಾಜೇಂದ್ರ ಗುಪ್ತಾ, ವಿಕ್ರಮ್ ಸಾಹ್ನಿ, ಸ್ವಾತಿ ಮಾಲಿವಾಲ್ ಸಹ ಬಿಜೆಪಿಗೆ ಸೇರುತ್ತಿದ್ದಾರೆ,'' ಎಂದು ಪ್ರಕಟಿಸಿದರು.

ಮೇಲ್ಮನೆಯಲ್ಲಿ ಬಿಜೆಪಿ ಬಲ ವೃದ್ಧಿ

ಆಪ್‌ನ 7 ಸದಸ್ಯರ ಸೇರ್ಪಡೆ ಪ್ರಕ್ರಿಯೆ ಪೂರ್ಣಗೊಂಡ ನಂತರ ರಾಜ್ಯಸಭೆಯಲ್ಲಿ ಬಿಜೆಪಿ ಬಲ 106ರಿಂದ 113ಕ್ಕೆ ಏರಿಕೆಯಾಗಲಿದೆ. ಎನ್‌ಡಿಎ ಬಲ 141ರಿಂದ 148ಕ್ಕೆ ವೃದ್ಧಿಯಾಗಲಿದೆ.



ಸಂಸದ ರಾಘವ್ ಚಡ್ಡಾ, ಅಶೋಕ್ ಮಿತ್ತಲ್ ಅವರನ್ನು ಹೊಸದಿಲ್ಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಸಿಹಿ ತಿನ್ನಿಸುವ ಮೂಲಕ ಸ್ವಾಗತಿಸಿದರು.

ರಾಜ್ಯಸಭೆಯಲ್ಲಿ ಆಪ್ ಸದಸ್ಯರು

- ಸಂಜಯ್ ಸಿಂಗ್
- ಬಲ್ಬೀರ್ ಸಿಂಗ್ ಸೀಚೆವಾಲ್
- ನರೇನ್ ದಾಸ್ ಗುಪ್ತಾ

ಅನರ್ಹತೆಯಿಂದ ಪಾರಾಗಲು ತಂತ್ರ

ಪಕ್ಷಾಂತರ ನಿಷೇಧ ಕಾಯಿದೆಯ 10ನೇ ಶೆಡ್ಯೂಲ್ ನಡಿ 'ಅನರ್ಹತೆ' ಅಸ್ತ್ರದಿಂದ ಪಾರಾಗಲು ರಾಘವ್ ಚಡ್ಡಾ ತಮ್ಮ ಜತೆಗೆ ಆಪ್‌ನ ಇತರ 6 ರಾಜ್ಯಸಭೆ ಸದಸ್ಯರು ಬಿಜೆಪಿ ಜತೆ ವಿಲೀನ ಆಗುತ್ತಿರುವುದಾಗಿ ಘೋಷಿಸಿದರು. ನಿಯಮದ ಪ್ರಕಾರ ಒಂದು ಪಕ್ಷದ ಒಟ್ಟು ಸಂಸದರಲ್ಲಿ ಮೂರನೇ ಎರಡರಷ್ಟು ಸಂಸದರು ಮತ್ತೊಂದು ಪಕ್ಷದೊಂದಿಗೆ ವಿಲೀನಗೊಂಡರೆ ಅದನ್ನು ಒಪ್ಪಲಾಗುತ್ತದೆ. ಹೀಗಾಗಿ 'ಅನರ್ಹತೆ' ಅಸ್ತ್ರದಿಂದ ಪಾರಾಗಬಹುದು ಎನ್ನಲಾಗುತ್ತದೆ. ಆಪ್ ರಾಜ್ಯಸಭೆಯಲ್ಲಿ 10 ಸದಸ್ಯರನ್ನು ಹೊಂದಿತ್ತು.

ಸಂಸದರ ವಿರುದ್ಧ ಮಾನ್ ಕಿಡಿ

ಚಂಡೀಗಢ: ''ಆಮ್ ಆದ್ಮಿ ಪಕ್ಷವನ್ನು ತೊರೆದು ಬಿಜೆಪಿಗೆ ಸೇರ್ಪಡೆಯಾಗುವುದಾಗಿ ಘೋಷಿಸಿದ ರಾಜ್ಯಸಭಾ ಸದಸ್ಯರು ದ್ರೋಹಿಗಳು,''

ಎಂದು ಪಂಜಾಬ್ ಸಿಎಂ ಭಗವಂತ್ ಮಾನ್ ಟೀಕಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾನ್, ''ಆಮ್ ಆದ್ಮಿ ಪಕ್ಷವನ್ನು ಒಡೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಪಂಜಾಬ್ ಜನತೆಗೆ ದ್ರೋಹ ಬಗೆದಿದೆ,'' ಎಂದು ಆರೋಪಿಸಿದ್ದಾರೆ. ''ಭಗವಂತ್ ಮಾನ್ ವಿರುದ್ಧ ಅವರಿಗೆ ಏನೂ ಸಿಗದಿದ್ದಾಗ, ಅವರು ಆಪ್ ಪಕ್ಷವನ್ನು ಒಡೆಯಲು ಪ್ರಯತ್ನಿಸಿದರು. ಪಂಜಾಬ್ ಜನರು ಆಪ್ ಜತೆಗಿದ್ದಾರೆ. ಅವರು ಪಕ್ಷದ ಪರವಾಗಿ ದೃಢವಾಗಿ ನಿಂತಿದ್ದಾರೆ. ವ್ಯಕ್ತಿಗಿಂತ ಪಕ್ಷ ದೊಡ್ಡದು. ಪಕ್ಷ ತೊರೆದ 6-7 ಜನರು ಇಡೀ ಪಂಜಾಬ್ ಆಗಲು ಸಾಧ್ಯವಿಲ್ಲ,'' ಎಂದು ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿಯಿಂದ ಪಂಜಾಬಿಗಳಿಗೆ ದ್ರೋಹ: ಕೇಜ್ರಿವಾಲ್ ಕಿಡಿ

ರಾಘವ್ ಚಡ್ಡಾ ಸೇರಿ ಏಳು ರಾಜ್ಯಸಭಾ ಸಂಸದರು ಆಪ್ ತೊರೆದು ಬಿಜೆಪಿಗೆ ಸೇರ್ಪಡೆಯಾದ ಕುರಿತು ಪ್ರತಿಕ್ರಿಯಿಸಿರುವ ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಬಿಜೆಪಿ ಮತ್ತೊಮ್ಮೆ ಪಂಜಾಬಿಗಳಿಗೆ ದ್ರೋಹ ಬಗೆದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳಿಂದ ಎರಡನೇ ಬಾರಿ ನೋಟಿಸ್

ಹೊಸದಿಲ್ಲಿ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್(ಸಿಇಸಿ) ಅವರ ಪದಚ್ಯುತಿ ಕೋರಿ ಪ್ರತಿಪಕ್ಷಗಳು ಎರಡನೇ ಬಾರಿಗೆ ನೋಟಿಸ್ ಸಲ್ಲಿಸಿವೆ. ರಾಜ್ಯಸಭೆಯ

73 ಸಂಸದರು ಸಹಿ ಮಾಡಿದ ಹೊಸ ನೋಟಿಸ್ ಅನ್ನು ಪ್ರತಿಪಕ್ಷಗಳು ಶುಕ್ರವಾರ ರಾಜ್ಯಸಭೆ ಕಾರ್ಯದರ್ಶಿಗೆ ಸಲ್ಲಿಕೆ ಮಾಡಲಾಗಿದೆ. ಮುಖ್ಯ ಚುನಾವಣಾ ಆಯುಕ್ತರು ಪಕ್ಷಪಾತ ಮತ್ತು ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿ ಈ ಹಿಂದೆ ನೋಟಿಸ್ ನೀಡಲಾಗಿತ್ತು. ಆದರೆ ಅದನ್ನು ಲೋಕಸಭಾ ಸ್ಪೀಕರ್ ಮತ್ತು ರಾಜ್ಯಸಭಾ ಸಭಾಪತಿ ತಿರಸ್ಕರಿಸಿದ್ದರು. ಬಳಿಕ ಕೆಲವೇ ದಿನಗಳಲ್ಲಿ ಜ್ಞಾನೇಶ್ ಕುಮಾರ್ ಅವರ ಪದಚ್ಯುತಿಗೆ ಕೋರಿ ಎರಡನೇ ನೋಟಿಸ್ ಸಲ್ಲಿಸಲು ಪ್ರತಿಪಕ್ಷಗಳು ಯೋಜಿಸಿದ್ದವು. ಅದರಂತೆ ಎರಡನೇ ಬಾರಿಗೆ ನೋಟಿಸ್ ನೀಡಲಾಗಿದೆ. ಸಿಇಸಿ ಪದಚ್ಯುತಿಗೆ ನೋಟಿಸ್ ಸಲ್ಲಿಸಲು ಲೋಕಸಭೆಯಲ್ಲಿ 100 ಮತ್ತು ರಾಜ್ಯಸಭೆಯಲ್ಲಿ 50 ಸಹಿಗಳ ಅಗತ್ಯವಿದೆ. ಟಿಎಂಸಿ ನೇತೃತ್ವದಲ್ಲಿ ಮಾರ್ಚ್ 12 ರಂದು ಸಲ್ಲಿಸಲಾಗಿದ್ದ ನೋಟಿಸ್‌ನಲ್ಲಿ, ಲೋಕಸಭೆಯ 130 ಮತ್ತು ರಾಜ್ಯಸಭೆಯ 63 ಸಂಸದರು ಸಹಿ ಹಾಕಿದ್ದರು.

'ಮುಸ್ಲಿಂ ಮಹಿಳೆಯರು ಮಸೀದಿಗೆ ಪ್ರವೇಶಿಸಲಿ, ಮುಖ್ಯ ದ್ವಾರ ಬೇಡ'

ಹೊಸದಿಲ್ಲಿ: ಮುಸ್ಲಿಂ ಮಹಿಳೆಯರು ಮಸೀದಿಗಳಿಗೆ ನಮಾಜ್ ಮಾಡಲು ಪ್ರವೇಶಿಸುವುದಕ್ಕೆ ಯಾವುದೇ ನಿರ್ಬಂಧವಿಲ್ಲ ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಆದರೆ ಅವರು ನಿರ್ದಿಷ್ಟ ಬಾಗಿಲಿನ ಮೂಲಕ ಪ್ರವೇಶಿಸಲು ಒತ್ತಾಯಿಸಲು ಸಾಧ್ಯವಿಲ್ಲ ಅಥವಾ ಪುರುಷರು ಮತ್ತು ಮಹಿಳೆಯರನ್ನು ಬೇರ್ಪಡಿಸುವ ಅಡೆತಡೆಗಳನ್ನು ತೆಗೆದುಹಾಕಲು ಪ್ರಯತ್ನಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಶಬರಿಮಲೆಗೆ ಮಹಿಳೆಯರಿಗೆ ಪ್ರವೇಶದ ಕುರಿತು ವಿಚಾರಣೆ ನಡೆಸುತ್ತಿರುವ ಒಂಬತ್ತು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ಬಯಸಿದ್ದ ಸಂಬಂಧ ಮುಸ್ಲಿಂ ಮಂಡಳಿಯು ತನ್ನ ಅಭಿಪ್ರಾಯವನ್ನು ತಿಳಿಸಿದೆ.

ಮಂಡಳಿ ಪರವಾಗಿ ಹಾಜರಾದ ಹಿರಿಯ ವಕೀಲ ಎಂ.ಆರ್. ಶಂಶಾದ್, ''ಇಸ್ಲಾಂ ಧರ್ಮವು ಸಂಪೂರ್ಣವಾಗಿ ಲಿಖಿತ ಧರ್ಮವಾಗಿದ್ದು, ಏನು ನಿಷೇಧಿಸಲಾಗಿದೆ, ಕಡ್ಡಾಯವಾಗಿದೆ ಮತ್ತು ಶಿಫಾರಸು ಮಾಡಲಾಗಿದೆ ಎಂಬುದರ ಕುರಿತು ಸ್ಪಷ್ಟ ಮತ್ತು ವಿವರವಾದ ಮಾರ್ಗದರ್ಶನವನ್ನು ಹೊಂದಿದೆ. ಇಸ್ಲಾಂ ಅಡಿಯಲ್ಲಿ ಧಾರ್ಮಿಕ ಆಚರಣೆಗಳನ್ನು ಚೆನ್ನಾಗಿ ವರ್ಗೀಕರಿಸಲಾಗಿದೆ,'' ಎಂದು ಅವರು ವಾದಿಸಿದರು.

ಭಾರತ, ಚೀನಾ ಮೂದಲಿಸಿದ್ದ ಟ್ರಂಪ್‌ಗೆ ಇರಾನ್ ತಿರುಗೇಟು
ಉಭಯ ದೇಶಗಳು ನಾಗರಿಕತೆಯ ತೊಟ್ಟಿಲುಗಳು ಎಂದು ಬಣ್ಣನೆ

ಅಮೆರಿಕವೇ ನಿಜವಾದ ನರಕ ಕೂಪ

ಮಧ್ಯಪ್ರಾಚ್ಯ ರಣಾಂಗಣ

ಮುಂಬಯಿ: ಭಾರತ ಮತ್ತು ಚೀನಾ 'ನರಕದ ಕೂಪ' ಎಂದು ಜರಿದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಇರಾನ್ ಶುಕ್ರವಾರ ತಿರುಗೇಟು ನೀಡಿದೆ.

ಸಿರಿವಂತ ಸಂಸ್ಕೃತಿ ಹಾಗೂ ವೈವಿಧ್ಯತೆ ಹೊಂದಿರುವ ಭಾರತ ಮತ್ತು ಚೀನಾ 'ನಾಗರಿಕತೆಯ ತೊಟ್ಟಿಲುಗಳು' ಎಂದು ಇರಾನ್ ಹೊಗಳಿದ್ದು, ಇಂಥ ದೇಶಗಳನ್ನು ಅಪಮಾನಿಸುವ ಹೇಳಿಕೆಗಳು ಅಸಮರ್ಪಕ ಮತ್ತು ಇತಿಹಾಸ ವಿರೋಧಿ ನಿಲುವನ್ನು ತೋರಿಸುತ್ತದೆ ಎಂದು ಪ್ರತಿಕ್ರಿಯಿಸಿದೆ.

ಮುಂಬಯಿನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿಯು ಮಹಾರಾಷ್ಟ್ರದ ಸಿರಿವಂತ ಸಂಸ್ಕೃತಿ ಹಾಗೂ ಭೌಗೋಳಿಕ ಪರಂಪರೆ ಬಿಂಬಿಸುವ ವಿಡಿಯೊ ಹಂಚಿಕೊಂಡು, 'ಟ್ರಂಪ್ ಬಾಯಿಗೆ ಬಂದಂತೆ ಮಾತನಾಡುವುದನ್ನು ಬಿಟ್ಟು ಭಾರತಕ್ಕೆ ಬಂದು ಇಲ್ಲಿನ ಸಂಸ್ಕೃತಿಯನ್ನು ನೋಡಿ ಕಲಿಯುವುದು ಒಳಿತು' ಎಂದು ಹೇಳಿದೆ. 'ಕಬಿ ಇಂಡಿಯಾ ಆಕೆ ದೇಖೋ, ಫಿರ್ ಬೋಲ್ನಾ' ಎಂಬ ಶೀರ್ಷಿಕೆಯ ಹೆಸರಿನಲ್ಲಿ ವಿಡಿಯೊವನ್ನು ಇರಾನ್ ಕಾನ್ಸುಲೇಟ್ ಜನರಲ್ ಕಚೇರಿಯು 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

ಇನ್ನೊಂದೆಡೆ, ಹೈದರಾಬಾದ್‌ನಲ್ಲಿರುವ ಇರಾನ್ ಕಾನ್ಸುಲೇಟ್ ಕಚೇರಿ ಕೂಡ 'ಎಕ್ಸ್'ನಲ್ಲಿ ''ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭಾರತ ಮತ್ತು ಚೀನಾ ನಾಗರಿಕತೆಯ ತೊಟ್ಟಿಲುಗಳು. ವಾಸ್ತವದಲ್ಲಿ ಇರಾನ್ ನಾಗರಿಕತೆಯನ್ನು ನಾಶಪಡಿಸುವುದಾಗಿ ಅವಿವೇಕದ ಹೇಳಿಕೆ ನೀಡಿದ್ದ ಯುದ್ಧಾಪರಾಧಿ ಅಧ್ಯಕ್ಷರ ಸ್ಥಳವೇ ನಿಜವಾದ ನರಕದ ಕೂಪ'' ಎಂದು ಟ್ರಂಪ್ ಅವರನ್ನು ಕುಟುಕಿದೆ.

ಅಮೆರಿಕದಲ್ಲಿ ಜನ್ಮಸಿದ್ಧ ಪೌರತ್ವ ಕಾನೂನಿಗೆ ಸಂಬಂಧಿಸಿದಂತೆ ಟ್ರಂಪ್ ಗುರುವಾರ ತಮ್ಮ ಜಾಲತಾಣ ಟ್ರುಥ್‌ನಲ್ಲಿ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಮೈಕೆಲ್ ಸ್ಯಾವೇಜ್‌ರ ಪಾಡ್‌ಕಾಸ್ಟ್ ಮರು ಪೋಸ್ಟ್ ಮಾಡಿದ್ದರು. ಅದರಲ್ಲಿ ಭಾರತ ಮತ್ತು ಚೀನಾವನ್ನು 'ನರಕದ ಕೂಪ'ಗಳು ಎಂದು ಜರಿಯಲಾಗಿತ್ತು. ಇದಕ್ಕೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಖಡಕ್ ಪ್ರತಿಕ್ರಿಯೆ ಕೊಟ್ಟ ಬಳಿಕ ಟ್ರಂಪ್ 'ಭಾರತ ಶ್ರೇಷ್ಠ ದೇಶ, ನಿಜವಾದ ಸ್ನೇಹಿತ' ಎಂದು ಹೇಳುವ ಮೂಲಕ ಡ್ಯಾಮೇಜ್ ಕಂಟ್ರೋಲ್‌ಗೆ ಯತ್ನಿಸಿದ್ದರು.

ಬಾಜಿ ಕಟ್ಟಿದ್ದ ಅಮೆರಿಕ ಕಮಾಂಡೊ ಸೆರೆ

ವಾಷಿಂಗ್ಟನ್: ವೆನಿಜುವೆಲಾ ಮಾಜಿ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಸೆರೆಹಿಡಿಯಲು ಕಾರಣವಾದ ರಹಸ್ಯ ಕಾರ್ಯಾಚರಣೆಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನೇ ಬೆಟ್ಟಿಂಗ್‌ಗೆ ಬಳಸಿದ್ದ ಅಮೆರಿಕ ಭೂಸೇನೆ ವಿಶೇಷ ಪಡೆಗಳ ಯೋಧನೊಬ್ಬನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅಮೆರಿಕ ಪಡೆಯ ಬಂಧಿತ ಕಮಾಂಡೊ ಗ್ಯಾನನ್ ಕೆನ್ ವ್ಯಾನ್ ಡೈಕೆ 'ಪಾಲಿಮಾರ್ಕೆಟ್' ಬೆಟ್ಟಿಂಗ್ ವೇದಿಕೆಯಲ್ಲಿ ಮಡುರೊ ಕಾರ್ಯಾಚರಣೆಯ ಮಾಹಿತಿ ಬಳಸಿಕೊಂಡು ಬಾಜಿ ಕಟ್ಟಿ 4,00,000 ಡಾಲರ್‌ಗಿಂತಲೂ ಹೆಚ್ಚು ಹಣ ಗಳಿಸಿದ್ದ ಎಂಬ ಸಂಗತಿ ಹೊರಬಿದ್ದಿದೆ. ಏಪ್ರಿಲ್ 23ರಂದು ಈತನನ್ನು ತನಿಖಾ ತಂಡಗಳು ಈತನನ್ನು ಬಂಧಿಸಿವೆ. ಮಡುರೊ ಅವರನ್ನು ಸೆರೆಹಿಡಿಯಲು ನಡೆದ 'ಆಪರೇಷನ್ ಅಬ್ಸಲ್ಯೂಟ್ ರಿಸಾಲ್ವ್' ರಹಸ್ಯ ಮಿಲಿಟರಿ ಕಾರ್ಯಾಚರಣೆ ಯೋಜನೆಯಲ್ಲಿ ವ್ಯಾನ್ ಡೈಕೆ ಭಾಗಿಯಾಗಿದ್ದ. ಈ ಕಾರ್ಯಾಚರಣೆಯ ರಹಸ್ಯ ಮಾಹಿತಿ ಬಳಸಿಕೊಂಡು 'ಪಾಲಿಮಾರ್ಕೆಟ್' ವೇದಿಕೆಯಲ್ಲಿ ಬಾಜಿ ಕಟ್ಟಿ ಸುಮಾರು 4 ಲಕ್ಷ ಡಾಲರ್ ಹಣ ಸಂಪಾದಿಸಿದ್ದ ಎಂದು ತನಿಖೆ ವೇಳೆ ಗೊತ್ತಾಗಿದೆ.

ಮೊಜ್ತಬಾ ಖಮೇನಿಗೆ ಕೃತಕ ಕಾಲು !

ಟೆಹ್ರಾನ್: ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಇರಾನ್ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಈಗ ಮಾತಿಲ್ಲದ 'ನಿಗೂಢ ನಾಯಕ'ನಾಗಿ ಉಳಿದಿದ್ದಾರೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ತಿಳಿಸಿದೆ. ಖಮೇನಿ ಅವರ ಮುಖ



ಹಾಗೂ ತುಟಿಗಳು ಸುಟ್ಟ ಗಾಯಗಳಿಂದ ವಿರೂಪಗೊಂಡಿದ್ದು, ಮಾತ ನಾಡಲೂ ಅವರಿಗೆ ಸಾಧ್ಯವಾಗುತ್ತಿಲ್ಲ. ಈ ಕಾರಣ ದಿಂದಲೇ ಅವರು ಯಾವುದೇ ಆಡಿಯೊ ಅಥವಾ ವಿಡಿಯೊ ಸಂದೇಶಗಳನ್ನು ಬಿಡುಗಡೆ ಮಾಡುತ್ತಿಲ್ಲ. ಮೊಜ್ತಬಾ ಅವರ ಮುಖಕ್ಕೆ ಈಗ ಪ್ಲಾಸ್ಟಿಕ್ ಸರ್ಜರಿಯ ಅಗತ್ಯವಿದೆ. ಹಾಗೆಯೇ ಅವರ ಒಂದು ಕಾಲಿಗೆ ಈಗಾಗಲೇ ಮೂರು ಬಾರಿ ಶಸ್ತ್ರಚಿಕಿತ್ಸೆಯಾಗಿದ್ದು, ಕೃತಕ ಕಾಲು ಅಳವಡಿಸಲು ವೈದ್ಯರು ಚಿಂತನೆ ನಡೆಸಿದ್ದಾರೆ ಎಂದೂ ವರದಿ ಹೇಳಿದೆ. ಮೊಜ್ತಬಾ ಅವರಿಗೆ ಮಾತನಾಡಲೂ ಆಗದ ಸ್ಥಿತಿಯಿಂದಾಗಿ ಇರಾನ್‌ನ ಆಡಳಿತಾತ್ಮಕ ನಿರ್ಧಾರಗಳಲ್ಲಿ ಐಆರ್‌ಜಿಸಿ ತನ್ನ ಪ್ರಾಬಲ್ಯ ಹೊಂದಿದೆ ಎಂದೂ ವರದಿ ತಿಳಿಸಿದೆ.

ಲೆಬನಾನ್ - ಇಸ್ರೇಲ್ ಕದನ ವಿರಾಮ 3 ವಾರ ವಿಸ್ತರಣೆ

ವಾಷಿಂಗ್ಟನ್: ಅಮೆರಿಕ-ಇರಾನ್ ನಡುವಿನ ಎರಡನೇ ಸುತ್ತಿನ ಸಂಧಾನ ಮಾತುಕತೆ ಇನ್ನೂ ತೂಗುಯ್ಯಾಲೆಯಲ್ಲೇ ಇದೆ. ಇದರ ಮಧ್ಯೆ, ಏ.25ರ ಭಾನುವಾರ ಅಂತ್ಯಗೊಳ್ಳಲಿರುವ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಕದನ ವಿರಾಮವನ್ನು ಇನ್ನೂ 3 ವಾರ ವಿಸ್ತರಿಸಲು ಎರಡೂ ದೇಶಗಳು ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಶ್ವೇತಭವನದಲ್ಲಿ ಏ.23 ರಂದು ನಡೆದ ಎರಡನೇ ಸುತ್ತಿನ ಉನ್ನತ ಮಟ್ಟದ ಮಾತುಕತೆ ನಂತರ ಈ ಮಹತ್ವದ ನಿರ್ಧಾರಕ್ಕೆ ಬರಲಾಗಿದೆ. ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಏಪ್ರಿಲ್ 16 ರಂದು ಮೊದಲ ಬಾರಿಗೆ 10 ದಿನಗಳ ಕದನ ವಿರಾಮ ಘೋಷಿಸಲಾಗಿತ್ತು.

ಅಂಗ, ವಂಗ, ಕಳಿಂಗದಲ್ಲಿ ಬಿಜೆಪಿ ಸರಕಾರ

ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ | 'ಸಿಂಡಿಕೇಟ್ ರಾಜ್'ಗೆ ಅಂತ್ಯ ಹಾಡ್ತೇವೆ

ಕೋಲ್ಕೊತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮೊದಲ ಹಂತದಲ್ಲಿ ಭರ್ಜರಿ ಮತದಾನವಾಗಿರುವುದು ಜನರು ಬದಲಾವಣೆ ಬಯಸಿರುವುದನ್ನು ಸೂಚಿಸುತ್ತದೆ. ಮುಂದಿನ ತಿಂಗಳು ಅಂಗ, ವಂಗ, ಕಳಿಂಗದಲ್ಲಿ ಬಿಜೆಪಿ ಸರಕಾರ ಇರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದರು.

ಕೋಲ್ಕೊತಾದಲ್ಲಿ ಸುದ್ದಿಗೋಷ್ಠಿ ನಡೆಸಿದ ಅಮಿತ್ ಶಾ ಅವರು, ''ಮೊದಲ ಹಂತದಲ್ಲಿ 152 ಕ್ಷೇತ್ರಗಳಿಗೆ ಮತದಾನ ನಡೆದಿದ್ದು, ಈ ಪೈಕಿ 110ರಲ್ಲಿ ಬಿಜೆಪಿ ಗೆಲುವು ದಾಖಲಿಸಲಿದೆ. ಬಂಗಾಳದ ಜನತೆ ಅತ್ಯುತ್ಸಾಹದೊಂದಿಗೆ ಚುನಾವಣಾ ಹಬ್ಬದಲ್ಲಿ ಪಾಲ್ಗೊಂಡಿದ್ದು, ಶೇ.92ರಷ್ಟು ದಾಖಲೆಯ ಮತದಾನವಾಗಿರುವುದು ಜನರು ಬದಲಾವಣೆ ಬಯಸಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ,'' ಎಂದು ಪ್ರತಿಪಾದಿಸಿದರು.

''ಜನರು ಬದಲಾವಣೆಗಾಗಿ ಉತ್ಸಾಹದಿಂದ ಮತ ಚಲಾಯಿಸಿದ್ದು, ಮೇ 4ರ ನಂತರ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರಕಾರ ನಿರ್ಗಮಿಸಲಿದೆ. ಜೆಪಿಯು ಪೂರ್ಣ ಬಹುಮತದೊಂದಿಗೆ ಬಂಗಾಳದಲ್ಲಿ ಸರಕಾರ ರಚಿಸಲಿದೆ. ಪ್ರಾಚೀನ

ಸಾಮ್ರಾಜ್ಯಗಳಾದ 'ಅಂಗ, ವಂಗ ಮತ್ತು ಕಳಿಂಗ'ದಲ್ಲಿ (ಇಂದಿನ ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಒಡಿಶಾ) ಮುಂದಿನ ತಿಂಗಳು ಬಿಜೆಪಿ ಸರಕಾರ ಇರಲಿದೆ,'' ಎಂದು ಹೇಳಿದರು. ಒಡಿಶಾದಲ್ಲಿ 2024ರಿಂದಲೂ ಬಿಜೆಪಿ ಸರಕಾರ ಅಸ್ತಿತ್ವದಲ್ಲಿದೆ.

''ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಬಂಗಾಳದಲ್ಲಿ ಜನಿಸಿದ ಹಾಗೂ ಬಂಗಾಳಿ ಮಾತನಾಡುವ ವ್ಯಕ್ತಿಯೇ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ,'' ಎಂದು ಸ್ಪಷ್ಟಪಡಿಸಿದ ಅವರು, ''ಬಿಜೆಪಿ ಸರಕಾರವು ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆಯನ್ನು ಖಚಿತಪಡಿಸುತ್ತದೆ ಮತ್ತು ಸಿಂಡಿಕೇಟ್ ರಾಜ್‌ಗೆ ಅಂತ್ಯ ಹಾಡಲಿದೆ,'' ಎಂದರು.

ದಿಲ್ಲಿ ವಶ ನನ್ನ ಮುಂದಿನ ಗುರಿ: ಮಮತಾ ಗುಡುಗು

''ಪಶ್ಚಿಮ ಬಂಗಾಳ ಚುನಾವಣೆ ಗೆದ್ದ ನಂತರ ದಿಲ್ಲಿಯತ್ತ ನಾವು ಗಮನ ಹರಿಸುತ್ತೇವೆ. ಬಿಜೆಪಿಯ ಸಂಪೂರ್ಣ ವಿನಾಶವೇ ನನ್ನ ಗುರಿಯಾಗಿದೆ,'' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುಡುಗಿದರು. ಕೋಲ್ಕೊತಾದ ಚೌರಿಂಗೀ ಪ್ರದೇಶದಲ್ಲಿ ಟಿಎಂಸಿ ರ‍್ಯಾಲಿ ನಡೆಸಿದ ಮಮತಾ ಅವರು, ''ನಾನು ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಮೂಲಕ ಕೇಂದ್ರದಲ್ಲಿ ಬಿಜೆಪಿ ಸರಕಾರವನ್ನು ಕಿತ್ತೊಗೆಯುವ ಗುರಿ ಹೊಂದಿದ್ದೇನೆ,'' ಎಂದರು. ''ನೀವು ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ, ನಾವು ಅನ್ಯಾಯದ ವಿರುದ್ಧ ಹೋರಾಡುತ್ತೇವೆ. ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತೇವೆ. ನಾನು ಪಶ್ಚಿಮ ಬಂಗಾಳದಲ್ಲಿ ಹುಟ್ಟಿದ್ದೇನೆ. ನಾನು ಈ ಬಂಗಾಳದಲ್ಲಿಯೇ ಕೊನೆಯುಸಿರೆಳೆಯುತ್ತೇನೆ,'' ಎಂದರು. ''ಬಂಗಾಳದಲ್ಲಿ ಗೆಲುವು ಖಚಿತಪಡಿಸಿಕೊಂಡ ಬಳಿಕ ನಾನು ದಿಲ್ಲಿಯನ್ನು ನಮ್ಮ ಸುಪರ್ದಿಗೆ ಪಡೆಯುತ್ತೇವೆ,'' ಎಂದರು.

ಜಂಗಲ್ ರಾಜ್ ಅಂತ್ಯದ ಆರಂಭ: ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿನ ದಾಖಲೆ ಮತದಾನವು ಜಂಗಲ್ ರಾಜ್ ಅಂತ್ಯದ ಆರಂಭ ಎಂದು ಪ್ರಧಾನಿ ಮೋದಿ ವ್ಯಾಖ್ಯಾನಿಸಿದರು.

ದಮ್‌ದಮ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಮೋದಿ ಅವರು, ಆರ್‌ಜಿ ಕರ್ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಯ ಅತ್ಯಾಚಾರ ಪ್ರಕರಣ ಉಲ್ಲೇಖಿಸಿ ''ಮಹಿಳೆಯರಿಗೆ ಸುರಕ್ಷತೆ ಒದಗಿಸುವಲ್ಲಿ ಟಿಎಂಸಿ ಸರಕಾರ ಸಂಪೂರ್ಣ ಸೋತಿದೆ,'' ಎಂದು ಟೀಕಿಸಿದರು. ರಾಜ್ಯದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ಮೊದಲ ಸಂಪುಟದಲ್ಲಿ ಪಶ್ಚಿಮ ಬಂಗಾಳದಲ್ಲಿ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೆ ತರಲಿದೆ ಎಂದು ಘೋಷಿಸಿದರು.

ಪಾಕ್‌ನಲ್ಲಿ ಮತ್ತೆ ಸಂಧಾನ ಯತ್ನ

ಇಸ್ಲಾಮಾಬಾದ್: ಅಮೆರಿಕ-ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದ ಅಂತ್ಯಕ್ಕೆ ಶಾಶ್ವತ ಸಂಧಾನ ಸೂತ್ರ ರೂಪಿಸಲು ಪಾಕಿಸ್ತಾನ ಮತ್ತೊಮ್ಮೆ ಮಧ್ಯಸ್ಥಿಗೆ ವಹಿಸುತ್ತಿದೆ. ಈ ಸಂಬಂಧ ಪಾಕಿಸ್ತಾನದ ಆಹ್ವಾನದ ಮೇರೆಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಅವರು ಶುಕ್ರವಾರ ರಾತ್ರಿ ಇರಾನ್‌ನಿಂದ ಇಸ್ಲಾಮಾಬಾದ್, ಮಸ್ಕತ್ ಹಾಗೂ ರಷ್ಯಾದ ಮಾಸ್ಕೊಗೆ ತೆರಳಲಿದ್ದಾರೆ ಎಂದು ಪಾಕಿಸ್ತಾನ ಸೇನಾಧಿಕಾರಿ ತಿಳಿಸಿದ್ದಾರೆ. ಸಂಧಾನ ಸೂತ್ರದ ಜತೆಗೆ ದ್ವಿಪಕ್ಷೀಯ ಮಾತುಕತೆಗೆ ಕೂಡ ಅರಾಘಚಿ ಒತ್ತು ನೀಡಲಿದ್ದಾರೆ. ಪಾಕ್ ಸೇನಾ

ಅರಾಘಚಿ-ವಿಟ್‌ಕಾಫ್ ಮುಖಾಮುಖಿ

ಮುಖ್ಯಸ್ಥ ಆಸಿಮ್ ಮುನೀರ್ ದೂರವಾಣಿ ಕರೆಯ ಮೂಲಕ ಅರಾಘಚಿ ಅವರನ್ನು ಸಂಧಾನಕ್ಕೆ ಕರೆಸುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಲಾಗಿದೆ.

ಮತ್ತೊಂದೆಡೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಸಂಧಾನಕ್ಕೆ ಉತ್ಸುಕರಾಗಿದ್ದು ವಿಶೇಷ ರಾಯಭಾರಿಯಾಗಿ ಸ್ಟೀವ್ ವಿಟ್‌ಕಾಫ್ ಹಾಗೂ ಜರೇಡ್ ಕುಶ್ನರ್ ಅವರನ್ನು ಕಳಿಸಿಕೊಡಲು ಸಿದ್ಧತೆ ನಡೆಸಿದ್ದಾರೆ.

ಫೋಟೊಗ್ರಾಫರ್ ಪಿಎಂ

ಚುನಾವಣೆ ಭರಾಟೆಯ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಬೆಳಗ್ಗೆ ಕೋಲ್ಕೊತಾದಲ್ಲಿ ಹೂಗ್ಲಿ ನದಿಯಲ್ಲಿ ದೋಣಿ ವಿಹಾರ ನಡೆಸಿದರು. ಕ್ಯಾಮೆರಾದಲ್ಲಿ ನಿಸರ್ಗದ ಸೌಂದರ್ಯವನ್ನು ಸೆರೆಹಿಡಿದರು.

ಕೇರಳದಲ್ಲಿ ಕೋವಿಡ್ ಮಾದರಿಯ ಸ್ವಯಂ ಲಾಕ್‌ಡೌನ್ ಘೋಷಣೆ!

ತಿರುವನಂತಪುರ: ತೀವ್ರತರವಾದ ಬಿಸಿಲಿನ ಹಿನ್ನೆಲೆಯಲ್ಲಿ ಕೇರಳದ ಪಾಲಕ್ಕಾಡ್, ಕೊಲ್ಲಂ ಮತ್ತು ತ್ರಿಶ್ಶೂರ್ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ

ತಾಪಮಾನ 40 ಡಿಗ್ರಿ ಸೆಲ್ಸಿಯಸ್ ದಾಟಿದ್ದು ಹವಾಮಾನ ಇಲಾಖೆಯು ಉಷ್ಣಮಾರುತ ಅಲೆಯ ಅಪ್ಪಳಿಸಿ ಸಾರ್ವಜನಿಕರು 'ಹೀಟ್ ಸ್ಟ್ರೋಕ್'ಗೆ ತುತ್ತಾಗುವ ಎಚ್ಚರಿಕೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ರಾಜ್ಯಾದ್ಯಂತ ಜನರಿಗೆ ಬೆಳಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಮನೆಯಿಂದ ಹೊರಗೆ ಬಾರದಂತೆ ಸೂಚಿಸಿದ್ದು, ಕೋವಿಡ್ ಮಾದರಿಯ ಸ್ವಯಂ ಲಾಕ್‌ಡೌನ್ ಹೇರಿಕೊಳ್ಳಲು ಕರೆ ನೀಡಿದ್ದಾರೆ.

''ದೀರ್ಘ ಕಾಲದವರೆಗೆ ಹೆಚ್ಚಿನ ಶಾಖಕ್ಕೆ ಒಡ್ಡಿಕೊಳ್ಳುವುದರಿಂದ ಅನಾರೋಗ್ಯ ಉಂಟಾಗಬಹುದು. ಸಾವು ಕೂಡ ಸಂಭವಿಸಬಹುದು. ಆದ್ದರಿಂದ ಅನಗತ್ಯ ಪ್ರಯಾಣ ಅಥವಾ ಹೊರಾಂಗಣ ಕೆಲಸವನ್ನು ತಪ್ಪಿಸಬೇಕು.

ಶಾಖದ ಹೊಡೆತದಿಂದ (ಹೀಟ್ ಸ್ಟ್ರೋಕ್) ಬಳಲಿದಾಗ ತಕ್ಷಣ ವೈದ್ಯಕೀಯ ಸಹಾಯ

ತೀವ್ರ ಬಿಸಿಲಿನಿಂದ ಸ್ವಯಂ ರಕ್ಷಣೆಗೆ ಕೇರಳ ಸಿಎಂ ಪಿಣರಾಯಿ ಸಲಹೆ

ಪಡೆಯಿರಿ,'' ಎಂದು ಸುದ್ದಿಗಾರರ ಮೂಲಕ ಸಿಎಂ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಸಾರ್ವಜನಿಕ ಸಭೆಗಳನ್ನು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ನಿರ್ಬಂಧಿಸಲಾಗಿದೆ. ಹೊರಾಂಗಣ ಕಾರ್ಯಕ್ರಮಗಳು, ಕ್ರೀಡಾ ಚಟುವಟಿಕೆಗಳು, ಮೆರವಣಿಗೆಗಳು ಮತ್ತು ಪಟಾಕಿಗಳನ್ನು ಸುಡುವುದನ್ನು ನಿಷೇಧಿಸಲಾಗಿದೆ. ಈ ಸಂದರ್ಭದಲ್ಲಿ ಹೊರಾಂಗಣ ಕಾರ್ಮಿಕರಿಗೆ ಕೆಲಸದ ಸಮಯವನ್ನು ಸರಿಹೊಂದಿಸಲು ರಾಜ್ಯ ಸರಕಾರವು ಇಲಾಖೆಗಳಿಗೆ ನಿರ್ದೇಶನ ನೀಡಿದೆ.

ದಾಖಲೆ ಪ್ರಮಾಣದ ಮತದಾನಕ್ಕೆ ಎಸ್‌ಐಆರ್ ಪುಷ್ಟಿ, ಮತದಾರನಿಂದ ಬದಲಾವಣೆಯ ಹಂಬಲ | ಸ್ವಾತಂತ್ರ್ಯ ನಂತರ ಗರಿಷ್ಠ ಪ್ರಮಾಣದ ವೋಟಿಂಗ್

ಪ. ಬಂಗಾಳ-ತಮಿಳುನಾಡು ಮತ ಸುನಾಮಿಯ ಹಿಂದೆ, ಮುಂದೆ

■ ಅನಿಲ್ ಕುಮಾರ್ ಬಿ.ಎಸ್
anil.kumar2@timesofindia.com

ಚೆನ್ನೈ /ಕೋಲ್ಕೊತಾ: ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಏ.23ರಂದು ನಡೆದ ವಿಧಾನಸಭಾ ಚುನಾವಣೆಗಳಲ್ಲಿ ದಾಖಲೆ ಮಟ್ಟದ ಮತದಾನವಾಗಿದೆ. ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ ಶೇ. 91.91 ಮತ್ತು ತಮಿಳುನಾಡಿನಲ್ಲಿ ಶೇ. 84.80 ರಷ್ಟು ಮತದಾನ ದಾಖಲಾಗಿದ್ದು, ಇದು ಸ್ವಾತಂತ್ರ್ಯದ ನಂತರದ ಗರಿಷ್ಠ ಪ್ರಮಾಣವಾಗಿದೆ.

2011ರಲ್ಲಿ ದಾಖಲಾದ ಶೇ. 78.29ರಷ್ಟು ಮತದಾನವೇ ರಾಜ್ಯದ ಇತಿಹಾಸದಲ್ಲಿ ಇದುವರೆಗಿನ ಗರಿಷ್ಠ ವೋಟಿಂಗ್. ಅದೇ ವರ್ಷ ಪಶ್ಚಿಮ ಬಂಗಾಳದಲ್ಲಿ ದಾಖಲಾದ 84.72% ಮತದಾನವೇ ಇದುವರೆಗಿನ ಗರಿಷ್ಠ ಮಟ್ಟವಾಗಿತ್ತು.

ಉಭಯ ರಾಜ್ಯಗಳೂ ಈಗ ಮತದಾನದಲ್ಲಿ ಐತಿಹಾಸಿಕ ದಾಖಲೆ ಮೂಲಕ ಹೊಸ ಮತೋತ್ಸಾಹ ಮೂಡಿಸಿವೆ. ಏ.29ಕ್ಕೆ ಬಂಗಾಳದಲ್ಲಿ ನಡೆಯಲಿರುವ ಎರಡನೇ ಹಂತದ ಮತದಾನದಲ್ಲೂ ಇದೇ ಟ್ರೆಂಡ್ ಮುಂದುವರಿಯಬಹುದೆಂದು ಅಂದಾಜಿಸಲಾಗಿದೆ.

ಇತ್ತ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಉಭಯ ರಾಜ್ಯಗಳ ಮತದಾರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಇದು ಇತ್ತೀಚೆಗೆ ನಡೆದ ಮತದಾರರ ವಿಶೇಷ ಪರಿಷ್ಕರಣೆ(ಎಸ್‌ಐಆರ್) ಫಲವೆಂದು ಹೇಳಿದ್ದಾರೆ. ಜತೆಗೆ, ಇವಿಎಂ ಬ್ಯಾಲೆಟ್ ಪೇಪರ್ ಮೇಲೆ ಅಭ್ಯರ್ಥಿಗಳ ಕಲರ್ ಫೋಟೊ, ಮೊಬೈಲ್ ಡಿಪಾಸಿಟ್ ವ್ಯವಸ್ಥೆ, ಸುಲಭವಾಗಿ ಓದಲು ಸಾಧ್ಯವಾಗುವಂತೆ ಹೊಸದಾಗಿ ವಿನ್ಯಾಸಗೊಳಿಸಿದ ಮತದಾರ ಮಾಹಿತಿ ಚೀಟಿ (ವಿಐಎಸ್) ಮತ್ತು ಪ್ರತಿ ಮತಗಟ್ಟೆಗೆ ಮತದಾರರ ಸಂಖ್ಯೆಯನ್ನು ಗರಿಷ್ಠ 1,200ಕ್ಕೆ ಮಿತಿಗೊಳಿಸುವಂತ ವೋಟರ್ ಸ್ನೇಹಿ ಕ್ರಮಗಳೂ ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ.

ದಾಖಲೆ ಮತದಾನವನ್ನು ಭಾರತೀಯ ಪ್ರಜಾಪ್ರಭುತ್ವದ ಮೇಲಿರುವ ಜನರ ವಿಶ್ವಾಸದ ಪ್ರತೀಕ ಎಂದು ಅವರು ಶ್ಲಾಘಿಸಿದ್ದಾರೆ.



ವಿಕ EXPLAINER

ದಾಖಲೆ ಮತದಾನಕ್ಕೆ ಪ್ರಮುಖ ಕಾರಣಗಳು

ಎಸ್‌ಐಆರ್ ಎಫೆಕ್ಟ್

ಚುನಾವಣಾ ಆಯೋಗವು ನಡೆಸಿದ 'ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ' ಅಡಿಯಲ್ಲಿ ಮೃತಪಟ್ಟ, ಸ್ಥಳಾಂತರಗೊಂಡ ಮತ್ತು ನಕಲಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇದರಿಂದ ಒಟ್ಟು ಮತದಾರರ ಸಂಖ್ಯೆ ಕಡಿಮೆಯಾಗಿದ್ದು ಮತದಾನದ ಶೇಕಡಾವಾರು ಪ್ರಮಾಣ ಗಣನೀಯವಾಗಿ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ.

ತೀವ್ರ ಪೈಪೋಟಿ

ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಮೈತ್ರಿಕೂಟಗಳ ನಡುವೆ ನಟ ವಿಜಯ್ ಅವರ 'ಟಿವಿಕೆ' ಪಕ್ಷವು ಮೂರನೇ ಶಕ್ತಿಯಾಗಿ ಉದಯಿಸಿರುವುದು ಯುವ ಮತದಾರರನ್ನು ಹೆಚ್ಚು ಸೆಳೆದಿದೆ.

ಬದಲಾವಣೆಯ ಹಂಬಲ

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವಿನ ನೇರ ಹಣಾಹಣಿ ಹಾಗೂ ಸರಕಾರದ ವಿರುದ್ಧದ ಆಡಳಿತ ವಿರೋಧಿ ಅಲೆ ಮತದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಬರುವಂತೆ ಮಾಡಿದೆ. ತಮಿಳುನಾಡಿನಲ್ಲೂ ದಾಖಲೆ ಮಟ್ಟದ ಮತದಾನವು ಆಡಳಿತ ವಿರೋಧಿ ಅಲೆಯ ಪರಿಣಾಮವೂ ಇರಬಹುದೆಂದು ಅಂದಾಜಿಸಲಾಗಿದೆ.

ಪರಿಣಾಮಗಳು?

ಆಡಳಿತ ವಿರೋಧಿ ಅಲೆ

ಸಾಮಾನ್ಯವಾಗಿ ಅತಿ ಹೆಚ್ಚಿನ ಮತದಾನವು ಆಡಳಿತಾರೂಢ ಸರಕಾರದ ವಿರುದ್ಧದ ಅಸಮಾಧಾನ ಅಥವಾ ಬದಲಾವಣೆಯ ಮುನ್ಸೂಚನೆ ಎಂದು ವಿಶ್ಲೇಷಿಸಲಾಗುತ್ತದೆ.

ಜಿದ್ದಾಜಿದ್ದಿನ ಹೋರಾಟ

ಈ ಪ್ರಮಾಣದ ಮತದಾನವು ಕೇವಲ ಆಡಳಿತ ವಿರೋಧಿ ಅಲೆ ಮಾತ್ರವಲ್ಲದೆ, ಎರಡೂ ಪಕ್ಷಗಳ ಪರವಾಗಿ ಮತದಾರರು ಧ್ರುವೀಕರಣಗೊಂಡಿರುವುದನ್ನು ತೋರಿಸುತ್ತದೆ. ಇದು ಫಲಿತಾಂಶದ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಅಲ್ಪ ಮತಗಳ ಅಂತರದಲ್ಲಿ ಗೆಲುವು ನಿರ್ಧಾರವಾಗಬಹುದು.

ಮತದಾರರ ಸಂಖ್ಯೆ ಇಳಿಕೆ ನಡುವೆ 20 ಲಕ್ಷ ಹೆಚ್ಚು ವೋಟು

ಚುನಾವಣಾ ಆಯೋಗದ ಅಂಕಿ-ಅಂಶಗಳ ಪ್ರಕಾರ, ಪ. ಬಂಗಾಳದಲ್ಲಿ ಮೊದಲ ಹಂತದಲ್ಲಿ 152 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 20 ಲಕ್ಷಕ್ಕೂ ಅಧಿಕ ಹೆಚ್ಚುವರಿ ಮತದಾರರು ತಮ್ಮ ಹಕ್ಕು ಚಲಾವಣೆ ಮಾಡಿದ್ದಾರೆ. 152 ಕ್ಷೇತ್ರಗಳಲ್ಲಿನ 3.60 ಮತದಾರರ ಪೈಕಿ 92.88(ಅಂದಾಜು 93%) ಅಂದರೆ, 3.35 ಕೋಟಿ ಮತದಾರರು ವೋಟಿಂಗ್ ಮಾಡಿದ್ದಾರೆ. 2021ರಲ್ಲಿ ಚಲಾವಣೆಯಾಗಿದ್ದ 3.15 ಕೋಟಿಗಿಂತಲೂ ಇದು 20 ಲಕ್ಷ ಅಧಿಕ. ಅಂದರೆ, ಈ ಬಾರಿ ಸರಾಸರಿ ಪ್ರತಿ ಸ್ಥಾನಕ್ಕೆ 13,000 ಹೆಚ್ಚುವರಿ ಮತಗಳು ಬಿದ್ದಂತಾಗಿವೆ.

ಆದರೆ, ವಿರೋಧಾಭಾಸವೆಂದರೆ, 'ಎಸ್‌ಐಆರ್' ಬಳಿಕ ಒಟ್ಟು ಮತದಾರರ ಸಂಖ್ಯೆ 152 ಕ್ಷೇತ್ರಗಳಲ್ಲಿ ಒಟ್ಟು ಮತದಾರರ ಸಂಖ್ಯೆ 37 ಲಕ್ಷದಷ್ಟು ಇಳಿಕೆ ನಡುವೆಯೂ ದಾಖಲೆ ಮತದಾನಕ್ಕೆ ಬಂಗಾಳ ಸಾಕ್ಷಿಯಾಗಿದೆ. 2021ರಲ್ಲಿ ಒಟ್ಟು 152 ಕ್ಷೇತ್ರಗಳಲ್ಲಿ ಒಟ್ಟು ಮತದಾರರ ಸಂಖ್ಯೆ 3.78 ಕೋಟಿ ಇತ್ತು ಮತ್ತು ಆಗ ಮತದಾನ ಪ್ರಮಾಣ ಶೇ. 83.33ರಷ್ಟು(3.15 ಕೋಟಿ)ದಾಖಲಾಗಿತ್ತು. ಚುನಾವಣೆ ನಡೆದ 152 ಕ್ಷೇತ್ರಗಳಲ್ಲಿ ಎಸ್‌ಐಆರ್‌ಗೆ ಮುನ್ನ ಒಟ್ಟು ಮತದಾರರ ಸಂಖ್ಯೆ 3.98 ಕೋಟಿಯಷ್ಟಿತ್ತು. ಎಸ್‌ಐಆರ್ ಬಳಿಕ ಅದು 3.60 ಕೋಟಿಗೆ ಇಳಿದಿತ್ತು.

ಪ್ರವಾಸಿಗರಿಗಿಲ್ಲ ವಿಮೆ ರಕ್ಷಣೆ

ಗಡಿ ಜಿಲ್ಲೆಯ ಟೂರಿಸ್ಟ್‌ಗಳಿಗೆ ಸಿಗದ ಪರಿಹಾರ ಸೌಲಭ್ಯ

ರವಿಭಾರತಿ ಗೋಸಾವಿ ಬೆಳಗಾವಿ
ravi.gosavi@timesofindia.com

ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಸರಕಾರ 'ಅಪಘಾತ ವಿಮೆ' ಯೋಜನೆ ಕಡ್ಡಾಯಗೊಳಿಸಿದ್ದರೂ ಸಮರ್ಪಕ ಅನುಷ್ಠಾನವಾಗಿಲ್ಲ. ಅಭಯಾರಣ್ಯ, ಜಲಪಾತ ಸೇರಿ ನಾನಾ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದರೂ ಸುರಕ್ಷತೆಗೆ ವಿಮೆ ರಕ್ಷಣೆ ಇಲ್ಲದಿರುವುದು ಪರಿಸರ ಪ್ರವಾಸದ ಪ್ರಯಾಸ ನೀಗಿಲ್ಲ.

2023ರಲ್ಲೇ ಆದೇಶ: ಕೊಡಗು ಜಿಲ್ಲೆಯಲ್ಲಿ ಚಾರಣದ ವೇಳೆ ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ ಘಟನೆ, ಚಂದ್ರ ದ್ರೋಣ ಪರ್ವತ ಶ್ರೇಣಿಯ ಜಲಪಾತದ ಬಳಿ ಬಾಲಕಿ ನಾಪತ್ತೆ ಘಟನೆಗಳು ಪ್ರವಾಸಿಗರ ಸುರಕ್ಷತೆ ಕುರಿತು ಎಚ್ಚರಿಕೆ ಗಂಟೆ ಬಾರಿಸಿದ್ದವು. ಈ ಹಿನ್ನೆಲೆಯಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ವಿಮೆ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಿದ್ದರು. ಅದರಂತೆ 2023ರ ಜೂನ್ 19ರಂದು ಕರ್ನಾಟಕ ಅರಣ್ಯ ಇಲಾಖೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಮೂಲಕ ಎಲ್ಲ ಪರಿಸರ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಪ್ರವಾಸಿಗರಿಗೆ ಅಪಘಾತ ವಿಮೆ ಕಡ್ಡಾಯಗೊಳಿಸುವಂತೆ ಸ್ಪಷ್ಟ ಆದೇಶ ಹೊರಡಿಸಲಾಗಿದೆ.

ಬೆಳಗಾವಿ ಜಿಲ್ಲೆಗಿಲ್ಲ ಆದ್ಯತೆ: ಈ ಯೋಜನೆ ರಾಜ್ಯದ ಕೆಲವು ಅರಣ್ಯ ವಲಯಗಳಲ್ಲಿ ಮಾತ್ರ ಅನುಷ್ಠಾನಗೊಂಡಿದೆ. ರಾಜ್ಯ ಸರಕಾರದ ಜಂಗಲ್ ಲಾಡ್ಜಸ್ ಆ್ಯಂಡ್ ರೆಸಾರ್ಟ್ಸ್ ತನ್ನ ವ್ಯಾಪ್ತಿಯ ಪರಿಸರ ಪ್ರವಾಸಿ ತಾಣಗಳಲ್ಲಿ ವಿಮೆ ನೀಡುತ್ತಿದೆ. ಆದರೆ, ಬೆಳಗಾವಿ ಜಿಲ್ಲೆಯ ಪ್ರಮುಖ ಪರಿಸರ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಇನ್ನೂ ಈ ಯೋಜನೆ ಜಾರಿಯಾಗಿಲ್ಲ.

ಪರಿಸರ ಪ್ರವಾಸೋದ್ಯಮಕ್ಕೆ ಹಿನ್ನಡೆ: ಖಾನಾಪುರ ತಾಲೂಕಿನ ಭೀಮಗಡ ಅಭಯಾರಣ್ಯ, ತಿಲಾರಿ, ಜಾಂಬೋಟಿ ಅರಣ್ಯ ಪ್ರದೇಶ ಸೇರಿ ಅನೇಕ ಸ್ಥಳಗಳಿಗೆ ವರ್ಷಪಿಡೀ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಜಲಪಾತಗಳು, ಕಾಡು ಮಾರ್ಗಗಳಲ್ಲಿ ಟ್ರೆಕ್ಕಿಂಗ್ ಮಾಡುವಾಗ, ಗುಡ್ಡ ಪ್ರದೇಶಗಳಲ್ಲಿ ಜಾರಿಬೀಳುವುದು, ನೀರಿನಲ್ಲಿ ಮುಳುಗುವುದು, ವನ್ಯಜೀವಿ ಹಾಗೂ ಜೇನುಹುಳುಗಳ ದಾಳಿ ಸೇರಿದಂತೆ ಇತರ ಅಪಾಯಗಳು ಸಾಮಾನ್ಯವಾಗಿದ್ದರೂ ಅಪಘಾತ ಸಂಭವಿಸಿದರೆ ತಕ್ಷಣ ಆರ್ಥಿಕ ನೆರವು ನೀಡುವ ವಿಮೆ ವ್ಯವಸ್ಥೆ ಇಲ್ಲ. ಇದು ಗಡಿ ಜಿಲ್ಲೆಯ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಹಿನ್ನಡೆಯಾಗಿದೆ.

ಈ ಕುರಿತು ವನ್ಯಜೀವಿ ಸಂರಕ್ಷಣಾವಾದಿಗಳು ಸರಕಾರದ ಗಮನ ಸೆಳೆದಿದ್ದಾರೆ. ಪ್ರವಾಸೋದ್ಯಮ ಬೆಳವಣಿಗೆಗೆ ಸಮಾನವಾಗಿ ಪ್ರವಾಸಿಗರ ಜೀವಭದ್ರತೆ ಖಚಿತಪಡಿಸುವುದು ಸರಕಾರದ ಹೊಣೆ. ಆದ್ದರಿಂದ, ರಾಜ್ಯದ ಎಲ್ಲ ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಕಡ್ಡಾಯ ಅಪಘಾತ ವಿಮೆ ಯೋಜನೆ ತ್ವರಿತವಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾರೆ.

> ಬೆಳಗಾವಿ ವಿಭಾಗ ವ್ಯಾಪ್ತಿಯ ಅರಣ್ಯ ಇಲಾಖೆ ನಿರ್ವಹಣೆ ಮಾಡುವ ಪರಿಸರ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಗೆ ಜೀವ ವಿಮೆ ಒದಗಿಸುವಂತೆ ಹಲವು ಬಾರಿ ಮನವಿ ಮಾಡಿದ್ದೇವೆ. ಇನ್ನಾದರೂ ಆದ್ಯತೆ ಮೇರೆಗೆ ಈ ಕುರಿತು ಕ್ರಮ ಕೈಗೊಳ್ಳಬೇಕು. ಶೀಘ್ರದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಅವರನ್ನು ಭೇಟಿ ಮಾಡಿ ಈ ಕುರಿತು ಮನವಿ ಸಲ್ಲಿಸಲಾಗುವುದು.
>
> **-ಗಿರಿಧರ ಕುಲಕರ್ಣಿ**
> ವನ್ಯಜೀವಿ ಸಂರಕ್ಷಣಾವಾದಿ

> ಬೆಳಗಾವಿ ವಿಭಾಗದಲ್ಲಿ ಪ್ರವಾಸಿಗರಿಗೆ ವಿಮೆ ಸುರಕ್ಷತೆ ಒದಗಿಸುವ ವಿಚಾರ ಚರ್ಚೆ ಹಂತದಲ್ಲಿದೆ. ಈ ಬಗ್ಗೆ ಶೀಘ್ರದಲ್ಲಿ ಅಂತಿಮ ನಿರ್ಧಾರ ಕೈಗೊಂಡು ಸೌಲಭ್ಯ ಕಲ್ಪಿಸಲಾಗುವುದು.
>
> **- ಎನ್.ಇ.ಕ್ರಾಂತಿ** ಡಿಸಿಎಫ್, ಬೆಳಗಾವಿ

ಬೋಟ್ ಮುಳುಗಡೆ, ಆರು ಮಂದಿ ರಕ್ಷಣೆ

ವಿಕ ಸುದ್ದಿಲೋಕ ಮಂಗಳೂರು

ನಗರದ ಹಳೆ ದಕ್ಕೆಯಿಂದ ಲಕ್ಷದ್ವೀಪಕ್ಕೆ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಮಂಜಿ-ಬೋಟ್ ಸಮುದ್ರದಲ್ಲಿ ಮುಳುಗಡೆಯಾಗಿದ್ದು, ಅದರಲ್ಲಿದ್ದ 6 ಮಂದಿಯನ್ನು ರಕ್ಷಿಸಲಾಗಿದೆ.

ಬುಧವಾರ ಮಧ್ಯಾಹ್ನ ಮಂಗಳೂರಿನಿಂದ ಹೊರಟ ಜೀಲಾನಿ ಹೆಸರಿನ ಮಂಜಿ-ಬೋಟ್ ಸುಮಾರು 15 ನಾಟಿಕಲ್ ಮೈಲುದೂರ ಚಲಿಸುವಷ್ಟರಲ್ಲಿ ಸ್ಟರ್ನ್ ಟ್ಯೂಬ್ ತುಂಡಾಗಿ ನೀರು ಬೋಟ್‌ನ ಒಳನುಗ್ಗ ತೊಡಗಿತು. ಸಿಬ್ಬಂದಿ ಮೋಟಾರ್ ಆನ್ ಮಾಡಿ, ನೀರು ಹೊರಗೆ ಹಾಕಲು ಪ್ರಯತ್ನಿಸಿದರೂ ಸಫಲರಾಗದ ಕಾರಣ ಎಂಜಿನ್ ಸ್ಥಗಿತಗೊಂಡು ಬೋಟ್ ಮುಳುಗಲಾರಂಭಿಸಿತು. ಮಂಜಿ-ಬೋಟ್ ಮಾಲೀಕ ಲಕ್ಷದ್ವೀಪದ ರಶೀದ್, ಸಿಬ್ಬಂದಿ ಗುಜರಾತ್‌ನ ದಿಕ್ಕರ್, ಇಸಾಕ್, ಉತ್ತಮ್, ಸಿದ್ದೀಕ್ ಹಾಗೂ ತಮಿಳುನಾಡು ಕಡ್ಲೂರಿನ ಗೂಗನ್ ಸಣ್ಣ ಬೋಟ್(ಪಾತಿ) ಮೂಲಕ ಹೊರಗೆ ಬಂದರು. ಅವರನ್ನು ಮೀನುಗಾರಿಕೆ ಬೋಟ್‌ನವರು ರಕ್ಷಿಸಿ ಮಂಗಳೂರಿಗೆ ಕರೆ ತಂದರು.

ಮಂಜಿ-ಬೋಟ್‌ನಲ್ಲಿ ಒಟ್ಟು 160 ಟನ್ ತೂಕದ ರೇಷನ್, ಸ್ಟೀಲ್, ಕಾರ್ಗೋ, ಜಲ್ಲಿ, ಮಣ್ಣು, ಸಿಮೆಂಟ್ ಸಾಗಿಸಲಾಗುತ್ತಿತ್ತು. ಸುಮಾರು 30-40 ಲಕ್ಷ ರೂ. ನಷ್ಟವಾಗಿರಬಹುದು ಎಂದು ಓಲ್ಡ್ ಪೋರ್ಟ್ ಯೂಸರ್ಸ್ ಅಸೋಸಿಯೇಶನ್ ಪದಾಧಿಕಾರಿಗಳು ತಿಳಿಸಿದ್ದಾರೆ.

ಹೀಗೊಬ್ಬ ಪ್ರಾಮಾಣಿಕ ಪ್ರಯಾಣಿಕ

ದಾವಣಗೆರೆ: ಬಸ್‌ನಲ್ಲಿ ಬ್ಯಾಗ್ ಅದಲು ಬದಲಾಗಿ ಲಕ್ಷಾಂತರ ರೂ. ಬೆಲೆ ಬಾಳುವ ಚಿನ್ನದ ಆಭರಣಗಳನ್ನು ವ್ಯಕ್ತಿಯೊಬ್ಬರು ಹರಿಹರ ನಗರ ಠಾಣೆಗೆ ಒಪ್ಪಿಸಿದ್ದಾರೆ.

ದುಗ್ಗಾವತ್ತಿಯ ಶಂಬುನಾಥ ಹನುಮಂತಪ್ಪ ಕಳಂಗನವರ ಆಭರಣ ಹಿಂದಿರುಗಿಸಿದವರು. ಏ.22ರಂದು ಹರಪನಹಳ್ಳಿಯಿಂದ ದುಗ್ಗಾವತಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ ಶಂಭುನಾಥ ಅವರು, ಬಸ್ ಕ್ಯಾಬಿನ್‌ನಲ್ಲಿ ತಮ್ಮ ರೊಟ್ಟಿ ಚೀಲವನ್ನು ಇಟ್ಟಿದ್ದರು. ಅದರ ಪಕ್ಕದಲ್ಲಿ ಅದೇ ರೀತಿಯ ಇನ್ನೊಂದು ಚೀಲ ಇತ್ತು. ಅವರು ದುಗ್ಗಾವತಿಯಲ್ಲಿ ಬಸ್ ಇಳಿಯುವಾಗ ತಮ್ಮ ಚೀಲ ಬಿಟ್ಟು, ಪಕ್ಕದಲ್ಲಿದ್ದ ಮತ್ತೊಂದು ಚೀಲ ತೆಗೆದುಕೊಂಡು ಹೋಗಿದ್ದರು. ಮನೆಗೆ ಹೋದ ನಂತರ ಚೀಲ ಬಿಚ್ಚಿದಾಗ ಹರಪನಹಳ್ಳಿಯ ಬಂಗಾರದ ಅಂಗಡಿಯೊಂದರ ಹೆಸರಿರುವ ಬ್ಯಾಗ್ ಇತ್ತು. ಅದರೊಳಗೆ 55 ಗ್ರಾಂ. ಹಾಗೂ 88 ಗ್ರಾಂ. ತೂಕದ ಬಂಗಾರ ಆರಭರಣಗಳನ್ನು ನೋಡಿ ಶಂಬುನಾಥ ಅವರಿಗೆ ಅದು ತಮ್ಮ ಬ್ಯಾಗ್ ಅಲ್ಲ ಎಂಬುದು ಖಚಿತವಾಯಿತು. ಬಳಿಕ ಆಭರಣದ ಬ್ಯಾಗ್ ಮೇಲಿದ್ದ ಬಂಗಾರದ ಅಂಗಡಿ ದೂರವಾಣಿ ಸಂಖ್ಯೆಗೆ ಕರೆ ಮಾಡಿ, ವಿಚಾರ ತಿಳಿಸಿದರು. ನಂತರ ಹರಿಹರ ನಗರ ಠಾಣೆಗೆ ತೆರಳಿ ಆಭರಣದ ಬ್ಯಾಗ್ ಅನ್ನು ಒಪ್ಪಿಸಿದರು. ಪ್ರಾಮಾಣಿಕತೆ ಮೆರೆದ ಶಂಭುನಾಥ ಅವರನ್ನು ದಾವಣಗೆರೆ ಗ್ರಾಮಾಂತರ ಉಪ ವಿಭಾಗದ ಡಿವೈಎಸ್‌ಪಿ ರುದ್ರಪ್ಪ ಉಜ್ಜನಕೊಪ್ಪ ಸನ್ಮಾನಿಸಿದರು.

ಲೋಪ ಸರಿಪಡಿಸಿದ ಎಸ್ಸೆಸ್ಸೆಲ್ಸಿ ಪರೀಕ್ಷಾ ಮಂಡಳಿ

ಶಿರಸಿ (ಉ.ಕ.): ನಗರದ ವಿದ್ಯಾರ್ಥಿನಿಯೊಬ್ಬಳ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದ ಅಂಕಪಟ್ಟಿಯಲ್ಲಿ ಆಗಿದ್ದ ಲೋಪವನ್ನು ಪರೀಕ್ಷಾ ಮಂಡಳಿ ಸರಿಪಡಿಸಿದೆ.

ಯೂನಿಯನ್ ಪ್ರೌಢಶಾಲೆಯ ದೃಷ್ಟಿ ವಿಶೇಷಚೇತನ ವಿದ್ಯಾರ್ಥಿನಿಯು ಎಲ್ಲ ವಿಷಯಗಳ ಪರೀಕ್ಷೆಗೆ ಹಾಜರಾಗಿದ್ದರೂ ಸಮಾಜ ವಿಜ್ಞಾನ ಪರೀಕ್ಷೆಗೆ ಗೈರು ಎಂದು ನಮೂದಿಸಲಾಗಿತ್ತು. ಈ ಬಗ್ಗೆ ಪಾಲಕರು ಶಿಕ್ಷಣಾಧಿಕಾರಿ ಹಾಗೂ ಶಾಸಕ ಭೀಮಣ್ಣ ನಾಯ್ಕ ಅವರಲ್ಲಿ ದೂರಿದ್ದರು. ಆಗಿರುವ ಲೋಪ ಸರಿಪಡಿಸುವಂತೆ ಪರೀಕ್ಷಾ ಮಂಡಳಿಗೆ ಸೂಚನೆ ನೀಡುವಂತೆ ಅವರು ಸಚಿವ ಮಧು ಬಂಗಾರಪ್ಪ ಅವರ ಗಮನಕ್ಕೆ ತಂದಿದ್ದರು. ದಾಖಲೆಗಳನ್ನು ಪರಿಶೀಲಿಸಿದ ಮಂಡಳಿ ಆಗಿರುವ ಲೋಪ ಸರಿಪಡಿಸಿದೆ.

''ನಮ್ಮ ಮಗಳು ಸಮಾಜ ವಿಜ್ಞಾನ ಪರೀಕ್ಷೆಯಲ್ಲಿ ನೂರಕ್ಕೆ 87 ಅಂಕಗಳನ್ನು ಪಡೆದಿದ್ದಾಳೆ ಎಂದು ಮಂಡಳಿ ಅಂಕಪಟ್ಟಿಯಲ್ಲಿ ತಿದ್ದುಪಡಿ ಮಾಡಿ ಕಳಿಸಿದೆ,'' ಎಂದು ಪಾಲಕರು ತಿಳಿಸಿದ್ದಾರೆ.

27ರಂದು ದ.ಕ., ಉಡುಪಿ ಜಿಲ್ಲೆಗಳಿಗೆ ನಿರ್ಮಲಾ ಭೇಟಿ

ಮಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಏ.27, 28ರಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರವಾಸ ಕೈಗೊಳ್ಳಲಿದ್ದಾರೆ.

ಏ.27ರಂದು ರಾತ್ರಿ 7.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸುವ ಅವರು, ಕೊಲ್ಲೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಏ.28ರಂದು ಬೆಳಗ್ಗೆ 11ಕ್ಕೆ ಉಡುಪಿ ಐಐಜಿಜೆ ಕ್ಯಾಂಪಸ್ ಭೇಟಿ, 2.45ಕ್ಕೆ ಮಂಗಳೂರಿಗೆ ಬರುವ ಅವರು, ಸಂಜೆ 3.30ಕ್ಕೆ ನಗರದ ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಎನ್.ವಿನಯ ಹೆಗ್ಡೆ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶ: ಗ್ರಾಮ ಸಹಾಯಕ ಸಾವು

ಉಡುಪಿ: ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಹಿಂಭಾಗದಲ್ಲಿನ ಮಾವಿನ ಮರ ಹತ್ತಿ ಹಣ್ಣು ಕೀಳುತ್ತಿದ್ದ ವೇಳೆ ಹೈಟೆನ್ಶನ್ ವಿದ್ಯುತ್ ತಂತಿ ಸ್ಪರ್ಶಿಸಿ ಜಿಲ್ಲಾಧಿಕಾರಿ ಕಚೇರಿಯ ಗ್ರಾಮ ಸಹಾಯಕ ಸದಾನಂದ ದೇವಾಡಿಗ (54) ಶುಕ್ರವಾರ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಪ್ರತಿನಿತ್ಯ ಡಿಸಿ ಕಚೇರಿಗೆ ಬೇಗನೇ ಬರುವ ಸದಾನಂದ ದೇವಾಡಿಗ ಏ.24ರಂದು ಬೆಳಗ್ಗೆ 7.45ಕ್ಕೆ ಆಗಮಿಸಿದ್ದು, ಕಚೇರಿಯ ಹಿಂಬದಿ ಇರುವ ಮಾವಿನ ಮರದಲ್ಲಿದ್ದ ಹಣ್ಣುಗಳನ್ನು ಕಬ್ಬಿಣದ ಕೊಕ್ಕೆಯಿಂದ ಕೊಯ್ಯುತ್ತಿದ್ದರು. ಈ ವೇಳೆ ಕಬ್ಬಿಣದ ಕೊಕ್ಕೆ ಹೈಟೆನ್ಶನ್ ವಿದ್ಯುತ್ ತಂತಿಗೆ ತಾಗಿ ವಿದ್ಯುತ್ ಪ್ರವಹಿಸಿದ್ದರಿಂದ ಸದಾನಂದ ಗಂಭೀರ ಗಾಯಗೊಂಡರು. ತಕ್ಷಣ ಅವರನ್ನು ಉಡುಪಿ ಅಜ್ಜರಕಾಡು ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು.. ಈ ಬಗ್ಗೆ ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

150 ಟನ್ ಅಕ್ರಮ ಪಡಿತರ ವಶ

ವಿಕ ಸುದ್ದಿಲೋಕ ಕೊಪ್ಪಳ

ತಾಲೂಕಿನ ಕೂಕನಪಳ್ಳಿ ಸಮೀಪದ ಜಮೀನೊಂದರಲ್ಲಿ ಅಕ್ರಮವಾಗಿ ದಾಸ್ತಾನು ಇರಿಸಿದ್ದ ಅನ್ನಭಾಗ್ಯ ಯೋಜನೆಯ 150 ಟನ್ ಪಡಿತರ ಅಕ್ಕಿಯನ್ನು ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ಮುನಿರಾಬಾದ್ ಠಾಣೆಯ ಪೊಲೀಸರು ಗುರುವಾರ ರಾತ್ರಿ ಜಂಟಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.

ಗ್ರಾಮೀಣ ಭಾಗದ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಿಂದ ಕಡಿಮೆ ಬೆಲೆಗೆ ಅಕ್ಕಿಯನ್ನು ಖರೀದಿಸಿದ ದಂಧೆಕೋರರು ಖಾಲಿ ಜಮೀನು ಹಾಗೂ ಶೆಡ್‌ನಲ್ಲಿ ದಾಸ್ತಾನು ಇರಿಸಿದ್ದರು. ಈ ಅಕ್ಕಿಯನ್ನು ಪಾಲಿಶ್‌ಮಾಡಿ ಬೇರೆ ರಾಜ್ಯಗಳಿಗೆ ಸಾಗಿಸಲು ಸಂಚು ರೂಪಿಸಿದ್ದರು ಎಂದು ತಿಳಿದುಬಂದಿದೆ.

ಕೂಕನಪಳ್ಳಿ ಗ್ರಾಮದ ಯಮನೂರಪ್ಪ ಮತ್ತು ಗಾಳೆಪ್ಪ ಅವರ ವಿರುದ್ಧ ಮುನಿರಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಯಾಣದ ತೊಗರಿಗೆ ಕಾರ್ಪೊರೇಟ್ ಟಚ್!

ಕಲಬುರಗಿ ಪಲ್ಸಸ್ ಬ್ರಾಂಡ್ ಹೆಸರಲ್ಲಿ ಮಾರುಕಟ್ಟೆಗೆ ಪ್ರವೇಶ

ವೆಂಕಟೇಶ ಏಗನೂರು ಕಲಬುರಗಿ
Venkatesh.narasappa@timesofindia.com

ಜಿಲ್ಲೆಯ ರೈತರಿಗೆ ಉದ್ಯೋಗ ನೀಡುವುದು, ಅವರ ಆದಾಯ ಹೆಚ್ಚಿಸುವ ಉದ್ದೇಶದಿಂದ ತೊಗರಿ ಸೇರಿ ಇತರ ದ್ವಿದಳ ಧಾನ್ಯಗಳಿಗೆ 'ಕಲಬುರಗಿ ಪಲ್ಸಸ್' ಎಂಬ ಹೊಸ ಬ್ರಾಂಡಿಂಗ್ ಮಾಡಿ ಮಾರುಕಟ್ಟೆ ಕಲ್ಪಿಸಲು ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆ ಮುಂದಾಗಿದೆ.

50 ಸಾವಿರ ರೈತರನ್ನು ಬೆಸೆಯಲಿದೆ ಜಿಲ್ಲಾಡಳಿತದ ಮಾಸ್ಟರ್‌ಪ್ಲ್ಯಾನ್

ರೈತರೇ ಪ್ರೊಸೆಸಿಂಗ್ ಮತ್ತು ಗ್ರೇಡಿಂಗ್ ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟು ಅವರೇ ಬೇಳೆ ಮಾಡಿ, ಪ್ಯಾಕಿಂಗ್ ಮಾಡಲು ಪ್ರೋತ್ಸಾಹ ನೀಡಲಾಗುತ್ತದೆ. ನಂತರ ಅವರಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನೂ 'ಕಲಬುರಗಿ ಪಲ್ಸಸ್' ಒದಗಿಸಲಿದೆ.

'ಕಲಬುರಗಿ ಪಲ್ಸಸ್' ಬ್ರಾಂಡಿಂಗ್ ಮಾರುಕಟ್ಟೆ ಕಲ್ಪಿಸಲು ಮೊದಲ ಹಂತದಲ್ಲಿ ಜಿಲ್ಲೆಯ 50 ಸಾವಿರ ರೈತರನ್ನು ಇದರಲ್ಲಿ ತೊಡಗಿಸುವ ಉದ್ದೇಶ ಹೊಂದಲಾಗಿದೆ. ಜಿಲ್ಲೆಯಲ್ಲಿ ಈಗಾಗಲೇ 1,000 ಎಸ್‌ಜಿಎಸ್‌ಗಳು, 35 ಎಫ್‌ಪಿಒಗಳಿದ್ದು, ಇಲ್ಲಿ ನೋಂದಣಿಯಾದ ರೈತರನ್ನೇ ತೊಡಗಿಸುವ ಉದ್ದೇಶ ಹೊಂದಲಾಗಿದೆ. ಒಂದು ವೇಳೆ ಇದರಲ್ಲಿ ನೋಂದಣಿಯಾಗದಿದ್ದರೂ ಹೊಸ ರೈತರು ಸಹ ತೊಡಗಿಸಿಕೊಳ್ಳಲು ಅವಕಾಶವಿದೆ.

ಮೊದಲ ಹಂತದಲ್ಲಿ 10 ಲಕ್ಷ ಕ್ವಿಂಟಾಲ್: ಜಿಲ್ಲೆಯಲ್ಲಿ 60ರಿಂದ 65 ಲಕ್ಷ ದ್ವಿದಳ ಧಾನ್ಯ ಉತ್ಪಾದಿಸಲಾಗುತ್ತಿದೆ. ಇದರಲ್ಲಿ 10 ಲಕ್ಷ ಕ್ವಿಂಟಾಲ್ ಸಂಸ್ಕರಣೆ, ಮೌಲ್ಯವರ್ಧನೆ, ಬ್ರಾಂಡಿಂಗ್ ಮತ್ತು ದ್ವಿದಳ ಧಾನ್ಯಗಳ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಫೆಡರೇಷನ್: ಜಿಲ್ಲಾ ಮಟ್ಟದಲ್ಲಿ ಎಸ್‌ಎಚ್‌ಜಿ, ಎಫ್‌ಪಿಒ ಒಳಗೊಂಡು ರೈತರ ಒಂದು ಫೆಡರೇಷನ್ ಮಾಡಲಾಗುತ್ತದೆ. ಗ್ರೇಡಿಂಗ್, ಪ್ರೊಸೆಸಿಂಗ್, ಪ್ಯಾಕಿಂಗ್, ಮಾರುಕಟ್ಟೆಯ ಬಗ್ಗೆ ಈ ಫೆಡರೇಷನ್‌ಗೆ ತರಬೇತಿ ನೀಡಲಾಗುತ್ತದೆ. ಅದರಂತೆ ರೈತರಿಗೆ ತಿಳಿ ಹೇಳಿ ಅವರಿಂದ ಉತ್ಪಾದನೆಯಾಗುವ ಬೇಳೆಗೆ ಮಾರುಕಟ್ಟೆಯನ್ನು ಒದಗಿಸಲಾಗುತ್ತದೆ.

ಸಬ್ಸಿಡಿಯಲ್ಲಿ ಮೆಷಿನ್: ದ್ವಿದಳ ಧಾನ್ಯಗಳನ್ನು ರೈತರೇ ಕ್ಲೀನಿಂಗ್, ಗ್ರೇಡಿಂಗ್ ಮಾಡಿಕೊಳ್ಳಲು ರಾಜ್ಯ ಸರಕಾರದ ಸೆಕೆಂಡ್ರಿ ಅಗ್ರಿಕಲ್ಚರ್ ಮತ್ತು ಪಿಎಂಎಫ್‌ಎಂಇ ಕೇಂದ್ರದ ಯೋಜನೆಯಲ್ಲಿ ಶೇ.50ರ ಸಬ್ಸಿಡಿಯಲ್ಲಿ ಮಶಿನ್‌ಗಳನ್ನು ನೀಡಲಾಗುತ್ತದೆ.

> ಜಿಲ್ಲೆಯ ರೈತರಿಗೆ ಉದ್ಯೋಗ ನೀಡುವುದು, ಅವರ ಆದಾಯ ಹೆಚ್ಚಿಸುವ ಉದ್ದೇಶದಿಂದ ದ್ವಿದಳ ಧಾನ್ಯಗಳಿಗೆ 'ಕಲಬುರಗಿ ಪಲ್ಸಸ್' ಎಂಬ ಹೊಸ ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಕಲ್ಪಿಸಲು ಪ್ಲ್ಯಾನ್ ಮಾಡಲಾಗುತ್ತಿದೆ. ಕರ್ನಾಟಕ ರೈತ ಸಮೃದ್ಧಿ ಸ್ಕೀಂನಲ್ಲಿ ಕಲಬುರಗಿ ಪಲ್ಸಸ್ ಬ್ರಾಂಡಿಂಗ್‌ಗಾಗಿ 10 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ.
>
> **- ಸಮದ್ ಪಟೇಲ್**
> ಜಂಟಿ ಕೃಷಿ ನಿರ್ದೇಶಕ ಕಲಬುರಗಿ

ಹೊಟ್ಟಿನಿಂದ ಮೌಲ್ಯವರ್ಧಿತ ಉತ್ಪನ್ನ

ತೊಗರಿ, ಹೆಸರು, ಕಡಲೆ ಹಾಗೂ ಉದ್ದು ಕ್ಲೀನಿಂಗ್, ಪ್ರೊಸೆಸಿಂಗ್ ಮುಗಿಸಿ ಬೇಳೆ ಮಾಡಿದ ನಂತರ ಉಳಿದ ಹೊಟ್ಟಿನಿಂದ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲೂ ಯೋಜನೆ ಹಾಕಿಕೊಳ್ಳಲಾಗಿದೆ. ಪ್ರೊಟೀನ್ ಪೌಡರ್, ಪ್ರೊಟೀನ್ ಸ್ನ್ಯಾಕ್ಸ್, ಪ್ರೊಟೀನ್ ಎನರ್ಜಿ ಡ್ರಿಂಕ್ಸ್, ಪಲ್ಸ್ ಫ್ಲೋರ್, ತೊಗರಿ ಕಟಾವಿನ ನಂತರ ತೊಗರಿ ಕಟ್ಟಿಗೆಯನ್ನು ಬ್ರಿಕೆಟ್ಸ್ ತಯಾರಿಸುವುದು ಸಹ ಪ್ಲ್ಯಾನ್ ಇದೆ.

ಪ್ರತ್ಯೇಕ ಧರ್ಮ ಹೋರಾಟಕ್ಕೆ ಒಗ್ಗಟ್ಟಿರಲಿ

ಲಿಂಗಾಯಿತರಿಗೆ ಒಬಿಸಿ ಸ್ಥಾನಮಾನ ನೀಡಲು ಪ್ರಯತ್ನ: ಶೆಟ್ಟರ್ ಭರವಸೆ

■ **ವಿಕ ಸುದ್ದಿಲೋಕ** ಬೆಂಗಳೂರು

ಸ್ವತಂತ್ರ ಧರ್ಮಕ್ಕಾಗಿ ಹೋರಾಡುವುದಾದರೆ, ವೀರಶೈವ-ಲಿಂಗಾಯತರು ಒಟ್ಟಾಗಿ ಹೋರಾಟ ಮಾಡಬೇಕು. ಲಿಂಗಾಯತ ಸಮಾಜವನ್ನು ಕೇಂದ್ರದ ಹಿಂದುಳಿದ ವರ್ಗದ ಪಟ್ಟಿಗೆ ಸೇರಿಸಲು ದಿಲ್ಲಿ ಹಂತದಲ್ಲಿ ಪ್ರಯತ್ನ ಮಾಡಲಾಗುವುದು ಎಂದು ಸಂಸದ ಜಗದೀಶ್ ಶೆಟ್ಟರ್ ಭರವಸೆ ನೀಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಗರದ ಟೌನ್ ಹಾಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ಮಹಿಳಾ ಮತ್ತು ಯುವ ವಿಭಾಗಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ವೀರಶೈವ ಬೇರೆ-ಲಿಂಗಾಯತ ಬೇರೆ, ಸ್ವತಂತ್ರ ಧರ್ಮ ಮಾಡಬೇಕೆಂಬ ಚರ್ಚೆಗಳು ನಡೆದಾಗ ಅದಕ್ಕೆ ಸಂಬಂಧಪಟ್ಟ ಕೆಲ ವ್ಯಕ್ತಿಗಳು, ಸ್ವಾಮೀಜಿಗಳನ್ನು ಸ್ವತಃ ಭೇಟಿಯಾಗಿ ಚರ್ಚಿಸಿದ್ದೇನೆ. ಆಗ ಕೆಲವರು, ವೀರಶೈವ ಮತ್ತು ಲಿಂಗಾಯತ ಬೇರಾದರೆ ಮಾತ್ರ 'ಒಬಿಸಿ' ಸ್ಥಾನಮಾನ ದೊರೆಯುತ್ತದೆ ಎಂದು ಹೇಳಿದ್ದಾರೆ. ಆದರ ಸಂಬಂಧಿತ ದಾಖಲೆ ಕೇಳಿದರೆ ಇದುವರೆಗೂ ತಂದುಕೊಟ್ಟಿಲ್ಲ. ಈ ರೀತಿಯ ತಪ್ಪು ಸಂದೇಶ ಸಾರುವ ಮೂಲಕ ಲಿಂಗಾಯತ ಮತ್ತು ವೀರಶೈವರನ್ನು ಬೇರೆ ಮಾಡುವ ಷಡ್ಯಂತ್ರ ನಡೆದಿದೆ,'' ಎಂದು ಕಿಡಿಕಾರಿದರು.

''ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಲಿಂಗಾಯತರ ವೋಟು ಬೇಕು. ಆದರೆ, ಲಿಂಗಾಯತ ನಾಯಕರು ಬೇಡ ಎಂಬ ಸ್ಥಿತಿ ನಿರ್ಮಾಣವಾಗಿದೆ. ಒಂದು ಕಾಲದಲ್ಲಿ 90ಕ್ಕೂ ಹೆಚ್ಚು ಲಿಂಗಾಯತ ಶಾಸಕರಿದ್ದರು. ಆದರೆ, ಇಂದು ನಮ್ಮೊಳಗಿನ ಒಳಜಗಳದಿಂದಾಗಿ ಸಂಖ್ಯೆ 60ರ ಗಡಿ ದಾಟುತ್ತಿಲ್ಲ,'' ಎಂದು ಬೇಸರ ವ್ಯಕ್ತಪಡಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ,''ಬಸವಣ್ಣ ಜಾತ್ಯತೀತ ನಾಯಕ ಎಂಬ ಕಾರಣದಿಂದ ಕರ್ನಾಟಕ ಸರಕಾರ ಅವರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿದೆ. ಎಲ್ಲಾ ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೊ ಇಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಈ ರೀತಿ ನಾನಾ ಸಮುದಾಯದವರು ಬಸವಣ್ಣನವರ ಕುರಿತು ಅಪಾರ ನಂಬಿಕೆ ಇಟ್ಟುಕೊಂಡಿದ್ದಾರೆ. ಆದರೆ, ನಾವು ಒಳಪಂಗಡಗಳಿಂದ ಚದುರುತ್ತಿರುವುದು ದುರ್ದೈವ,'' ಎಂದು ವಿಷಾದಿಸಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ,''ಅಖಿಲ ಭಾರತ ವೀರಶೈವ ಮಹಾಸಭಾ ವಿಶ್ವದೆಲ್ಲೆಡೆ ಇರುವ ಸಮಾಜದವರನ್ನು ಸಂಘಟಿಸುವ ಕೆಲಸ ಮಾಡುತ್ತಿದೆ. ಬಸವ ಕಲ್ಯಾಣದಲ್ಲಿ 650 ಕೋಟಿ ರೂ. ವೆಚ್ಚದಲ್ಲಿ ನೂತನ ಅನುಭವ ಮಂಟಪ ನಿರ್ಮಾಣಕ್ಕೆ 480 ಕೋಟಿ ರೂ. ಅನುದಾನ ನೀಡಲಾಗಿದೆ. ಇದು ಜಗತ್ತಿಗೆ ಮಾದರಿಯಾಗಲಿದ್ದು, ಮುಂದಿನ ಬಸವ ಜಯಂತಿಯಂದು ನೂತನ ಅನುಭವ ಮಂಟಪದ ಉದ್ಘಾಟನೆ ನೆರವೇರಿಸಲಾಗುವುದು,'' ಎಂದು ತಿಳಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಿಳಾ ವಿಭಾಗದ ಅಧ್ಯಕ್ಷೆ ವೀಣಾ ಕಾಶಪ್ಪನವರ್ ಹಾಗೂ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಪಾಟೀಲ್ ಸೇರಿದಂತೆ ಹಲವು ಸದಸ್ಯರು ಪದಗ್ರಹಣ ಸ್ವೀಕರಿಸಿದರು.

ಈ ವೇಳೆ ಚಂದ್ರವನ ಆಶ್ರಮದ ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಸಚಿವ ಶರಣ ಪ್ರಕಾಶ ಪಾಟೀಲ್, ಶಾಸಕ ವಿಜಯಾನಂದ ಕಾಶಪ್ಪನವರ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಿಳಾ ಮತ್ತು ಯುವ ವಿಭಾಗಗಳ ಪದಗ್ರಹಣ ಕಾರ್ಯಕ್ರಮದ ವೇಳೆ ಸಂಸದ ಜಗದೀಶ್ ಶೆಟ್ಟರ್, ಸಭಾಪತಿ ಹೊರಟ್ಟಿ ಮತ್ತಿತರರು ಭಾಗವಹಿಸಿದ್ದರು.

ವೀರಶೈವ ಲಿಂಗಾಯತ ಮಹಾಸಭೆಯಲ್ಲಿರುವವರು ತಮ್ಮ ವಾರ್ಷಿಕ ಆದಾಯದ ಶೇ.2ರಷ್ಟು ಹಣವನ್ನು ಸಮಾಜಕ್ಕೆ ಕಾಣಿಕೆಯಾಗಿ ಪ್ರತೀ ವರ್ಷದ ಬಸವ ಜಯಂತಿಯಂದು ನೀಡಬೇಕು. ಆ ಹಣದ ಮೂಲಕ ಮಹಾಸಭಾದ ತಾಲೂಕು-ಜಿಲ್ಲಾ ಘಟಕಗಳು ಸಮಾಜಕ್ಕೆ ಬೇಕಾದ ಕೆಲಸ ಮಾಡುತ್ತವೆ. ಯಾರು ಸಮಾಜಕ್ಕಾಗಿ ಹಣ ನೀಡುವುದಿಲ್ಲವೋ ಅವರಿಗೆ ಮಹಾಸಭೆಯಲ್ಲಿರಲು, ಸಮಾಜ ಕಟ್ಟಲು ಯಾವುದೇ ನೈತಿಕ ಹಕ್ಕಿಲ್ಲ, ಅಂಥವರು ಸಮಾಜವನ್ನು ಬಿಟ್ಟುಹೋಗುವುದು ಸೂಕ್ತ.

-ಶಂಕರ ಬಿದರಿ
ಮಹಾಸಭಾದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ

ಇತರೆ ಸಮಾಜದ ಮಕ್ಕಳು ಉತ್ತಮ ಶಿಕ್ಷಣ ಪಡೆದು ಐಎಎಸ್, ಐಪಿಎಸ್ ಅಧಿಕಾರಿಗಳಾಗುತ್ತಿರುವುದು ಸಂತೋಷದ ಸಂಗತಿ. ಆದರೆ, ನಮ್ಮ ಸಮಾಜದಲ್ಲಿ ಕಡಿಮೆ ಸಂಖ್ಯೆಯ ಮಕ್ಕಳು ಐಎಎಸ್, ಐಪಿಎಸ್ ಹುದ್ದೆಗಳನ್ನು ಅಲಂಕರಿಸುತ್ತಿದ್ದಾರೆ. ಇದರೆಡೆಗೆ ಗಮನಹರಿಸಿ ಸಮಾಜದಿಂದ ಉನ್ನತ ಹುದ್ದೆಗೆ ಹೋಗುವವರ ಸಂಖ್ಯೆಯನ್ನು ಹೆಚ್ಚಿಸಬೇಕು.

-ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಮಹಿಳೆ ಮತ್ತು ಯುವಕರಿಂದ ಸದೃಢ ಸಮಾಜ ನಿರ್ಮಾಣ ಸಾಧ್ಯ. ಸಮುದಾಯಕ್ಕೆ ಉತ್ತಮ ಹೆಸರು ತರುವುದು ಕೇವಲ ಮಠ ಹಾಗೂ ಸ್ವಾಮೀಜಿಗಳ ಕೆಲಸವಲ್ಲ, ಇದಕ್ಕಾಗಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಶ್ರಮಿಸಬೇಕು. ಆ ನಿಟ್ಟಿನಲ್ಲಿ ಪ್ರತಿ ಮನೆಯಲ್ಲೂ ಒಬ್ಬೊಬ್ಬ ಸಮಾಜ ಸೇವಕ ಇರಬೇಕು.

-ಡಾ.ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಮೇಲಣಗವಿ ಮಠ

ಪ್ರಾಣಿ ದಾಳಿ ತಪ್ಪಿಸಲು ಇ-ಗಸ್ತು

ಅರಣ್ಯಾಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಇ-ಗಸ್ತು ಮತ್ತು ಅತ್ಯಾಧುನಿಕ ಉಪಕರಣಗಳ ಬಳಕೆಯಿಂದ ಮಾನವ ವನ್ಯಜೀವಿ ಸಂಘರ್ಷ ತಡೆಗಟ್ಟಬಹುದಾಗಿದ್ದು, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸೂಚಿಸಿದರು.

ಅರಣ್ಯ ಭವನದಲ್ಲಿ ನಡೆದ ಎರಡು ದಿನಗಳ ಕೆಡಿಪಿ ಮತ್ತು ಎಂಎಂಆರ್ ಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ''ಅರಣ್ಯ ಪ್ರದೇಶದಲ್ಲಿ ಅಕ್ರಮ ಮರ ಕಡಿತ, ವನ್ಯಜೀವಿಗಳ ಅಸಹಜ ಸಾವು, ಕಳ್ಳಬೇಟೆ, ಅರಣ್ಯ ಒತ್ತುವರಿ, ಮಾನವ-ವನ್ಯಜೀವಿ ಸಂಘರ್ಷಗಳು ನಮ್ಮ ಮುಂದಿರುವ ದೊಡ್ಡ ಸವಾಲುಗಳಾಗಿವೆ,''ಎಂದರು.

ನೆರೆ ರಾಜ್ಯಗಳಿಂದ ಮೆಚ್ಚುಗೆ: ''ನಮ್ಮ ಅರಣ್ಯ ಇಲಾಖೆಯ ಸಿಬ್ಬಂದಿ ಆನೆ ಸೆರೆ ಹಿಡಿಯುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದು, ನೆರೆಯ ಆಂಧ್ರಪ್ರದೇಶದವರು ನಮ್ಮಿಂದ ಕುಮ್ಕಿ ಆನೆ ಕೇಳುತ್ತಾರೆ. ಗೋವಾ, ಉತ್ತರಾಂಚಲ, ಅರುಣಾಚಲ ಪ್ರದೇಶದವರು ಆನೆ ಹಿಮ್ಮೆಟ್ಟಿಸಲು, ಸೆರೆ ಹಿಡಿಯಲು ರಾಜ್ಯದ ನೆರವು ಕೇಳುತ್ತಾರೆ. ಇದು ನಮಗೆ ಹೆಮ್ಮೆಯ ಸಂಗತಿ. ಆದರೆ, ನಮ್ಮ ಸಮಸ್ಯೆಯ ನಿವಾರಣೆಗೂ ನಾವು ಹೆಚ್ಚಿನ ಗಮನ ಹರಿಸಬೇಕು,'' ಎಂದರು.

ವನ್ಯಜೀವಿಗಳ ಸಂತಾನಹರಣ, ನಿಯಂತ್ರಣ ಕುರಿತು ಚರ್ಚೆ ಅಗತ್ಯ: ''ಅರಣ್ಯ ಪ್ರದೇಶದಲ್ಲಿ ಮುಂದಿನ 20 ವರ್ಷಗಳಲ್ಲಿ ವನ್ಯಜೀವಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗುವ ಸಾಧ್ಯತೆ ಇದೆ. ಹೀಗಾಗಿ, ತಾತ್ಕಾಲಿಕವಾಗಿ ಆಯ್ದ ಪ್ರದೇಶದಲ್ಲಿ, ಆಯ್ದ ವನ್ಯಜೀವಿಗಳಿಗೆ ಸಂತಾನ ಹರಣ ಅಥವಾ ನಿಯಂತ್ರಣ ಚುಚ್ಚು ಮದ್ದು ನೀಡುವುದರ ಸಾಧಕ-ಬಾಧಕ ಕುರಿತಂತೆ ರಾಷ್ಟ್ರಮಟ್ಟದಲ್ಲಿಯೂ ಸಾರ್ವಜನಿಕವಾಗಿ ಚರ್ಚೆ ನಡೆಯಬೇಕು,'' ಎಂದರು.

''2015ರ ನಂತರದ ಅರಣ್ಯ ಒತ್ತುವರಿ ಪ್ರಕರಣ ತೆರವಿಗೆ ಕ್ರಮ ಕೈಗೊಳ್ಳಬೇಕು. ಆದಕಾರಣ, ಇಲಾಖೆಯಲ್ಲಿರುವ ಕಾನೂನು ಕೋಶ ಬಲಪಡಿಸುವ ಜತೆಗೆ, ಹೊಸ ಒತ್ತುವರಿ ಆಗದಂತೆ ಮತ್ತು ವನ್ಯಜೀವಿ ಕಳ್ಳಬೇಟೆ, ಅಸಹಜ ಸಾವು ತಡೆಗೆ ಜಾಗೃತ ದಳವನ್ನೂ ಮತ್ತಷ್ಟು ಬಲಪಡಿಸಬೇಕು,'' ಎಂದರು.

ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಉಪಸ್ಥಿತರಿದ್ದರು.

ಸಚಿವ ಸುಧಾಕರ್‌ಗೆ ಚಿಕಿತ್ಸೆ ಮುಂದುವರಿಕೆ, ಅಲ್ಪ ಚೇತರಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಅವರಿಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿನ 'ಕಿಮ್ಸ್' ಖಾಸಗಿ ಆಸ್ಪತ್ರೆಯಲ್ಲಿ ಸಚಿವ ಸುಧಾಕರ್ ಅವರಿಗೆ ಶ್ವಾಸಕೋಶ ಸಂಬಂಧಿ ಸಮಸ್ಯೆಗೆ ಚಿಕಿತ್ಸೆ ನೀಡಲಾಗುತ್ತಿದೆ. ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಂ.ಡಿ.ಚೆನ್ನದುರೈ ತಿಳಿಸಿದ್ದಾರೆ.

ಒಳಮೀಸಲು ಸೂತ್ರಕ್ಕೆ ಎಡಗೈ ವಿರೋಧ

ನಮ್ಮ ಪಾಲಿನ ಶೇ.1ರಷ್ಟು ಮೀಸಲು ಕಸಿದುಕೊಂಡ ಸರಕಾರ | ದಾವಣಗೆರೆಯಲ್ಲಿ ದಲಿತರ ಆಕ್ರೋಶ

■ **ವಿಕ ಸುದ್ದಿಲೋಕ** ದಾವಣಗೆರೆ

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಒಳ ಮೀಸಲು ಹಂಚಿಕೆಯಲ್ಲಿ ಎಡಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ, ನಗರದ ಜಯದೇವ ವೃತ್ತದಲ್ಲಿ ದಲಿತ ಸಂಘಟನೆಗಳು ಶುಕ್ರವಾರ ಪ್ರತಿಭಟನೆ ನಡೆಸಿದವು.

ಈ ವೇಳೆ ಮಾತನಾಡಿದ ದಲಿತ ಸಂಘರ್ಷ ಸಮಿತಿ ಹಿರಿಯ ಮುಖಂಡ ಆಲೂರು ನಿಂಗರಾಜ್, ''ಎಸ್ಸಿ ಪಟ್ಟಿಯಲ್ಲಿರುವ ಎಡಗೈ ಸಮುದಾಯಕ್ಕೆ ಶೇ.5.25 ರಷ್ಟು, ಬಲಗೈ ಸಮುದಾಯಕ್ಕೆ ಶೇ.5.25 ಹಾಗೂ ಇತರೆ ಜಾತಿಗಳಿಗೆ ಶೇ.4.50 ಒಳ ಮೀಸಲು ನೀಡಲು ತೀರ್ಮಾನಿಸಲಾಗಿದೆ. ಸರಕಾರದ ಈ ತೀರ್ಮಾನದಿಂದ ಎಡಗೈ ಮಾದಿಗ ಸಮುದಾಯದಿಂದ ಶೇ.1 ರಷ್ಟು ಮೀಸಲು ಕಸಿದುಕೊಳ್ಳಲಾಗಿದೆ'' ಎಂದು ಆರೋಪಿಸಿದರು.

''ಸಿಎಂ ಸಿದ್ದರಾಮಯ್ಯ ನೇತೃತ್ವದ ಸರಕಾರವು ಎಲ್ಲಾ ಉಪಜಾತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಸ್ಸಿಗಳಿಗೆ ಮೊದಲು ನಿಗದಿಯಾಗಿದ್ದ ಶೇ.15 ರಷ್ಟು ಮೀಸಲು ಪ್ರಮಾಣದಲ್ಲಿಯೇ ಒಳ ಮೀಸಲು ಹಂಚಿಕೆ ಮಾಡಿದೆ. ಸರಕಾರವು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚಿಸಿ, ಸಮೀಕ್ಷೆ ಆಧಾರದಲ್ಲಿ ಮೀಸಲು ಪ್ರಮಾಣ ಪರಿಷ್ಕರಿಸಲು ಮುಂದಾಗಿರುವುದು ಸಮಾಧಾನ ತಂದಿಲ್ಲ. ಆದರೂ ತಾತ್ಕಾಲಿಕವಾಗಿ ನಮ್ಮ ಹೋರಾಟವನ್ನು ಸ್ಥಗಿತಗೊಳಿಸುತ್ತೇವೆ'' ಎಂದು ಹೇಳಿದರು.

''ಸಚಿವ ಸಂಪುಟದ ಸಭೆಯ ತೀರ್ಮಾನವನ್ನ ಸ್ವಾಗತಿಸುತ್ತೇವೆ. ಆದರೆ, ನಮ್ಮ ಸಮುದಾಯಕ್ಕೆ ಸಮಾಧಾನ ಆಗಿಲ್ಲ. ಈಗ ಹಂಚಿಕೆಯಾಗಿರುವ ಒಳ ಮೀಸಲು ಅನ್ವಯವೇ ಖಾಲಿ ಹುದ್ದೆಗಳನ್ನು ಭರ್ತಿಗೆ ತೀರ್ಮಾನ ಕೈಗೊಳ್ಳಬೇಕು'' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಎಚ್. ಮಲ್ಲೇಶ್, ಸಿ.ಬಸವರಾಜ್, ಎಸ್.ಎಚ್. ದುರ್ಗೇಶ್, ಎಚ್.ಸಿ. ಗುಡ್ಡಪ್ಪ, ಹಾಲೇಶ್, ರಾಮಚಂದ್ರಪ್ಪ ನರಗನಹಳ್ಳಿ, ರಾಘವೇಂದ್ರ ಕಡೆಮನೆ, ರವಿ ಕೆಟಿಜೆ ನಗರ, ಮಲ್ಲಿಕಾರ್ಜುನ ವಂದಾಲಿ, ಮೈಲಾರಪ್ಪ ನರಗನಹಳ್ಳಿ, ದಾಸಪ್ಪ, ಜಗಳೂರು ಕುಬೇರಪ್ಪ, ಗೌರಿಪುರ ಪ್ರಶಾಂತ್, ದುಗ್ಗಪ್ಪ ಕೆಟಿಜೆ ನಗರ ಮತ್ತಿತರರಿದ್ದರು.

ಅಣ್ಣಾವ್ರ ಹುಟ್ಟುಹಬ್ಬದ ಸಂಭ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟದ ವತಿಯಿಂದ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸಹಯೋಗದೊಂದಿಗೆ ನಗರದ ಜೀವನಹಳ್ಳಿಯಲ್ಲಿ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ''ಇಂದು ನಾನು ಕಿಂಚಿತ್ತಾದರೂ ಸಾಧಿಸಿದ್ದರೆ ಡಾ.ರಾಜ್ ಅವರೊಂದಿಗಿನ ಒಡನಾಟವೇ ಕಾರಣ,'' ಎಂದರು.

ಇದೇ ವೇಳೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಮಕ್ಕಳಿಗೆ ಚಿತ್ರ ಕಲಾ ಸ್ಪರ್ಧೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಡಾ. ರಾಜ್‌ಕುಮಾರ್ ಕುರಿತು ಬರೆದಿರುವ ಒಂದು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ವಿಜೇತರಿಗೆ ಮತ್ತು ಸಾರ್ವಜನಿಕರಿಗೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಉದ್ಯಮಿ ಡಿ ಎಸ್. ಮ್ಯಾಕ್ಸ್ ಪ್ರಾಪರ್ಟೀಸ್‌ನ ಎಸ್.ಪಿ. ದಯಾನಂದ, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ. ಜಗನ್ನಾಥರೆಡ್ಡಿ, ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು ಉಪಸ್ಥಿತರಿದ್ದರು.

ಕಂಚಿನ ಪ್ರತಿಮೆ ಅನಾವರಣ

ಜಯನಗರ ಮಯ್ಯಾಸ್ ಹೋಟೆಲ್ ಎದುರು ಡಾ.ರಾಜ್‌ಕುಮಾರ್ ಸಮಿತಿ ವತಿಯಿಂದ ಜಯನಗರ ಡಾ.ರಾಜ್ ಕುಮಾರ್ ಉತ್ಸವ-2026 ಮತ್ತು ಡಾ. ರಾಜ್ ಕುಮಾರ್ ಕಂಚಿನ ಪುತ್ಥಳಿ ಅನಾವರಣಗೊಳಿಸಲಾಯಿತು. ಹಿರಿಯ ನಟ ಶಿವರಾಜ್ ಕುಮಾರ್ ಮತ್ತು ಗೀತಾ ಶಿವರಾಜ್ ಕುಮಾರ್ ಅವರು ಡಾ. ರಾಜ್ ಅವರ ಕಂಚಿನ ಪುತ್ಥಳಿ ಅನಾವರಣ ಮಾಡಿದರು. ಕೆಪಿಸಿಸಿ ಮಹಿಳಾ ವಿಭಾಗದ ಅಧ್ಯಕ್ಷೆ ಸೌಮ್ಯಾರೆಡ್ಡಿ, ಜಯನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಎನ್. ನಾಗರಾಜು ಉಪಸ್ಥಿತರಿದ್ದರು.

ರಾಜ್ ಚಿತ್ರಗಳು ಯುವ ಜನರಿಗೆ ಪಾಠ: ಸಚಿವೆ ಶೋಭಾ

ಡಾ.ರಾಜ್ ಕುಮಾರ್ ಅವರ ಚಲನಚಿತ್ರಗಳು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರಲಿಲ್ಲ, ಅವು ಯುವ ಜನರಿಗೆ ನಮ್ಮ ಸಂಸ್ಕೃತಿ, ಆಚಾರ-ವಿಚಾರ ಹೇಗಿರಬೇಕು ಎಂಬುದನ್ನು ಹೇಳಿಕೊಡುವ ಪಾಠವಾಗಿತ್ತು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕಂಠೀರವ ಸ್ಟುಡಿಯೋದಲ್ಲಿರುವ ಡಾ. ರಾಜ್ ಕುಮಾರ್ ಅವರ ಪುಣ್ಯಭೂಮಿ ಬಳಿ ಆಯೋಜಿಸಿದ್ದ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಾಸಕ ಕೆ. ಗೋಪಾಲಯ್ಯ ,ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ,ಡಾ. ರಾಜ್ ಕುಮಾರ್ ಸಮಗ್ರ ಚರಿತ್ರೆ ಕೃತಿಕಾರರಾದ ದೊಡ್ಡಹುಲ್ಲೂರು ರುಕ್ಕೋಜಿ, ವಾರ್ತಾ ಇಲಾಖೆಯ ಕಾರ್ಯದರ್ಶಿ ಬಿ.ಬಿ. ಕಾವೇರಿ, ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಕಂಠೀರವ ಸ್ಟುಡಿಯೊ ಅಧ್ಯಕ್ಷ ಮಹಬೂಬ್ ಪಾಷ, ನಟ ರಾಘವೇಂದ್ರ ರಾಜಕುಮಾರ್, ಮಾಜಿ ಶಾಸಕ ನೆ.ಲ.ನರೇಂದ್ರಬಾಬು, ಸಾಹಿತಿ ಬರಗೂರು ರಾಮಚಂದ್ರಪ್ಪ ಉಪಸ್ಥಿತರಿದ್ದರು.

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	6	5	0	1	11	+1.420
ಬೆಂಗಳೂರು	7	5	2	0	10	+1.101
ರಾಜಸ್ಥಾನ	7	5	2	0	10	+0.790
ಹೈದರಾಬಾದ್	7	4	3	0	8	+0.820
ಚೆನ್ನೈ	7	3	4	0	6	+0.118
ಡೆಲ್ಲಿ	6	3	3	0	6	-0.130
ಗುಜರಾತ್	7	3	4	0	6	-0.790
ಮುಂಬಯಿ	7	2	5	0	4	-0.736
ಲಖನೌ	7	2	5	0	4	-1.277
ಕೋಲ್ಕೊತಾ	7	1	5	1	3	-0.879

328 ರನ್ **ವಿರಾಟ್ ಕೊಹ್ಲಿ** ರಾಯಲ್ ಚಾಲೆಂಜರ್ಸ್ ಬೆಂಗಳೂರು

14 ವಿಕೆಟ್ **ಅಂಶುಲ್ ಕಾಂಬೋಜ್** ಚೆನ್ನೈ ಸೂಪರ್ ಕಿಂಗ್ಸ್

ಗುಜರಾತ್ ಟೈಟನ್ಸ್ ವಿರುದ್ಧ 5 ವಿಕೆಟ್ ಜಯ | ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್ ಅರ್ಧ ಶತಕ

ಮತ್ತೆ ಆರ್‌ಸಿಬಿ ಗೆಲುವಿನ ನಗೆ

ಕೆ.ಎಸ್. ಶ್ರೀಧರ್

ಬೆಂಗಳೂರು: ವಿರಾಟ್ ಕೊಹ್ಲಿ, ಪಡಿಕ್ಕಲ್ ಅವರ ಅರ್ಧಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಗುಜರಾತ್ ಟೈಟನ್ಸ್ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿತು. ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತವರಿನ ಪ್ರೇಕ್ಷಕರೆದುರು ನಡೆದ ಪಂದ್ಯದಲ್ಲಿ ಗುಜರಾತ್ ನೀಡಿದ 206 ರನ್ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ 18.5 ಓವರ್‌ಗಳಲ್ಲಿ 5 ವಿಕೆಟ್‌ಗೆ 206 ರನ್ ಗಳಿಸಿ ಗುರಿ ಮುಟ್ಟಿತು.

ಆರ್‌ಸಿಬಿ ಮೊತ್ತ 29 ರನ್‌ಗಳಾಗಿದ್ದಾಗ ಆರಂಭಿಕ ಬ್ಯಾಟರ್ ಬೆಥೆಲ್ ರೂಪದಲ್ಲಿ ತಂಡ ಮೊದಲ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. ಆದರೆ ನಂತರ ವಿರಾಟ್ ಕೊಹ್ಲಿ ಮತ್ತು ಪಡಿಕ್ಕಲ್ ಉತ್ತಮ ಜತೆಯಾಟ ನೀಡುವ ಮೂಲಕ ತಂಡಕ್ಕೆ ಆಧಾರಸ್ತಂಭವಾದರು. ಕೊಹ್ಲಿ ಔಟಾಗುವುದಕ್ಕೂ ಮುನ್ನ 81 ರನ್ ಸಿಡಿಸಿದರೆ, ಪಡಿಕ್ಕಲ್ 55 ರನ್ ಗಳಿಸಿದರು. ಕೊನೆಯಲ್ಲಿ ಟಿಮ್ ಡೇವಿಡ್, ಕೃಣಾಲ್ ಪಾಂಡ್ಯ ತಂಡವನ್ನು ಗೆಲುವಿನ ದಡ ಸೇರಿಸಿದರು.

ಟಾಸ್ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಇದರ ಸದುಪಯೋಗ ಪಡಿಸಿಕೊಳ್ಳುವ ರೀತಿಯಲ್ಲಿ ಬ್ಯಾಟಿಂಗ್ ಪ್ರದರ್ಶಿಸಿದ ಗುಜರಾತ್ ಆರಂಭಿಕ ಬ್ಯಾಟರ್ ಜೋಡಿ ಉತ್ತಮ ಆರಂಭ ಒದಗಿಸಿದರು.

ಟಿ20 ಕ್ರಿಕೆಟ್ ಅಬ್ಬರದ ಆಟಕ್ಕೆ ಹೆಸರಾಗಿದ್ದರೂ, ಸುದರ್ಶನ್ ತಮ್ಮ ಸಾಂಪ್ರದಾಯಿಕ ಬ್ಯಾಟಿಂಗ್ ಶೈಲಿಯ ಮೂಲಕವೇ ರನ್ ಮಳೆ ಹರಿಸಿದರು. ಕೇವಲ 58 ಎಸೆತಗಳಲ್ಲಿ ಶತಕ ಪೂರೈಸಿದ ಅವರು, ಐಪಿಎಲ್‌ನಲ್ಲಿ ತಮ್ಮ 3ನೇ ಶತಕ ದಾಖಲಿಸಿದರು. ಅಷ್ಟೇ ಅಲ್ಲದೆ, ಐಪಿಎಲ್ ಇತಿಹಾಸದಲ್ಲಿ ಅತಿ ವೇಗವಾಗಿ 2000 ರನ್ ಪೂರೈಸಿದ ಸಾಧನೆಗೂ ಪಾತ್ರರಾದರು.

ಆರಂಭಿಕ ಓವರ್‌ಗಳಲ್ಲಿ ನಾಯಕ ಶುಬ್ಮನ್ ಗಿಲ್ (32) ಅವರಿಗಿಂತ ಹೆಚ್ಚು ಎಸೆತಗಳನ್ನು ಎದುರಿಸಿದ ಸುದರ್ಶನ್, ಪವರ್ ಪ್ಲೇನಲ್ಲೇ 46 ರನ್ ಸಿಡಿಸಿದರು. 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಅವರು, ಮುಂದಿನ 50 ರನ್‌ಗಳನ್ನು ಕೇವಲ 24 ಎಸೆತಗಳಲ್ಲಿ ಸಿಡಿಸಿದರು.

ಆರ್‌ಸಿಬಿ ಬೌಲರ್‌ಗಳ ಸಂಕಷ್ಟ: ಸುದರ್ಶನ್ ಅವರು ಆರ್‌ಸಿಬಿ ಸ್ಪಿನ್ ಜೋಡಿಯಾದ ಕೃಣಾಲ್ ಪಾಂಡ್ಯ ಮತ್ತು ಸುಯಶ್ ಶರ್ಮಾ ಅವರ ದಾಳಿಯನ್ನು ಚಾಣಾಕ್ಷತನದಿಂದ ಎದುರಿಸಿದರು. ಕೃಣಾಲ್ ಎಸೆದ ಬೌನ್ಸರ್ ಅನ್ನು ಸಿಕ್ಸರ್ ಸಿಡಿಸಿದ ಅವರು, ನಂತರ ಸತತ ಬೌಂಡರಿಗಳ ಮೂಲಕ ಅಬ್ಬರಿಸಿದರು. 91 ರನ್ ಗಳಿಸಿದ್ದಾಗ ಸುಯಶ್ ಶರ್ಮಾ ಕ್ಯಾಚ್ ಕೈಬಿಡುವ ಮೂಲಕ ಸುದರ್ಶನ್‌ರಿಗೆ ಜೀವದಾನ ನೀಡಿದರು. ಇದರ ಸದುಪಯೋಗ ಪಡಿಸಿಕೊಂಡ ಸುದರ್ಶನ್ ಅಂತಿಮವಾಗಿ 100 ರನ್ ಗಳಿಸಿ ಜೋಶ್ ಹೇಜಲ್‌ವುಡ್‌ರಿಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ಅಂತಿಮ ಹಂತದಲ್ಲಿ ಕಂಬ್ಯಾಕ್: ಸುದರ್ಶನ್ ವಿಕೆಟ್ ಪತನದ ನಂತರ ಗುಜರಾತ್ ತಂಡ ಅಂತಿಮ 3 ಓವರ್‌ಗಳಲ್ಲಿ ಕೇವಲ 31 ರನ್ ಗಳಿಸಲಷ್ಟೇ ಶಕ್ತವಾಯಿತು. ಆರ್‌ಸಿಬಿ ಬೌಲರ್‌ಗಳು ಆರಂಭದಲ್ಲಿ ಎದುರಾಳಿ ಬ್ಯಾಟರ್‌ಗಳ ಪಡೆಯನ್ನು ನಿಯಂತ್ರಿಸಲು ತಿಣುಕಾಡಿದರೂ ಡೆತ್ ಓವರ್‌ಗಳಲ್ಲಿ ಉತ್ತಮ ದಾಳಿ ಸಂಘಟಿಸುವ ಮೂಲಕ ಕಂಬ್ಯಾಕ್ ಮಾಡಿದರು.

ವಿರಾಟ್ ಕೊಹ್ಲಿ

ಸ್ಕೋರ್ ವಿವರ

ಗುಜರಾತ್ ಟೈಟನ್ಸ್

20 ಓವರ್‌ಗಳಲ್ಲಿ 3 ವಿಕೆಟ್‌ಗೆ 205

ಸುದರ್ಶನ್ ಸಿ ಮತ್ತು ಬಿ ಹೇಜಲ್‌ವುಡ್	100
ಗಿಲ್ ಸಿ ಪಡಿಕ್ಕಲ್ ಬಿ ಸುಯಾಶ್ ಶರ್ಮಾ	32
ಬಟ್ಲರ್ ಸಿ ಹೇಜಲ್‌ವುಡ್ ಬಿ ಭುವನೇಶ್ವರ್	25
ವಾಷಿಂಗ್ಟನ್ ಸುಂದರ್ ಔಟಾಗದೇ	19
ಜೇಸನ್ ಹೋಲ್ಡರ್ ಔಟಾಗದೇ	23
ಇತರೆ: (ವೈಡ್ 3, ಲೆಗ್ ಬೈ 3)	06

ವಿಕೆಟ್ ಪತನ: 1- 128, 2-160, 3- 177

ಬೌಲಿಂಗ್ ವಿವರ

ಭುವನೇಶ್ವರ್ ಕುಮಾರ್	4	0	31	1
ಜೋಶ್ ಹೇಜಲ್‌ವುಡ್	4	0	40	1
ರಸಿಖ್‌ದಾರ್	3	0	28	0
ಕೃಣಾಲ್ ಪಾಂಡ್ಯ	4	0	50	0
ರೊಮಾರಿಯೋ ಶೆಫರ್ಡ್	1	0	17	0
ಸುಯಶ್ ಶರ್ಮಾ	4	0	36	1

ರಾಯಲ್ ಚಾಲೆಂಜರ್ಸ್ ಬೆಂಗಳೂರು

18.5 ಓವರ್‌ಗಳಲ್ಲಿ 5 ವಿಕೆಟ್‌ಗೆ 206

ಬೆಥೆಲ್ ಸಿ ಶಾರೂಖ್ ಖಾನ್ ಬಿ ಸಿರಾಜ್	14
ವಿರಾಟ್ ಕೊಹ್ಲಿ ಬಿ ಹೋಲ್ಡರ್	81
ದೇವದತ್ ಪಡಿಕ್ಕಲ್ ಬಿ ರಶೀದ್ ಖಾನ್	55
ಪಾಟೀದಾರ್ ಸಿ ಸುಂದರ್ ಬಿ ಸುತರ್	08
ಜಿತೇಶ್ ಶರ್ಮ ಸಿ ಸುತರ್ ಬಿ ರಶೀದ್ ಖಾನ್	10
ಟಿಮ್ ಡೇವಿಡ್ ಔಟಾಗದೇ	10
ಕೃಣಾಲ್ ಪಾಂಡ್ಯ ಔಟಾಗದೇ	23
ಇತರೆ: (ವೈಡ್ 3, ಲೆಗ್ ಬೈ 2)	05

ವಿಕೆಟ್ ಪತನ: 1- 26, 2-141, 3- 154, 4-171, 5-173

ಬೌಲಿಂಗ್ ವಿವರ

ಮೊಹಮ್ಮದ್ ಸಿರಾಜ್	3	0	25	1
ಕಗಿಸೊ ರಬಾಡ	4	0	45	0
ಜೇಸನ್ ಹೋಲ್ಡರ್	3.5	0	35	1
ಪ್ರಸಿದ್ಧಕೃಷ್ಣ	2	0	31	0
ರಶೀದ್ ಖಾನ್	4	0	49	2
ಮಾನವ್ ಸುತರ್	2	0	19	1

ಕೊಹ್ಲಿ ವಿರಾಟ ದಾಖಲೆಗಳ ಪರ್ವ

800 ಫೋರ್

ಐಪಿಎಲ್ ಇತಿಹಾಸದಲ್ಲಿ 800 ಫೋರ್‌ಗಳನ್ನು ಸಿಡಿಸಿದ ಮೊದಲ ಬ್ಯಾಟರ್ ಎನ್ನುವ ದಾಖಲೆಗೆ ವಿರಾಟ್ ಕೊಹ್ಲಿ ಪಾತ್ರರಾಗಿದ್ದಾರೆ. ಕಗಿಸೊ ರಬಾಡ ಅವರ ಎಸೆತವನ್ನು ಬೌಂಡರಿಗೆ ಅಟ್ಟುವ ಮೂಲಕ ಅವರು ಈ ದಾಖಲೆ ಬರೆದರು.

300 ಸಿಕ್ಸರ್ ಮೈಲಿಗಲ್ಲು

ಅಭಿಮಾನಿಗಳ ಮಹದಾಸೆಯಂತೆ ಕೊಹ್ಲಿ ಶುಕ್ರವಾರ 300ನೇ ಸಿಕ್ಸರ್ ದಾಖಲೆಯನ್ನೂ ಪೂರೈಸಿದರು. ಆ ಮೂಲಕ ಐಪಿಎಲ್‌ನಲ್ಲಿ 300 ಸಿಕ್ಸರ್ ಸಿಡಿಸಿದ ಮೂರನೇ ಆಟಗಾರ ಎನ್ನುವ ಖ್ಯಾತಿಗೆ ರನ್ ಮಷಿನ್ ಪಾತ್ರರಾದರು. ಮೊದಲೆರಡು ಸ್ಥಾನಗಳಲ್ಲಿ ಕ್ರಮವಾಗಿ ಕ್ರಿಸ್ ಗೇಲ್ (357), ರೋಹಿತ್ ಶರ್ಮ (309) ಇದ್ದಾರೆ. ಕೊಹ್ಲಿ, ಒಂದೇ ತಂಡದ ಪರ 300 ಸಿಕ್ಸರ್ ಸಿಡಿಸಿದ ಜಗತ್ತಿನ ಮೊದಲ ಬ್ಯಾಟರ್ ಎನ್ನುವ ದಾಖಲೆಯನ್ನೂ ಶುಕ್ರವಾರ ಬರೆದರು.

ಪಂಜಾಬ್ ಅಜೇಯ ಓಟಕ್ಕೆ ತಡೆ ಹಾಕುವುದೇ ಡೆಲ್ಲಿ?

ಹೊಸದಿಲ್ಲಿ: ಐಪಿಎಲ್‌ನಲ್ಲಿ ಶನಿವಾರ ಡಬಲ್ ಹೆಡರ್ ಪಂದ್ಯಗಳಿದ್ದು ಮೊದಲ ಪಂದ್ಯದಲ್ಲಿ ಫಾರ್ಮ್‌ನಲ್ಲಿರುವ ಪಂಜಾಬ್ ಕಿಂಗ್ಸ್ ತಂಡ ಆತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಪ್ರಸ್ತುತ ಅಂಕಪಟ್ಟಿಯಲ್ಲಿ ಪಂಜಾಬ್ ಅಗ್ರಸ್ಥಾನದಲ್ಲಿದ್ದು ಈವರೆಗೆ ಸೋಲನ್ನೇ ಕಂಡಿಲ್ಲ. ಮತ್ತೊಂದೆಡೆ, ಡೆಲ್ಲಿ ಕ್ಯಾಪಿಟಲ್ಸ್ 6 ಪಂದ್ಯಗಳ ಪೈಕಿ ಮೂರು ಸೋಲುಗಳೊಂದಿಗೆ ಆರನೇ ಸ್ಥಾನಕ್ಕೆ ಕುಸಿದಿದ್ದು ಪುಟಿದೇಳಲು ಹೋರಾಡುತ್ತಿದೆ.

ಇಂದು ಕ್ಯಾಪಿಟಲ್ಸ್‌ಗೆ ಅಯ್ಯರ್ ಪಡೆಯ ಸವಾಲು

ಡೆಲ್ಲಿ ತಂಡದ ಬ್ಯಾಟಿಂಗ್ ವಿಭಾಗವು ಸ್ಥಿರತೆಯ ಕೊರತೆಯಿಂದ ಬಳಲುತ್ತಿದೆ. ನಾಯಕ ಅಕ್ಷರ್ ಪಟೇಲ್ ಅವರ ನಾಯಕತ್ವ ಮತ್ತು ತಾಂತ್ರಿಕ ನಿರ್ಧಾರಗಳು ಟೀಕೆಗೆ ಒಳಗಾಗಿವೆ. ಕಳೆದ ಪಂದ್ಯದಲ್ಲಿ ಫೀಲ್ಡಿಂಗ್ ತಪ್ಪುಗಳು ಮತ್ತು ಬೌಲಿಂಗ್‌ನಲ್ಲಿನ ಆಕ್ರಮಣಕಾರಿ ಮನೋಭಾವದ ಕೊರತೆ ತಂಡಕ್ಕೆ ಹಿನ್ನಡೆಯಾಗಿ ಪರಿಣಮಿಸಿತ್ತು.

ಇದಕ್ಕೆ ವ್ಯತಿರಿಕ್ತವಾಗಿ, ಪಂಜಾಬ್ ಕಿಂಗ್ಸ್ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅತ್ಯಂತ ಬಲಿಷ್ಠವಾಗಿ ಕಾಣುತ್ತಿದೆ. ಆರಂಭಿಕ ಆಟಗಾರ ಪ್ರಭ್‌ಸಿಮ್ರನ್ ಸಿಂಗ್ ಮತ್ತು ನಾಯಕ ಶ್ರೇಯಸ್ ಅಯ್ಯರ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ಅರ್ಷ್‌ದೀಪ್ ಸಿಂಗ್ ಮತ್ತು ಯಜುವೇಂದ್ರ ಚಹಲ್ ಅವರನ್ನೊಳಗೊಂಡ ಬೌಲಿಂಗ್ ಪಡೆ ಸಂಘಟಿತ ಪ್ರದರ್ಶನದಿಂದ ತಂಡಕ್ಕೆ ಬಲ ತುಂಬಿದೆ. ಸೋಲಿಲ್ಲದ ಸರದಾರನಂತೆ ಮುನ್ನುಗ್ಗುತ್ತಿರುವ ಪಂಜಾಬ್ ಅನ್ನು ತಡೆಯಲು ಡೆಲ್ಲಿ ತಂಡವು ಅಸಾಧಾರಣ ಪ್ರದರ್ಶನ ನೀಡಬೇಕಾದ ಅನಿವಾರ್ಯತೆ ಇದೆ.

ಡೆಲ್ಲಿ ತಂಡದ ನಾಯಕ ಅಕ್ಸರ್ ಪಟೇಲ್

ಪಂದ್ಯ : ಅರುಣ್ ಜೇಟ್ಲಿ ಕ್ರೀಡಾಂಗಣ, ಹೊಸದಿಲ್ಲಿ
ಸಮಯ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಸನ್‌ರೈಸರ್ಸ್ ವಿರುದ್ಧ ಪ್ರತೀಕಾರದ ನಿರೀಕ್ಷೆಯಲ್ಲಿ ರಾಯಲ್ಸ್

ಜೈಪುರ: ಶನಿವಾರ ಐಪಿಎಲ್ ಡಬಲ್ ಹೆಡರ್‌ನ ಎರಡನೇ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡ ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ರಾಯಲ್ಸ್ ಪಡೆಯು ಏಪ್ರಿಲ್ 13ರಂದು ನಡೆದ ಮೊದಲ ಮುಖಾಮುಖಿಯಲ್ಲಿ ಹೈದರಾಬಾದ್ ವಿರುದ್ಧ ಅನುಭವಿಸಿದ 57 ರನ್‌ಗಳ ಹೀನಾಯ ಸೋಲಿಗೆ ಪ್ರತೀಕಾರ ತೀರಿಸಿಕೊಳ್ಳುವ ತವಕದಲ್ಲಿದೆ.

ಇಂದು ರಾಜಸ್ಥಾನ ರಾಯಲ್ಸ್- ಸನ್‌ರೈಸರ್ಸ್ ಸೆಣಸು

ಪ್ರಸ್ತುತ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರಾಜಸ್ಥಾನ ರಾಯಲ್ಸ್ ಅತ್ಯುತ್ತಮ ಫಾರ್ಮ್‌ನಲ್ಲಿದೆ. 15 ವರ್ಷದ ಯುವ ಪ್ರತಿಭೆ ವೈಭವ್ ಸೂರ್ಯವಂಶಿ ಎಂದಿನಂತೆ ತಂಡದ ಪ್ರಮುಖ ಆಕರ್ಷಣೆ ಎನಿಸಿದ್ದಾರೆ. 220.86ರ ಸ್ಟ್ರೈಕ್‌ರೇಟ್‌ನಲ್ಲಿ 254 ರನ್ ಗಳಿಸಿರುವ ಸೂರ್ಯವಂಶಿ ತಂಡದ ಪರ ಅತಿ ಹೆಚ್ಚು ರನ್ ಕಲೆಹಾಕಿದ ಆಟಗಾರರಾಗಿದ್ದಾರೆ. ಅವರಿಗೆ ಯಶಸ್ವಿ ಜೈಸ್ವಾಲ್ (245 ರನ್) ಸಾಥ್ ನೀಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಜೋಫ್ರಾ ಆರ್ಚರ್ 11 ವಿಕೆಟ್ ಪಡೆದು ಮಿಂಚುತ್ತಿದ್ದರೆ, ಆಲ್‌ರೌಂಡರ್ ರವೀಂದ್ರ ಜಡೇಜಾ ಕಳೆದ ಪಂದ್ಯದ ಗೆಲುವಿನ ನಂತರ ಆತ್ಮವಿಶ್ವಾಸದಲ್ಲಿದ್ದಾರೆ.

ಮತ್ತೊಂದೆಡೆ, ನಾಲ್ಕನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ತನ್ನ ಸ್ಫೋಟಕ ಬ್ಯಾಟಿಂಗ್ ಮೇಲೆ ನಂಬಿಕೆ ಇರಿಸಿದೆ. ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರಂತಹ ಬ್ಯಾಟರ್‌ಗಳು ತಂಡದ ಶಕ್ತಿಯಾಗಿದ್ದಾರೆ. ಬೌಲಿಂಗ್‌ನಲ್ಲಿ ಪ್ರಫುಲ್ ಹಿಂಜೆ ಮತ್ತು ಸಾಕಿಬ್ ಹುಸೇನ್ ಅವರಂತಹ ಯುವ ಆಟಗಾರರಿದ್ದರೂ, ನಾಯಕ ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ಅನುಭವದ ಕೊರತೆ ಎದ್ದು ಕಾಣುತ್ತಿದೆ. ತನ್ನ ತವರು ಮೈದಾನದಲ್ಲಿ ರಾಜಸ್ಥಾನ ರಾಯಲ್ಸ್ ಮೇಲುಗೈ ಸಾಧಿಸುತ್ತದೆಯೇ ಅಥವಾ ಹೈದರಾಬಾದ್ ಮತ್ತೊಮ್ಮೆ ವಿಜಯ ಪತಾಕೆ ಹಾರಿಸುತ್ತದೆಯೇ ಎಂಬುದು ಕುತೂಹಲ ಮೂಡಿಸಿದೆ. ಪಂದ್ಯವು ಸಂಜೆ 7.30ಕ್ಕೆ ಆರಂಭವಾಗಲಿದೆ.

ಪಂದ್ಯ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ
ಸಮಯ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಭ್ಯಾಸದ ವೇಳೆ ಸಹಾಯಕ ಸಿಬ್ಬಂದಿ ಜತೆ ವೈಭವ್.

ದಿವ್ಯಾಂಶು- ಶಾಂಭವಿ ಜೋಡಿಗೆ ವಿಶ್ವದಾಖಲೆಯ ಚಿನ್ನ

ಕೈರೊ: ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್‌ಗಳಾದ ದಿವ್ಯಾಂಶು ದೇವಾಂಗನ್ ಮತ್ತು ಶಾಂಭವಿ ಕ್ಷೀರಸಾಗರ್ ಜೋಡಿಗೆ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಈ ಜೋಡಿಯು 499.9 ಅಂಕ ಗಳಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಿರುವುದು ವಿಶೇಷ. ಚೈನೀಸ್ ತೈಪೆ ಹಾಗೂ ಫ್ರಾನ್ಸ್ ಸ್ಪರ್ಧಿಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಭಾಜನವಾದರು.

ಜೂನಿಯರ್ ಶೂಟಿಂಗ್ ವಿಶ್ವಕಪ್

ಈ ಗೆಲುವಿನೊಂದಿಗೆ ಭಾರತ ಈ ಕೂಟದಲ್ಲಿ ನಾಲ್ಕನೇ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದೆ. ಪ್ರಸ್ತುತ ಭಾರತ 4 ಚಿನ್ನ, 5 ಬೆಳ್ಳಿ ಮತ್ತು 3 ಕಂಚು ಸೇರಿದಂತೆ ಒಟ್ಟು 12 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಇನ್ನೂ ಎರಡು ದಿನಗಳ ಕಾಲ ಸ್ಪರ್ಧೆ ನಡೆಯಲಿದೆ.ಇದೇ ವೇಳೆ 25 ಮೀ. ರಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಸಮೀರ್ ಏಳನೇ ಸ್ಥಾನ ಗಳಿಸಿದರು.

ಕೆನಡಾ ವಿರುದ್ಧ ಭಾರತಕ್ಕೆ ಜಯ

ಹಾರ್ಸೆನ್ಸ್(ಡೆನ್ಮಾರ್ಕ್): ಥಾಮಸ್ ಕಪ್ ಫೈನಲ್ಸ್‌ನ 'ಎ' ಗುಂಪಿನ ಆರಂಭಿಕ ಪಂದ್ಯದಲ್ಲಿ ಮಾಜಿ ಚಾಂಪಿಯನ್ ಭಾರತ ತಂಡವು ಕೆನಡಾ ವಿರುದ್ಧ 4-1 ಅಂತರದ ಭರ್ಜರಿ ಜಯ ದಾಖಲಿಸಿದೆ.

ಮೊದಲ ಪಂದ್ಯದಲ್ಲಿ ಲಕ್ಷ್ಯ ಸೇನ್ ಅವರು ವಿಶ್ವದ 13ನೇ ಶ್ರೇಯಾಂಕಿತ ವಿಕ್ಟರ್ ಲೈ ವಿರುದ್ಧ 21-18, 19-21, 10-21 ಗೇಮ್‌ಗಳಿಂದ ಹೋರಾಡಿ ಸೋಲನ್ನಪ್ಪಿದರು. ಇದು ಕೆನಡಾಗೆ ಆರಂಭಿಕ ಮುನ್ನಡೆ ತಂದುಕೊಟ್ಟಿತು. ವಿಶ್ವದ 4ನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಜೊನಾಥನ್ ಬಿಂಗ್ ತ್ಸಾನ್ ಲೈ ಮತ್ತು ಕೆವಿನ್ ಲೀ ವಿರುದ್ಧ 21-10, 21-11 ಅಂತರದ ಸುಲಭ ಜಯ ಸಾಧಿಸಿ ಸಮಬಲ ತಂದರು. ಬಳಿಕ 20 ವರ್ಷದ ಯುವ ಆಟಗಾರ ಆಯುಷ್ ಶೆಟ್ಟಿ, ಹರಿಹರನ್ ಅಮ್ಸಕರುಣನ್ ಮತ್ತು ಎಂ.ಆರ್. ಅರ್ಜುನ್ ಜೋಡಿಯು ಗೆಲುವು ಸಾಧಿಸಿ ಭಾರತದ ಗೆಲುವಿನ ಮುನ್ನಡೆಯನ್ನು 3-1ಕ್ಕೆ ಹೆಚ್ಚಿಸಿದರು.

ವಿಶ್ವಕಪ್ ಫುಟ್‌ಬಾಲ್ ಫೈನಲ್ ಟಿಕೆಟ್‌ವೊಂದಕ್ಕೆ ₹21 ಕೋಟಿ!

ರೀಸೇಲ್: ಕಡಿಮೆ ದರವೇ ₹9.14 ಲಕ್ಷ

ವಾಷಿಂಗ್ಟನ್: ಫಿಫಾ ವಿಶ್ವಕಪ್ ಫುಟ್‌ಬಾಲ್ ಫೈನಲ್ ಪಂದ್ಯದ ಕ್ರೇಜ್ ಅಕ್ಷರಶಃ ಗಗನಕ್ಕೇರಿದ್ದು, ಅಂತಿಮ ಹಣಾಹಣಿಯ 4 ಟಿಕೆಟ್‌ಗಳಿಗೆ ಬೆಲೆ ತಲಾ 21 ಕೋಟಿ ರೂ. ನಿಗದಿಪಡಿಸಲಾಗಿದೆ. ಫಿಫಾದ ಅಧಿಕೃತ ಮರುಮಾರಾಟ (ರೀಸೇಲ್) ಜಾಲತಾಣದಲ್ಲಿ ಜುಲೈ 19ರಂದು ನ್ಯೂಜೆರ್ಸಿಯ ಮೆಟ್‌ಲೈಫ್ ಸ್ಟೇಡಿಯಂನಲ್ಲಿ ನಡೆಯಲಿರುವ ಫೈನಲ್ ಪಂದ್ಯದ ನಾಲ್ಕು ಟಿಕೆಟ್‌ಗಳನ್ನು ಹರಾಜಿಗೆ ಇಡಲಾಗಿದೆ.

19 ಕೋಟಿ ರೂ. ಬೆಲೆಯ ಆಸನಗಳು ಕ್ರೀಡಾಂಗಣದ ಕೆಳಭಾಗದ ಬ್ಲಾಕ್ 124ರಲ್ಲಿ ನೆಲೆಗೊಂಡಿದೆ. ರೀಸೇಲ್ ಮಾರುಕಟ್ಟೆಯಲ್ಲಿನ ಬೆಲೆಗಳನ್ನು ಫಿಫಾ ನಿಯಂತ್ರಿಸುವುದಿಲ್ಲ, ಆದರೆ, ಪ್ರತಿ ಟಿಕೆಟ್ ಖರೀದಿದಾರರಿಂದ ಶೇ.15 ಮತ್ತು ಮಾರಾಟಗಾರರಿಂದ ಶೇ.15 ರಷ್ಟು ಶುಲ್ಕವನ್ನು ಫಿಫಾ ಪಡೆಯುತ್ತದೆ. ಕ್ರೀಡಾಂಗಣದ ಅತ್ಯಂತ ಮೇಲ್ಭಾಗದ ಸೀಟುಗಳ ಬೆಲೆ 1.15 ಕೋಟಿ ರೂ. ದಾಟಿದೆ. ಪ್ರಸ್ತುತ ಲಭ್ಯವಿರುವ ಅತ್ಯಂತ ಕಡಿಮೆ ಬೆಲೆಯ ಟಿಕೆಟ್ ದರ 9.14 ಲಕ್ಷ ರೂ. ಉತ್ತರ ಅಮೆರಿಕದ ಪ್ರಮುಖ ಕ್ರೀಡಾಕೂಟಗಳ ಮಾರುಕಟ್ಟೆ ಮಾನದಂಡಗಳ ಆಧಾರದ ಮೇಲೆ ಈ ಪರಿಯ ದುಬಾರಿ ಬೆಲೆ ಸಹಜ ಎಂದು ಫಿಫಾ ಬೆಲೆಯೇರಿಕೆಯನ್ನು ಸಮರ್ಥಿಸಿಕೊಂಡಿದೆ.

ಅಭಯ್ ಸಿಂಗ್, ನಿಪಮ್‌ಗೆ ಚಿನ್ನ

ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ಸ್ ಕ್ರೀಡಾಕೂಟ

ತುಮಕೂರು: 24ನೇ ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ಸ್ ಕ್ರೀಡಾಕೂಟದ ಪುರುಷ ಹಾಗೂ ಮಹಿಳೆಯ 100 ಮೀ. ವಿಭಾಗದಲ್ಲಿ ಅಭಯ್ ಸಿಂಗ್ ಮತ್ತು ನಿಪಮ್ ಸ್ವರ್ಣದ ಪದಕ ಗೆದ್ದುಕೊಂಡಿದ್ದಾರೆ.

ತುಮಕೂರು ಜಿಲ್ಲಾಡಳಿತ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ರೀಡಾಕೂಟದಲ್ಲಿ ಶುಕ್ರವಾರ ಜೂನಿಯರ್ ಪುರುಷರ 100 ಮೀ. ವಿಭಾಗದಲ್ಲಿ 10.41 ಸೆಕೆಂಡ್‌ನಲ್ಲಿ ಕ್ರಮಿಸಿದ ಅಭಯ್ ಸಿಂಗ್ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಯುವರಾಜ್ ಸಿಂಗ್ ಚಿಬ್ ಮತ್ತು ಅನ್ಸ ರಜಾಕ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು. ಮಹಿಳೆಯರ 100 ಮೀ. ವಿಭಾಗದಲ್ಲಿ ಉತ್ತರಪ್ರದೇಶದ ನಿಪಮ್ 11.53 ಸೆಕೆಂಡ್‌ನಲ್ಲಿ ಕ್ರಮಿಸಿ ಸ್ವರ್ಣದ ಪದಕ ಗೆದ್ದುಕೊಂಡರು. ತಮಿಳುನಾಡಿನ ಭಾವನಾ ಮತ್ತು ಗುಜರಾತ್‌ನ ಕಾಜಲ್ ಹೀರಾಭಾಯ್ ವಾಜಾ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಮಹಿಳೆಯರ ಪೋಲ್ ವಾಲ್ಟ್ ನಲ್ಲಿ 3.60 ಮೀ. ಜಿಗಿದ ತಮಿಳುನಾಡಿನ ಬಿ. ಸೌಂದರ್ಯ ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್ ಶಿಪ್‌ಗೆ ಅರ್ಹತೆ ಪಡೆದರು.

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು

ಉಗಾಂಡಾ ಸ್ಪರ್ಧಿಗಳಿಗೆ ಗೆಲುವಿನ ವಿಶ್ವಾಸ

ಬೆಂಗಳೂರು: ಪ್ರತಿಷ್ಠಿತ 18ನೇ ಆವೃತ್ತಿಯ ಟಿಸಿಎಸ್ ವರ್ಲ್ಡ್ 10ಕೆ ಓಟದಲ್ಲಿ ಉಗಾಂಡಾದ ಓಟಗಾರರು ಪ್ರಾಬಲ್ಯ ಸಾಧಿಸುವ ಉತ್ಸಾಹದಲ್ಲಿದ್ದಾರೆ. ಭಾನುವಾರ (ಏಪ್ರಿಲ್ 26) ನಡೆಯಲಿರುವ ಈ ರೇಸ್‌ನಲ್ಲಿ ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ಮತ್ತು ಹಾರ್ಬರ್ಟ್ ಕಿಬೆಟ್ ಉಗಾಂಡಾಗೆ ಅವಳಿ ಜಯ ತಂದುಕೊಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಳೆದ ಬಾರಿ ಬೆನ್ನುನೋವಿನ ನಡುವೆಯೂ ಪ್ರಶಸ್ತಿ ಗೆದ್ದಿದ್ದ ಸಾರಾ, ಈ ಬಾರಿ ತಾವು ಸಂಪೂರ್ಣ ಫಿಟ್ ಆಗಿರುವುದಾಗಿ ತಿಳಿಸಿದ್ದಾರೆ. ಪುರುಷರ ವಿಭಾಗದಲ್ಲಿ ಹಾರ್ಬರ್ಟ್ ಕಿಬೆಟ್ ಪ್ರಬಲ ಸ್ಪರ್ಧಿಯಾಗಿದ್ದು, ಈ ವರ್ಷ 10ಕೆ ದೂರವನ್ನು ಕೇವಲ 26 ನಿ. 39 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿದ ದಾಖಲೆ ಹೊಂದಿದ್ದಾರೆ. ಇವರೊಂದಿಗೆ ಬುರುಂಡಿಯ ರೊಡ್ರಿಗ್ ಕ್ವಿಜೆರಾ ಮತ್ತು ಇಥಿಯೋಪಿಯಾದ ಗೆಮೆಚು ಡಿಡಾ ಕೂಡ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಕೀನ್ಯಾದ ಬ್ರೆಂಡಾ ಜೆಪ್ಚಿಚಿರರ್ ಸಾರಾ ಅವರಿಗೆ ಕಠಿಣ ಸವಾಲು ನೀಡಲು ಸಜ್ಜಾಗಿದ್ದಾರೆ. ಈ ಜಾಗತಿಕ ಮಟ್ಟದ ಓಟವು ಬೆಂಗಳೂರಿನ ಕ್ರೀಡಾಪ್ರೇಮಿಗಳಲ್ಲಿ ಕುತೂಹಲ ಮೂಡಿಸಿದೆ.

ಹರ್ಮನ್ ಪಡೆಗೆ ಔಪಚಾರಿಕ ಗೆಲುವಿನ ಜಪ

ದಕ್ಷಿಣ ಆಫ್ರಿಕಾ ಟಿ20 ಸರಣಿ

ಜೋಹಾನ್ಸ್‌ಬರ್ಗ್: ಆತಿಥೇಯ ದಕ್ಷಿಣ ಆಫ್ರಿಕಾ ವಿರುದ್ಧ ಶನಿವಾರ ನಡೆಯಲಿರುವ ನಾಲ್ಕನೇ ಮಹಿಳಾ ಟಿ20 ಪಂದ್ಯದಲ್ಲಿ ಭಾರತ ಗೆಲುವಿನ ಹಳಿಗೆ ಮರಳುವ ಇರಾದೆಯೊಂದಿಗೆ ಕಣಕ್ಕಿಳಿಯಲಿದೆ. ಐದು ಪಂದ್ಯಗಳ ಸರಣಿಯಲ್ಲಿ ದಕ್ಷಿಣ ಆಫ್ರಿಕಾ 3-0 ಅಂತರದ ಅಜೇಯ ಮುನ್ನಡೆ ಸಾಧಿಸಿ ಸರಣಿ ಕೈವಶ ಮಾಡಿಕೊಂಡಿದೆ. ಹೀಗಾಗಿ, ಸರಣಿ ಸೋತಿರುವ ಭಾರತಕ್ಕೆ ಈ ಪಂದ್ಯವು ಕೇವಲ ಗೌರವ ಉಳಿಸಿಕೊಳ್ಳುವ ಮತ್ತು ಲಯಕ್ಕೆ ಮರಳುವ ಹೋರಾಟವಾಗಿದೆ.

ಈ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ದೃಷ್ಟಿಯಿಂದ ಭಾರತ ವನಿತೆಯರಿಗೆ ಈ ಪಂದ್ಯ ಮುಖ್ಯವಾಗಿದೆ. ಬ್ಯಾಟಿಂಗ್‌ನಲ್ಲಿ ಸ್ಮೃತಿ ಮಂಧಾನ, ಜೆಮಿಮಾ ರೋಡ್ರಿಗ್ಸ್ ಮತ್ತು ರಿಚಾ ಘೋಷ್ ಅವರು ಸ್ಥಿರ ಪ್ರದರ್ಶನ ನೀಡಬೇಕಿದೆ. ನಾಯಕಿ ಹರ್ಮನ್‌ಪ್ರೀತ್ ಕೌರ್ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಸುಧಾರಣೆಯ ನಿರೀಕ್ಷೆಯಲ್ಲಿದ್ದಾರೆ. ಬೌಲಿಂಗ್‌ನಲ್ಲಿಯೂ ಭಾರತವು ಎದುರಾಳಿಯ ವಿಕೆಟ್ ಪಡೆಯಲು ಕಷ್ಟಪಡುತ್ತಿದೆ. ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೊಲ್ವಾರ್ಡ್ ಅಮೋಘ ಫಾರ್ಮ್‌ನಲ್ಲಿದ್ದು, ಕಳೆದ ಪಂದ್ಯದಲ್ಲಿ ಶತಕ ಸಿಡಿಸಿ ಮಿಂಚಿದ್ದಾರೆ.

ಪಂದ್ಯ : ವಾಂಡರರ್ಸ್ ಕ್ರೀಡಾಂಗಣ, ಜೋಹಾನ್ಸ್‌ಬರ್ಗ್; **ಸಮಯ:** ರಾತ್ರಿ 9:30; **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಇರಾನ್ ತಂಡವನ್ನು ಕೈಬಿಡುವ ಅಮೆರಿಕದ ಪ್ರಸ್ತಾವನೆಗೆ ಇಟಲಿ ಖಂಡನೆ

ಫಿಫಾ ವಿಶ್ವಕಪ್

ರೋಮ್: ಫಿಫಾ ವಿಶ್ವಕಪ್ ಫುಟ್‌ಬಾಲ್‌ನಲ್ಲಿ ಇರಾನ್ ತಂಡವನ್ನು ಕೈಬಿಟ್ಟು ಇಟಲಿಯನ್ನು ಸೇರಿಸಿಕೊಳ್ಳುವ ಅಮೆರಿಕದ ಪ್ರಸ್ತಾವ ಕುರಿತು ಪ್ರತಿಕ್ರಿಯಿಸಿರುವ ಇಟಲಿ ಕ್ರೀಡಾ ಇಲಾಖೆ ಅಮೆರಿಕದ ನಿಲುವನ್ನು ಖಂಡಿಸಿದೆ. ಅಮೆರಿಕದ ವಿಶೇಷ ಪ್ರತಿನಿಧಿ ಪಾವೊಲೊ ಜಾಂಪೋಲಿ, ಇರಾನ್ ಬದಲಿಗೆ ನಾಲ್ಕು ಬಾರಿ ಚಾಂಪಿಯನ್ ಆಗಿರುವ ಇಟಲಿಯನ್ನು ಆಡಿಸಬಹುದೆಂದು ಫಿಫಾ ಅಧ್ಯಕ್ಷರಿಗೆ ಪತ್ರ ಬರೆದಿದ್ದರು. ಇಟಲಿಯ ಕ್ರೀಡಾ ಸಚಿವ ಆಂಡ್ರಿಯಾ ಅಬೋಡಿ ''ಇದು ಅಸಾಧ್ಯ ಮತ್ತು ದುರಾಲೋಚನೆ. ವಿಶ್ವಕಪ್ ಆಡಲು ಅರ್ಹತೆ ಪಡೆಯಬೇಕೇ ಹೊರತು ಇಂತಹ ಮಾರ್ಗಗಳ ಮೂಲಕ ಹೋಗುವುದು ಅವಮಾನಕರ,'' ಎಂದು ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಲೆ.ಶೀ /ಟೆಂಡರು /2026-27/107
ದಿನಾಂಕ 21-04-2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಸಿ.ಐ.ಎಮ್.ಡಿ.ಪಿ ಯೋಜನೆ ಒಟ್ಟು 02 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2026-27/RD/WORK_INDENT26219
2.RDPR/2026-27/RD/WORK_INDENT26221
ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 21-04-2026 ರಿಂದ ದಿನಾಂಕ 29-04-2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 29-04-2026 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 30-04-2026 ರಂದು 17.30 ಗಂಟೆಗೆ ತೆರೆಯುಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/88

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ: 08194-230102, ಇ-ಮೇಲ್ ವಿಳಾಸ : eeubp.d5cta@gmail.com
ಕ್ರ.ಸಂ:ಇಇ/UBP/VJNL/DIV-05/CTA/MANPOWER/2026-27/86
Date: 24.04.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮ್ಯಾನ್ ಪವರ್ ಸೇವೆಯ 01 ಟೆಂಡರ್ ಕರೆಯಲಾಗಿದೆ " Supply of various category of Man power to the office of Chief Engineer, UBP Zone, Superintending Engineer Office, UBP Circle No.2, Executive Engineer, VJNL, UBP Division No.05, Chitradurga and its Sub Division Offices for the year 2026-27 (Indent No. VJNL/2026-27/SE0193)ಟೆಂಡರ್‌ಗಿಟ್ಟ ಮೊತ್ತ ರೂ.89.40 ಲಕ್ಷ ಮೊತ್ತದ ಹೊರಗುತ್ತಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿ ಮೂಲಕ ಅರ್ಹ ಏಜೆನ್ಸಿ/ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. 1) ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:30.04.2026 ಸಂಜೆ 5.00 ಗಂಟೆಯವರೆಗೆ 2) ಟೆಂಡರ್‌ನ್ನು ದಿನಾಂಕ:05.05.2026 ರಂದು ಸಂಜೆ 5.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ 3) ತಾಂತ್ರಿಕ ಬಿಡ್‌ನ್ನು ದಿನಾಂಕ: 06.05.2026 ರಂದು ಸಂಜೆ 5.00 ಗಂಟೆ ನಂತರ ತೆರೆಯಲಾಗುವುದು. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
DIPR/CTA/KSMCA/66/2026-27
ಸಹಿ/- ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭಮೇಯೋ, ವಿಭಾಗ ನಂ.5, ಚಿತ್ರದುರ್ಗ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 4701 ಲೆಕ್ಕ ಶೀರ್ಷಿಕೆಯ ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಸರಪಳಿ 142.277ಕಿ.ಮೀ ಹಾಗೂ 144.356ಕಿ.ಮೀನಲ್ಲಿ ಬರುವ 02 ಸಂಖ್ಯೆಯ ಪೈಪ್ ಲೈನ್ ಸ್ಥಳಾಂತರಿಸುವ ಕಾಮಗಾರಿಗಳ ಟೆಂಡರ್ ಗಿಟ್ಟ ಮೊತ್ತ ಕನಿಷ್ಠ ರೂ.6.22ಲಕ್ಷಗಳ ಹಾಗೂ ಗರಿಷ್ಟ ರೂ.13.03ಲಕ್ಷಗಳ ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ: 27-04-2026 ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ವಿಜಯನಗರ
ಇ-ಮೇಲ್:-E-Mail:rchovijayanagara@gmail.com
ಸಂಖ್ಯೆ:- ಎನ್.ಹೆಚ್.ಎಂ/ಟೆಂಡರ ಪ್ರಕಟಣೆ/ಮಾನವ ಸಂಪನ್ಮೂಲ/20/2025-26
ದಿನಾಂಕ:- 21/04/2026

ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳಡಿಯಲ್ಲಿ ಮಾನವ ಸಂಪನ್ಮೂಲ ವಿವಿಧ ಹುದ್ದೆಗಳ ಸೇವೆಯನ್ನು ಎನ್.ಹೆಚ್.ಎಮ್ ಮಾರ್ಗಸೂಚಿಯನ್ವಯ ನಿಯಮಾನುಸಾರವಾಗಿಹೊರ ಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಹ ಸಂಸ್ಥೆಗಳಿಂದ ಇ-ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಇ-ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ http://eproc.karnataka.gov.in ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯವಿರುತ್ತದೆ. ಆನ್‌ಲೈನ್‌ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:05-08-2025 ಸಂಜೆ 05:30 ಗಂಟೆಯವರೆಗೆ ನಿಗಧ ಪಡಿಸಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕ ದಿಂದ ದಿನಾಂಕ :31-03-2027 ರ ವರೆಗೆ ಮಾತ್ರ ಇರುತ್ತದೆ.
ಇ-ಪ್ರೋಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ
01.ಇ-ಪೋರ್ಟಲ್‌ನಲ್ಲಿಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ: 21-04-2026 10.00am. 02.ಟೆಂಡರ್ ಫಾರಂಗಳನ್ನು ಸಲ್ಲಿಸುವಕೊನೆಯ ದಿನಾಂಕ: 29-05-2026 11.00pm. 03.ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ: 02-05-2026 5.30 pm. 04.ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್): 30-05-2026 11.30am. 05.ಟೆಂಡರ್‌ತೆರೆಯುವ ದಿನಾಂಕ(ಆರ್ಥಿಕ ಬಿಡ್): 04-06-2026 11.30am. 06.ಅಂದಾಜು ಟೆಂಡರ್ ಮೊತ್ತ: 2,33,72,580/-. 07.ಇ.ಎಂ.ಡಿಮೊತ್ತ: 4,67,452/-. 08.ಟೆಂಡರ್‌ತೆರೆಯುವ ಪ್ರಾಧಿಕಾರ: DHO Office Vijayanagara
ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ವಿಜಯನಗರ ಜಿಲ್ಲೆ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯ ಬಹುದಾಗಿದೆ.ಮೊ.ಸಂಖ್ಯೆ:- 7892724423
ಸಹಿ/-ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/45

ಎಡಗೈ-ಬಲಗೈ ಪಟ್ಟು ಸಡಿಲ | ದಲಿತ ಸಚಿವರ ಒಮ್ಮತದ ತೀರ್ಮಾನಕ್ಕೆ ಸಿಎಂ ಫುಲ್ ಖುಷ್

ಒಳಮೀಸಲು ಕಗ್ಗಂಟು ಸುಖಾಂತ್ಯ | ಜಾರಿಯಾಯಿತು ಸಮಪಾಲು ಸೂತ್ರ

ಅಲೆಮಾರಿಗಳಿಗೂ ನ್ಯಾಯ | ಸ್ಪೃಶ್ಯ ಗುಂಪಿನಲ್ಲೇ ಶೇ.20ರಷ್ಟು 'ವಿಶೇಷ' ಒಳಮೀಸಲು

ಕೊಡು-ಕೊಳ್ಳುವ ಧೋರಣೆಗೆ ಜಯ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಸರಕಾರದ ಪಾಲಿಗೆ ಸವಾಲಾಗಿದ್ದ ಪರಿಶಿಷ್ಟ ಜಾತಿ ಒಳ ಮೀಸಲು ಕಗ್ಗಂಟು ಬಿಡಿಸುವಲ್ಲಿ ವಿಶೇಷ ಸಚಿವ ಸಂಪುಟ ಸಭೆ ಯಶಸ್ವಿಯಾಗಿದೆ. ಎಡಗೈ, ಬಲಗೈ ಬಿಗಿ ಪಟ್ಟು ಹಾಗೂ ಆಲೆಮಾರಿಗಳ ಅನ್ಯಾಯದ ಕೂಗಿಗೆ ಒಮ್ಮತದ ಪರಿಹಾರ ಸೂತ್ರ ಹುಡುಕುವ ಸುದೀರ್ಘ ಪ್ರಯತ್ನಕ್ಕೆ ಕೊನೆಗೂ ಯಶ ಸಿಕ್ಕಿತು.

ಪರಿಶಿಷ್ಟ ಜಾತಿಯ 101 ಉಪಜಾತಿಗಳಿಗೆ ಸಂವಿಧಾನಬದ್ಧ ಮೀಸಲಿನಲ್ಲಿ ಸಮಾನ ಅವಕಾಶ ಸಿಗುವಂತಾಗಲು ಒಳ ಮೀಸಲು ಕಗ್ಗಂಟು ಬಿಡಿಸಲು ಸರಣಿ ಪ್ರಯತ್ನ ನಡೆದಿದ್ದವು. ಶುಕ್ರವಾರ ಬೆಳಗ್ಗೆ ದಲಿತ ಸಚಿವರು ಸಭೆ ಮಾಡಿ ತಮ್ಮಲ್ಲೇ ಕೊಡು ಕೊಳ್ಳುವ ಧೋರಣೆಯೊಂದಿಗೆ ಸಮ್ಮತಾಭಿಪ್ರಾಯಕ್ಕೆ ಬಂದಿದ್ದರು. ವಿಶೇಷ ಸಂಪುಟ ಸಭೆಗೆ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕೊಠಡಿಯಲ್ಲಿ ಮತ್ತೊಂದು ಸುತ್ತಿನಲ್ಲಿ ಎಡಗೈ, ಬಲಗೈ ಮತ್ತು ಸ್ಪೃಶ್ಯ ಜಾತಿ ಈ ಮೂರೂ ಗುಂಪುಗಳನ್ನು ಪ್ರತಿನಿಧಿಸುವ ಸಚಿವರ ಅಭಿಪ್ರಾಯಗಳನ್ನು ಪಡೆದುಕೊಂಡರು. ಬಳಿಕ ಶುರುವಾದ ಸಂಪುಟ ಸಭೆಯಲ್ಲಿ ಒಮ್ಮತದ ನಿರ್ಣಯಕ್ಕೆ ಬರಲಾಯಿತು.

ಶೇ.6ರ ಒಳ ಮೀಸಲು ಬೇಡಿಕೆಯಿಂದ ಹಿಂದೆ ಸರಿಯುವುದಿಲ್ಲ ಎಂಬ ಎಡಗೈ (ಮಾದಿಗ) ಸಮುದಾಯದ ಬೇಡಿಕೆ ಒಂದೆಡೆಯಾದರೆ, ಸಮಪಾಲು ಬಿಟ್ಟುಕೊಡುವುದಿಲ್ಲ ಎಂದು ಬಿಗಿ ಪಟ್ಟು ಹಿಡಿದಿದ್ದ ಬಲಗೈ (ಛಲವಾದಿ) ಸಮುದಾಯವು ನ್ಯಾ.ನಾಗಮೋಹನ ದಾಸ್ ಆಯೋಗದ ವರದಿ ತಿರಸ್ಕರಿಸಬೇಕು ಎಂದು ಒತ್ತಾಯಿಸಿತ್ತು. ಮತ್ತೊಂದೆಡೆ ಸಂವಿಧಾನಬದ್ಧ ಮೀಸಲು ಅವಕಾಶದಿಂದ ಸಂಪೂರ್ಣ ವಂಚಿತವಾಗಿದ್ದೇವೆ ಎಂದು ಆಲೆಮಾರಿ ಸಣ್ಣಪುಟ್ಟ ಜಾತಿಗಳ ಅಸಹನೆ ಕುದಿಯುತ್ತಿತ್ತು. ಈ ಎಲ್ಲರ ಹಕ್ಕೊತ್ತಾಯಗಳನ್ನು ಸರಿದೂಗಿಸಿ ಒಮ್ಮತದ ಪರಿಹಾರ ಸೂತ್ರ ರೂಪಿಸುವ ಗಂಭೀರ ಪ್ರಯತ್ನವನ್ನು ರಾಜ್ಯ ಸರಕಾರ ಮಾಡಿತ್ತು.

ತಮ್ಮ ತಮ್ಮ ಸಮುದಾಯದ ಸಂಘಟನೆಗಳು, ಧಾರ್ಮಿಕ ಮುಖಂಡರೆಲ್ಲರ ಅಭಿಪ್ರಾಯವನ್ನು ಪಡೆದು, ಸಮಗ್ರವಾಗಿ ಚರ್ಚಿಸಿ ಸರ್ವಸಮ್ಮತದ ತೀರ್ಮಾನವನ್ನು ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಎಚ್.ಸಿ.ಮಹದೇವಪ್ಪ ಹೇಳಿದರು.

ಅಲೆಮಾರಿಗಳಿಗೆ ಸಮಾಧಾನ

ಸ್ಪೃಶ್ಯ ಜಾತಿಗಳಾದ ಕೊರಮ, ಕೊರಚ, ಲಂಬಾಣಿ ಮತ್ತು ಭೋವಿಗಳ ಗುಂಪಿನಲ್ಲಿ ಸೇರಿರುವ 59 ಅಲೆಮಾರಿಗಳ ಜಾತಿಗಳಿಗೆ ಒಳ ಮೀಸಲು ನಿಗದಿ ವಿಚಾರದಲ್ಲೂ ಆತಂಕವಿತ್ತು. ಈ ಸಣ್ಣಪುಟ್ಟ ಜಾತಿಗಳನ್ನು ಪರಿಶಿಷ್ಟ ಜಾತಿಯ ಮುಖ್ಯವಾಹಿನಿಗೆ ತರುವ ಆಶಯಕ್ಕೆ ಸಂಪುಟ ಉದಾರತೆ ತೋರಿತು. ಅಂದರೆ ಮುಖ್ಯ ಕಾರ್ಯದರ್ಶಿ ಆಧ್ಯಕ್ಷತೆಯ ತಾಂತ್ರಿಕ ಸಮಿತಿ ಎ, ಬಿ ಮತ್ತು ಸಿ ಗುಂಪುಗಳಿಗೆ ಕ್ರಮವಾಗಿ ಶೇ.5.3 ಮತ್ತು ಶೇ.5.3 ಹಾಗೂ ಶೇ.4.4 ಒಳ ಮೀಸಲು ನಿಗದಿಪಡಿಸಲು ಮಾಡಿದ್ದ ಶಿಫಾರಸಿನಲ್ಲಿ ಅಲ್ಪ ಬದಲಾವಣೆಗೆ ಸಂಪುಟದ ಎಡಗೈ ಮತ್ತು ಬಲಗೈ ಸಚಿವರೂ ಸಮ್ಮತಿಸಿದರು. ಅಂದರೆ ಹಿಂದಿನ ಬಿಜೆಪಿ ಸರಕಾರದಲ್ಲೇ ನಿಗದಿಯಾಗಿದ್ದಂತೆ ಶೇ.4.5 ಒಳ ಮೀಸಲು ನಿಗದಿ ಆಗಬೇಕೆಂಬ ಅಲೆಮಾರಿಗಳ ಬೇಡಿಕೆಗೆ ಮನ್ನಣೆ ನೀಡಲಾಯಿತು. ಅದಕ್ಕಾಗಿ ಎಡಗೈ ಮತ್ತು ಬಲಗೈ ಸಮುದಾಯಗಳಿಗೆ ತಾಂತ್ರಿಕ ಸಮಿತಿ ಶಿಫಾರಸು ಮಾಡಿದ್ದ ತಲಾ ಶೇ.5.3 ಬದಲಿಗೆ ಶೇ.5.25 ಒಳ ಮೀಸಲು ನಿಗದಿ ಮಾಡಲಾಯಿತು. ಜತೆಗೆ ನಾಲ್ಕು ಪ್ರಬಲ ಸ್ಪೃಶ್ಯ ಜಾತಿಗಳಾದ ಕೊರಮ, ಕೊರಚ, ಲಂಬಾಣಿ ಮತ್ತು ಬೋವಿಗಳ ಗುಂಪಿನಲ್ಲಿ ಉದ್ಯೋಗ ಮತ್ತು ಶಿಕ್ಷಣದ ಅವಕಾಶ ಪಡೆದುಕೊಳ್ಳುವುದು ಕಷ್ಟ ಎಂಬ ಅಲೆಮಾರಿಗಳ ಕೊರಗಿಗೂ ಸಂಪುಟದಲ್ಲಿ ಪರಿಹಾರ ಸೂತ್ರ ಹುಡುಕಲಾಯಿತು. 'ಸಿ' ಗುಂಪಿಗೆ ನಿಗದಿಯಾಗಿರುವ ಶೇ.4.5 ಒಳ ಮೀಸಲಿನಲ್ಲಿ ಈ 59 ಸಣ್ಣಪುಟ್ಟ ಜಾತಿಗಳ ಅಲೆಮಾರಿಗಳಿಗೆ ಶೇ.20 ಒಳಮೀಸಲು ಕಲ್ಪಿಸುವ ತೀರ್ಮಾನಕ್ಕೆ ಬರಲಾಯಿತು. ಉದಾಹರಣೆಗೆ 'ಸಿ' ಗುಂಪಿಗೆ ನೇಮಕ, ಬಡ್ತಿಯಲ್ಲಿ 5 ಹುದ್ದೆಗಳು ಲಭ್ಯವಿದ್ದರೆ, ಒಂದು ಹುದ್ದೆ ಕಡ್ಡಾಯವಾಗಿ ಅಲೆಮಾರಿಗಳಿಗೆ ಸಿಗಲಿದೆ.

ಎಸ್ಸಿ ಜನರಲ್

ಒಂದು ವೇಳೆ ನಿಗದಿತ ಒಳ ಮೀಸಲಿನಂತೆ ಅಲೆಮಾರಿಗಳಲ್ಲಿ ಅರ್ಹ ಅಭ್ಯರ್ಥಿಗಳು ಇಲ್ಲವಾದರೆ, ಅಂತಹ ಸ್ಥಾನ ಅಥವಾ ಹುದ್ದೆಯನ್ನು 'ಪರಿಶಿಷ್ಟ ಜಾತಿ -ಸಾಮಾನ್ಯ' ಎಂದು ಪರಿಗಣಿಸುವುದು. ಈ ಸ್ಥಾನಕ್ಕೆ ಪರಿಶಿಷ್ಟ ಎ, ಬಿ ಮತ್ತು ಸಿ ಗುಂಪಿನ ಯಾವುದೇ ಅರ್ಹರನ್ನು ಪರಿಗಣಿಸುವ ತೀರ್ಮಾನಕ್ಕೆ ಬರಲಾಗಿದೆ.

ಮಾತು ಉಳಿಸಿಕೊಂಡ ಸಿಎಂ !

ಸುದ್ದಿಗೋಷ್ಠಿಯಲ್ಲಿ ಸಂಪುಟದ ತೀರ್ಮಾನ ಪ್ರಕಟಿಸುವಾಗ ಸಿಎಂ ಸಿದ್ದರಾಮಯ್ಯ ಅವರ ಮುಖದಲ್ಲಿ ಮಂದಹಾಸವಿತ್ತು. 'ಸ್ವಲ್ಪ ತಡವಾದರೂ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ' ಎಂದು ಅವರು ಖುಷಿ ಹಂಚಿಕೊಂಡರು. ಸುದ್ದಿ ಮುಗಿಯುತ್ತಿದ್ದಂತೆ ಮಾಜಿ ಸಚಿವ ಎಚ್. ಆಂಜನೇಯ ಅವರು ಸಿಎಂಗೆ ಶಾಲು ಹೊದಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಕಗ್ಗಂಟು ಪರಿಹಾರದ ಹಾದಿ...

- ಚಿತ್ರದುರ್ಗ ಸಮಾವೇಶದಲ್ಲಿ ಕಾಂಗ್ರೆಸ್ ಪಕ್ಷದಿಂದ ಒಳಮೀಸಲು ಜಾರಿಗೆ ಸಂಕಲ್ಪ
- 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಒಳಮೀಸಲು ಭರವಸೆ ನೀಡಿದ ಕಾಂಗ್ರೆಸ್
- 2024ನೇ ಆಗಸ್ಟ್ 1ರಂದು ರಾಜ್ಯಗಳಿಗೆ ಒಳಮೀಸಲು ನೀಡಲು ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್
- ಬಳಿಕ ಒಳಮೀಸಲು ನೀಡಲು1 ರಾಜ್ಯ ಸರಕಾರದಿಂದ ನ್ಯಾ.ನಾಗಮೋಹನದಾಸ್ ಆಯೋಗ ರಚನೆ
- ನಾಗಮೋಹನದಾಸ್ ವರದಿ ಶಿಫಾರಸಿನಂತೆ ಮೀಸಲು ಪ್ರಮಾಣ ಶೇ.56ಕ್ಕೆ ನಿಗದಿ, ಎಸ್ಸಿಗೆ ಶೇ.17 ಮೀಸಲು
- ರೋಸ್ಟರ್ ಗೊಂದಲದಿಂದ ಶೇ.17ರ ಮೀಸಲಿಗೆ ಹೈಕೋರ್ಟ್ ತಡೆ, ಎದುರಾಯ್ತು ತಾಂತ್ರಿಕ ಸಮಸ್ಯೆ
- ಅಂತಿಮವಾಗಿ ಶೇ.15ರ ಮಿತಿಯೊಳಗೆ 5.25 : 5.25 : 4.5 ಅನುಪಾತದ ಹಂಚಿಕೆ

ಪರಿಶಿಷ್ಟ ಒಳ ಮೀಸಲು ವಿಚಾರದಲ್ಲಿ ಮತ್ತೊಂದು 'ಕರ್ನಾಟಕ ಮಾಡೆಲ್' ಸೃಷ್ಟಿ ಮಾಡಿದ್ದೇವೆ. ಯಾರಿಗೂ ಅನ್ಯಾಯವಾಗದಂತೆ ನಿರ್ಣಯ ಮಾಡಲಾಗಿದೆ.

- ಡಾ.ಜಿ.ಪರಮೇಶ್ವರ ಗೃಹ ಸಚಿವ

ಎಡಗೈ ಸಮುದಾಯದ 40 ವರ್ಷಗಳ ಹೋರಾಟಕ್ಕೆ ನ್ಯಾಯ ಸಿಕ್ಕಿದೆ. ರಾಜ್ಯದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ ಇದಾಗಿದೆ.

- ಕೆ.ಎಚ್.ಮುನಿಯಪ್ಪ ಆಹಾರ ಸಚಿವ

ಎಲ್ಲ ಉಪ ಜಾತಿ ಸಂಘಟನೆಗಳ ಅಭಿಪ್ರಾಯ ಪಡೆದು ಚರ್ಚಿಸಿದ ಬಳಿಕ ಒಳ ಮೀಸಲು ನಿಗದಿಯಾಗಿದೆ. ಸರಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ.

- ಡಾ. ಎಚ್.ಸಿ.ಮಹದೇವಪ್ಪ ಸಮಾಜ ಕಲ್ಯಾಣ ಸಚಿವ

ಬಿಜೆಪಿ ಸರಕಾರದಲ್ಲಿ ಒಟ್ಟಾರೆ ಶೇ.17 ಮೀಸಲು ಮಿತಿಯೊಳಗೆ 'ಸಿ' ಗುಂಪಿಗೆ ಶೇ.4.5 ಒಳ ಮೀಸಲು ನೀಡಲಾಗಿತ್ತು. ಈಗ ಶೇ.15 ಒಟ್ಟಾರೆ ಮೀಸಲು ಮಿತಿಯಲ್ಲೂ 'ಸಿ' ಗುಂಪಿಗೆ ಶೇ.4.5 ಒಳ ಮೀಸಲು ಮಾಡಿದ್ದೇವೆ.

- ಶಿವರಾಜ್ ತಂಗಡಗಿ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವ

ದಲಿತರಿಗೆ ಸರಕಾರ ಎಸಗಿದ ದ್ರೋಹ ಎಂದ ಬಿಜೆಪಿ

ಪರಿಶಿಷ್ಟ ಜಾತಿಗಳಿಗೆ ಮೀಸಲನ್ನು ಜನಸಂಖ್ಯೆಗೆ ಅನುಗುಣವಾಗಿ ಶೇ.17ಕ್ಕೆ ಏರಿಸಲು ಸಂವಿಧಾನಬದ್ಧ ಅವಕಾಶವಿದ್ದರೂ ಕಾಂಗ್ರೆಸ್ ಸರಕಾರ ಕೇವಲ ಶೇ.15ರ ಆಧಾರದ ಮೇಲೆ ತೀರ್ಮಾನಿಸಿರುವುದು ಏಕಪಕ್ಷೀಯ ಮತ್ತು ದಲಿತ ವಿರೋಧಿ ನೀತಿಯಾಗಿದೆ. ನೂತನ ಒಳ ಮೀಸಲು ಹಂಚಿಕೆಯು ದಲಿತ ಸಮುದಾಯಕ್ಕೆ ಮಾಡಿದ ಅತಿದೊಡ್ಡ ವಂಚನೆ.

-ಛಲವಾದಿ ನಾರಾಯಣಸ್ವಾಮಿ ಪ್ರತಿಪಕ್ಷ ನಾಯಕ, ವಿಧಾನ ಪರಿಷತ್

ಬಿಜೆಪಿ ಸರಕಾರವಿದ್ದಾಗ ಪರಿಶಿಷ್ಟ ಜಾತಿಗೆ ಶೇ.17ರಷ್ಟು ಮೀಸಲು ನೀಡಿತ್ತು. ನ್ಯಾಯಾಲಯಕ್ಕೆ ಈ ಬಗ್ಗೆ ಮನವರಿಕೆ ಮಾಡಬೇಕಿತ್ತು. ಅದರ ಬದಲು ಸರಕಾರ ಎಸ್ಕೇಪ್ ಸೂತ್ರ ಅನುಸರಿಸಿದ್ದು, ಇದರಿಂದ ಪರಿಶಿಷ್ಟ ಸಮುದಾಯಕ್ಕೆ ನಿಜವಾದ ಪ್ರಯೋಜನ ದೊರೆತಿಲ್ಲ. 52 ಜಾತಿಗಳು ಸೇರಿದಂತೆ ಯಾವುದೇ ಜಾತಿ ಸಮುದಾಯಗಳನ್ನು ಕರೆದು ಚರ್ಚೆ ಮಾಡಿಲ್ಲ.

- ಆರ್.ಅಶೋಕ್ ಪ್ರತಿಪಕ್ಷ ನಾಯಕ, ವಿಧಾನಸಭೆ

ನೇಮಕಾತಿ ಹಾದಿ ಸುಗಮ

56,432 ಹುದ್ದೆಗಳ ಭರ್ತಿಗೆ ಸಚಿವ ಸಂಪುಟ ಗ್ರೀನ್ ಸಿಗ್ನಲ್

■ ಮೀಸಲು ಹೆಚ್ಚಳಕ್ಕೆ ಈಗಲೂ ಬದ್ಧ, ಹೆಚ್ಚುವರಿ ಶೇ.6ರಷ್ಟು ಮೀಸಲು ಇನ್ಮುಂದೆ ಬ್ಯಾಕ್‌ಲಾಗ್

ಬೆಂಗಳೂರು: ಒಳ ಮೀಸಲು ಸಮಸ್ಯೆ ಬಗೆಹರಿದಿದೆ. ಪರಿಶಿಷ್ಟ ಜಾತಿಯ ಎ, ಬಿ ಮತ್ತು ಸಿ ಈ ಮೂರು ಗುಂಪುಗಳಿಗೆ ಕ್ರಮವಾಗಿ ಶೇ.5.25, ಶೇ.5.25 ಹಾಗೂ ಶೇ.4.5ರ ಒಳ ಮೀಸಲು ಪ್ರಮಾಣ ನಿಗದಿ ಸಂಬಂಧ ಅಧಿಸೂಚನೆ ಹೊರಡಿಸಿ ಖಾಲಿ ಹುದ್ದೆಗಳ ನೇರ ನೇಮಕ ಪ್ರಕ್ರಿಯೆಯನ್ನು ತಕ್ಷಣದಿಂದ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸರಕಾರದ ನಾನಾ ಇಲಾಖೆಗಳ ಖಾಲಿ ಹುದ್ದೆಗಳು ಹಲವು ವರ್ಷಗಳಿಂದ ಭರ್ತಿ ಆಗಿರಲಿಲ್ಲ. ಒಟ್ಟು 56,432 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಮುಂದಾಗಿರುವುದು. ಉದ್ಯೋಗಾಕಾಂಕ್ಷಿಗಳಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ. ಈ ಹಿಂದೆ ಪರಿಶಿಷ್ಟ ಜಾತಿಯ ಶೇ.17ಕ್ಕೆ ಮೀಸಲು ಪ್ರಮಾಣ ಹೆಚ್ಚಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ತಕ್ಷಣ ವಾಪಸ್ ಪಡೆಯಲಾಗುವುದು ಎಂದರು.

ಎಸ್‌ಸಿ, ಎಸ್‌ಟಿ ಶೇ.24ಕ್ಕೆ ಈಗಲೂ ಬದ್ಧ : ಪರಿಶಿಷ್ಟ ಜಾತಿಗೆ ಶೇ.17, ಪರಿಶಿಷ್ಟ ಪಂಗಡಕ್ಕೆ ಶೇ.7 ಹೆಚ್ಚಿಸಿ ಒಟ್ಟು ಮೀಸಲು ಪ್ರಮಾಣವನ್ನು ಶೇ.56ಕ್ಕೆ ನಿಗದಿಪಡಿಸಿದ್ದ ಈ ಮುಂಚಿನ ಕ್ರಮಕ್ಕೆ ಸರಕಾರ ಈಗಲೂ ಬದ್ಧವಾಗಿದೆ. ಆದರೆ, ಈ ತೀರ್ಮಾನಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಹೈಕೋರ್ಟ್ ಈ ವಿಚಾರದಲ್ಲಿ ಅಂತಿಮ ತೀರ್ಮಾನ ನೀಡುವ ವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಕ್ರಮವಾಗಿ ಶೇ.2 ಮತ್ತು ಶೇ.4 ಮೀಸಲು ಪ್ರಮಾಣ ಹೆಚ್ಚಿಸಿ ನಿಗದಿಪಡಿಸಿದ್ದ ಒಟ್ಟು ಶೇ.6 ಮೀಸಲು ಪ್ರಮಾಣವನ್ನು 'ಬ್ಯಾಕ್‌ಲಾಗ್' ಎಂದು ಪರಿಗಣಿಸಲು ಸಂಪುಟ ಸಭೆ ತೀರ್ಮಾನಿಸಿದೆ.